The Hon'ble Chief Minister may please commence his reply.

BUDGET ESTIMATES FOR 1966-67—DEMANDS FOR GRANTS

DEMANDS NOS: 20, 38 AND 51 (*contd.*)

ಶ್ರೀ ಎಸ್. ನಿಜಲಿಂಗಪ್ಪ :—ಸ್ವಾಮಿ, ವ್ಯವಸಾಯದ ವಿಚಾರದಲ್ಲಿ ಈ ಸಭೆಯುಮುಂದಿಟ್ಟಿರತಕ್ಕ ಕೋರಿಕೆಗಳ ಬಗ್ಗೆ ಅನಿರೀಕ್ಷಿತವಾಗಿ ಈ ಸಭೆಯಲ್ಲಿ ಟೀಕೆಗಳ ಅಭಾವ ಕಂಡುಬಂದಿದೆ. ನಿಜವಾಗಿಯೂ ಇದು ಸಂತೋಷದ ವಿಚಾರ. ಸಭಾಪತಿಗಳು ಅಪ್ಪಣೆಕೊಡಿಸಿದಂತೆ ವ್ಯವಸಾಯ ಇಲಾಖೆಯಲ್ಲಿ ಅದರಲ್ಲೂ ಈ ವರ್ಷದಲ್ಲಿ ಆಗಿರತಕ್ಕ ಮುನ್ನಡೆ ಹಿಂದೆ ಎಂದೂ ಆಗಿರಲಿಲ್ಲ ಎಂದು ಧೈರ್ಯವಾಗಿ, ಸ್ಪಷ್ಟವಾಗಿ ಹೇಳಬಹುದು. ಮೈಸೂರಿಗೆ ಬಹಳ ಕೊರತೆಗಳು ಇವೆ. ಪೂರ್ವದಲ್ಲಿ ಸಾಕಷ್ಟು ಮಳೆ ಇಲ್ಲ. ಆದರೆ ಪಶ್ಚಿಮ ಘಟ್ಟದಲ್ಲಿ ಸುಮಾರು 250ರಿಂದ 300 ಇಂಚಿನವರೆಗೂ ಮಳೆ ಆಗುತ್ತದೆ. ಪೂರ್ವಕ್ಕೆ ಬರುತ್ತಾ ಮಳೆಯ ಅಭಾವಕ್ಕೆ ಸುಮಾರು 10—12 ಜಿಲ್ಲೆಗಳು ಯಾವಾಗಲೂ ಒಳಗಾಗುತ್ತವೆ. ಆ ಜಿಲ್ಲೆಗಳು ಹಾಗಾಗಿವೆ ; ನಿಜ. ಆ ಪ್ರದೇಶದಲ್ಲಿ ಉತ್ಕೃಷ್ಟವಾದ ಭೂಮಿ ಇದ್ದರೂ ಕೂಡ ಮಳೆಯ ಅಭಾವದಿಂದ ಅನೇಕ ಸಾರಿ ಆ ಪ್ರದೇಶದ ಜನಗಳು ಕಷ್ಟಕ್ಕೆ ಒಳಗಾಗಿದ್ದಾರೆ. ಕ್ಷಾಮದ ಬಾಧೆಗೆ ಈಡಾಗಿದ್ದಾರೆ. ಅಲ್ಲಿ ಅಭಾವ ಪರಿಸ್ಥಿತಿ ಅನೇಕಸಾರಿ ತಲೆದೋರುತ್ತಿರುತ್ತದೆ. ಇದನ್ನು ಗಮನಿಸುವುದು ಅತ್ಯಂತ ಅವಶ್ಯಕ. ಪೂರ್ವಕಾಲದಲ್ಲಿ ಜನಸಂಖ್ಯೆ ಕಡಿಮೆ ಇತ್ತು. ನಮ್ಮ ಪೂರ್ವಿಕರು ಅನೇಕ ಕೆರೆಗಳನ್ನು ಕಟ್ಟಿಸಿದ್ದಾರೆ. ಅದರಲ್ಲೂ ಹಳೆಯ ಮೈಸೂರು ಪ್ರದೇಶದಲ್ಲಿ ಚಿಕ್ಕ ಚಿಕ್ಕ ಕೆರೆಗಳು ಸುಮಾರು 28 ಸಾವಿರ, 30 ಸಾವಿರ ಇವೆ. ಆದರೆ ಆ ಕೆರೆಗಳಿಂದ ಆಗತಕ್ಕಂಥ ನೀರಾವರಿ ಪ್ರದೇಶ ಬಹಳ ಕಡಿಮೆ ಇದೆ. ನಮ್ಮ ಸಂಸ್ಥಾನದ ಒಟ್ಟು ವಿಸ್ತೀರ್ಣ 4 ಕೋಟಿ 65 ಲಕ್ಷ ಎಕರೆಗಳಿವೆ. ಇದರಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಜಮೀನು 289 ಲಕ್ಷ ಎಕರೆಗಳಿವೆ. ಇದರಲ್ಲಿ 15 ಲಕ್ಷ ಎಕರೆ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿದ್ದರೂ ಕೂಡ ಅದರಲ್ಲಿ ವ್ಯವಸಾಯ ನಡೆಯುತ್ತಿಲ್ಲ. ಇನ್ನು ಬಾಕಿ 2 ಕೋಟಿ 75 ಲಕ್ಷ ಎಕರೆ ಜಮೀನಿನಲ್ಲಿ ವ್ಯವಸಾಯ ನಡೆಯುತ್ತಿದೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಕೂಡ, ನಾವು ಸಾಕಷ್ಟು ಉತ್ಪತ್ತಿಯನ್ನು ಮಾಡುತ್ತಿದ್ದರೂ ಕೂಡ ನಮ್ಮಲ್ಲಿ ಆಹಾರದ ಕೊರತೆ ಇದೆ. ಅದರಲ್ಲೂ ಅಕ್ಕಿಯ ಕೊರತೆ ಹೆಚ್ಚಾಗಿದೆ. ಒಟ್ಟು ಈಗಿನ ಹೊಸ ಮೈಸೂರಿನ ಆಹಾರದ ಉತ್ಪತ್ತಿಯನ್ನು ತೆಗೆದುಕೊಂಡರೆ ನಮ್ಮಲ್ಲಿ ಕೊರತೆ ಇರುವುದು ಸ್ವಲ್ಪ ಹೆಚ್ಚು ಕಡಿಮೆ 3½ ಲಕ್ಷ ಅಥವಾ 4 ಲಕ್ಷ ಟನ್ ಆಹಾರದ ಕೊರತೆ ಇದೆ. ಹತ್ತಿಯನ್ನು ಉತ್ಪತ್ತಿ ಮಾಡುವುದರಲ್ಲಿ ನಾವು 3 ನೆಯವರೋ ಅಥವಾ 4 ನೆಯವರೋ ಆಗುತ್ತೇವೆ. ಎಣ್ಣೆ ಬೀಜದ ಉತ್ಪಾದನೆಯಲ್ಲಿ 3 ಅಥವಾ 4 ನೆಯವರು ಆಗುತ್ತೇವೆ. ನಮ್ಮ ದೇಶದಲ್ಲಿ ಉತ್ಕೃಷ್ಟವಾದ ನೆಲ ಇದ್ದರೂ ಕೂಡ ನೀರಾವರಿ ಪ್ರದೇಶ ಕಡಿಮೆ ಇದೆ. ಹೆಚ್ಚು ಭಾಗ ಮಳೆಯ ನೀರಿನ ಆಶ್ರಯದಿಂದಲೇ ವ್ಯವಸಾಯಮಾಡಿ ಬೆಳೆಯನ್ನು ಬೆಳೆಯಬೇಕಾಗಿದೆ. ಈಗ ಮೈಸೂರಿನಲ್ಲಿ ಶೇಕಡ 9ಕ್ಕಿಂತ ಕಡಿಮೆ ನೀರಾವರಿ ಪ್ರದೇಶ ಇದೆ. ಎಲ್ಲಿಯವರೆಗೆ ನಮ್ಮ ದೇಶದಲ್ಲಿ ಹರಿಯತಕ್ಕ ನದಿಗಳು ಮತ್ತು ಹೊಳೆಗಳನ್ನು ಸರಿಯಾಗಿ ಉಪಯೋಗ ಮಾಡಿಕೊಂಡು ವ್ಯವಸಾಯಕ್ಕೆ ಸಾಕಷ್ಟು ನೀರನ್ನು ಒದಗಿಸುವುದಿಲ್ಲವೋ ಅಲ್ಲಿಯವರೆಗೂ ನಮ್ಮ ಅಭಾವ ಕಡಿಮೆಯಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಮುಖ್ಯವಾಗಿ ನಮ್ಮ ದೇಶದಲ್ಲಿ ಹತ್ತಿಬೆಳೆಯು ಚೆನ್ನಾಗಿ ಆಗುತ್ತಿದೆ. ಈಗ ನಮ್ಮ ರಾಜ್ಯದಲ್ಲಿ ಸುಮಾರು 20-25 ಹತ್ತಿಯ ಗಿರಣಿಗಳು ಇವೆ, ಅವುಗಳಲ್ಲಿ ಕೆಲಸ ನಡೆಯುತ್ತಿದೆ. ಇನ್ನೂ 25 ಗಿರಣಿಗಳು ನಡೆಯುವುದಕ್ಕೆ ಅವಕಾಶವಿದೆ. ಈ ಹತ್ತಿ ಬೆಳೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಟ್ಟರೆ ನಮ್ಮಲ್ಲಿ ಸಾಕಷ್ಟು ಹತ್ತಿ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶವಿದೆ. ಈಗ ಎರಡು ವರ್ಷಗಳಿಂದ ಮಳೆಯ ಅಭಾವ ಬೇರೆ ಉಂಟಾಗಿದೆ. ಹತ್ತಿ ಬೆಳೆಯುವ ಪ್ರದೇಶದಲ್ಲಿ ಶೇಕಡಾ 1 ಅಥವಾ 2ರಷ್ಟು ಪ್ರದೇಶ ಮಾತ್ರ ನೀರಾವರಿಗೆ ಒಳಗಾಗಿದೆ. ಇನ್ನು ಉಳಿದ ಪ್ರದೇಶದಲ್ಲಿ ಮಳೆಯ ಆಧಾರದ ಮೇಲೆಯೇ ಬೆಳೆಯನ್ನು ಬೆಳೆಯಬೇಕಾಗಿದೆ. ಮಳೆಯ ಅಭಾವ ಮತ್ತು ಹಣದ ಅಭಾವದಿಂದ ಆಹಾರದ ಉತ್ಪಾದನೆಯಲ್ಲಿ ಎಷ್ಟು ಪ್ರಗತಿಯನ್ನು ಸಾಧನೆ ಮಾಡಬೇಕಾಗಿತ್ತೋ ಅಷ್ಟು ಪ್ರಗತಿಯನ್ನು ಸಾಧನೆ ಮಾಡಿಲ್ಲ. ಎಣ್ಣೆ ಬೀಜವನ್ನು ಉತ್ಪಾದನೆ ಮಾಡುವುದರಲ್ಲಿ ನಾವು ಸಾಕಷ್ಟು ಪ್ರಗತಿಯನ್ನು ಪಡೆದಿದ್ದೇವೆ. ಆದರೆ ಆಹಾರದ ಉತ್ಪಾದನೆಯಲ್ಲಿ ಸಾಕಷ್ಟು ಮುಂದುವರಿಯುವುದಕ್ಕೆ ಸಹಾಯ ಎಷ್ಟು ಬೇಕೋ ಅಷ್ಟು ಸಿಕ್ಕುತ್ತಾ ಇಲ್ಲ. 1961 ಮತ್ತು 1962ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ 39 ಲಕ್ಷ ಚಿಲ್ಲರೆ ಟನ್ ಆಹಾರ ಉತ್ಪತ್ತಿಯಾಗಿದೆ. 1965-66ರಲ್ಲಿ 46 ಲಕ್ಷ ಟನ್ ಆಹಾರಧಾನ್ಯ ಉತ್ಪಾದನೆಯಾಗಿದೆ. ಅಷ್ಟೆ ಆಹಾರ ನಮಗೆ ಸಾಕಾಗುವುದಿಲ್ಲ ಎಂದು ಕಾಣುತ್ತದೆ. ನಮಗೆ ಎಷ್ಟು ಆಹಾರ ಕೊರತೆಯುಂಟಾಗಿದೆಯೋ ಅದನ್ನು ನೀಗಿಸಬೇಕಾದರೆ ನಾವು ಹೆಚ್ಚು ಪ್ರಯತ್ನ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರೂ ಕೂಡ ಸಾಕಷ್ಟು ರೀತಿಯಲ್ಲಿ ಹೇಳಿದ್ದಾರೆ. ಮುಖ್ಯವಾಗಿ ಈಗ ಇರತಕ್ಕದ್ದು ನೀರಾವರಿ ಪ್ರದೇಶವನ್ನುಜಾಸ್ತಿ ಮಾಡತಕ್ಕದ್ದು ಅಗತ್ಯ. ಅದಕ್ಕಾಗಿ ಪ್ರಯತ್ನ ನಡೆದಿದೆ. ಈ ವಿಷಯದಲ್ಲಿ ಪ್ರತಿದಿವಸವೂ ಇಲ್ಲಿ ಪ್ರಶ್ನೆಗಳ ಮತ್ತು ಉಪಪ್ರಶ್ನೆಗಳ ಸುರಿಮಳೆ ಆಗಿದೆ. ಅದಕ್ಕೆ ಉತ್ತರಗಳನ್ನು ಕೊಡಕೊಟ್ಟಿದೆ. ಮೈಸೂರು ದೇಶದಲ್ಲಿ ನೀರಾವರಿ

ಪ್ರದೇಶವನ್ನು ಜಾಸ್ತಿ ಮಾಡತಕ್ಕದ್ದು ಅತ್ಯಂತ ಅವಶ್ಯಕ. ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲೆಲ್ಲಾ ಮೇಜರ್, ಮೀಡಿಯಂ ಮತ್ತು ಮೈನರ್ ನೀರಾವರಿ ಯೋಜನೆಗಳನ್ನು ಮಾಡಿದೆ. ಹೆಚ್ಚು ಆಹಾರವನ್ನು ಉತ್ಪತ್ತಿ ಮಾಡುವುದಕ್ಕೆ ಅನುಕೂಲಮಾಡಿಕೊಡಬೇಕೆಂಬ ಉದ್ದೇಶದಿಂದ ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಹೆಚ್ಚು ಹೆಚ್ಚು ಬಾವಿಗಳನ್ನು ತೋಡಿಸಲಾಗಿದೆ. ಬಹುಶಃ ಮೈಸೂರು ರಾಜ್ಯದಲ್ಲಿ 5—6 ವರ್ಷಗಳಲ್ಲಿ ಸಾಧಿಸಬಹುದಾದಂತಹ ಸಾಧನೆಯನ್ನು ಈ ಒಂದು ವರ್ಷದಲ್ಲಿ ಮೈನರ್ ಇರಿಗೇಷನ್‌ನಲ್ಲಿ ಸಾಧಿಸಿದೆ. ಬೇರೆ ಯಾವ ರಾಜ್ಯದಲ್ಲೂ ಇಂಥಾ ಸಾಧನೆಯನ್ನು ಮಾಡಿಲ್ಲ. ಮೈನರ್ ಇರಿಗೇಷನ್‌ನಲ್ಲಿ ಬಾವಿಗಳನ್ನು ತೋಡಿಸುವುದರಲ್ಲಿ ನಾವು ಸಾಕಷ್ಟು ಮುಂದುವರಿದಿದ್ದೇವೆ. ಅದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳು ಗೊತ್ತಿದೆ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ವರ್ಷದಲ್ಲಿ ಒಂದು ವಿಶೇಷವಾದ ಸಾಧನೆಯಾಗಿದೆ. ಮಳೆಯ ಅಭಾವ ಬಂದದ್ದರಿಂದ ಸಾಯಿಲ್ ಕನ್‌ಸರ್‌ವೇಷನ್ ಮತ್ತು ಕಾಂಟೂರ್ ಬಂಡಿಂಗ್ ಕೆಲಸ ಈ ಒಂದೇ ವರ್ಷದಲ್ಲಿ 80 ಸಾವಿರ ಎಕರೆಯಲ್ಲಿ ಆಗಿದೆ. ಈ ವರ್ಷ 30 ಸಾವಿರ ಬಾವಿಗಳು ಆಗಿವೆ. ಬಾವಿಗಳನ್ನು ತೆಗಸತಕ್ಕ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರೂ ಮುಂದೆ ಬರುತ್ತಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಬಾವಿಯನ್ನು ತೆಗೆಸುವುದಕ್ಕೆ ಜನಗಳು ಮುಂದೆ ಬರುತ್ತಿದ್ದಾರೆ. ರೈತರಿಗೆ ಬಡವರಿಗೆ ಸಾಕಷ್ಟು ಸಹಾಯವನ್ನು ಸರ್ಕಾರದವರು ಕೊಡುವುದು ಅಗತ್ಯ ಎಂದು ತಿಳಿದುಕೊಂಡು ಸಕಾಲದಲ್ಲಿ ಅವರಿಗೆ ಸಾಲವನ್ನು ಕೊಡಲಾಗುತ್ತಿದೆ. ಮತ್ತು ನಾನಾ ರೀತಿಯಲ್ಲಿ ಅವರಿಗೆ ಸಹಾಯ ಹೆಚ್ಚಾಗಿ ದೊರೆಯುತ್ತಿದೆ ಎಂದು ನಾನು ಹೇಳುತ್ತೇನೆ. ಆದರೂ ಸಹ ರೈತರಿಗೆ ಎಷ್ಟು ಸಹಾಯ ದೊರೆಯಬೇಕೋ ಅಷ್ಟು ದೊರೆಯುತ್ತಿಲ್ಲ. ಅದನ್ನು ಎಲ್ಲರೂ ಒಪ್ಪುತ್ತಾರೆ. ಇದರ ಜೊತೆಗೆ ಹಣದ ಅಭಾವ ಕೂಡ ಇದೆ. ಬ್ಯಾಂಕುಗಳವರಿಂದ ಎಷ್ಟು ಸಹಾಯ ಆಗಬೇಕೋ ಅಷ್ಟು ಸಹಾಯ ಆಗುತ್ತಿಲ್ಲ, 1966-67ನೇ ಸಾಲಿನಲ್ಲಿ 5 ಕೋಟಿ ರೂಪಾಯಿಗಳನ್ನು ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ರೈತರಿಗೆ ಕೊಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಅದು ಸಾಲದು 10 ಕೋಟಿ ರೂಪಾಯಿಗಳನ್ನು ಕೊಡಬೇಕು. ಬಾವಿಗಳನ್ನು ತೋಡಿಸುವ ವಿಷಯದಲ್ಲಿ ಆಯಾಯ ತಾಲ್ಲೂಕಿನ ಮಾನ್ಯ ಸದಸ್ಯರು ಮುಂದೆ ಬಂದು ನಮಗೆ 100 ಬಾವಿಗಳಾಗಬೇಕು, 200 ಬಾವಿಗಳಾಗಬೇಕು, 300 ಬಾವಿಗಳಾಗಬೇಕು, ಎಂದು ಕೇಳುತ್ತಿದ್ದಾರೆ ಸಹಾಯ ಮಾಡಬೇಕೆಂದು ಸರ್ಕಾರದವರಿಗೂ ಇಷ್ಟ ಇದೆ. ಇದರಲ್ಲಿ ಸಕಾಲದಲ್ಲಿ ರೈತರಿಗೆ ನಾನಾ ರೀತಿಯಲ್ಲಿ ಸಹಾಯ ದೊರೆಯುತ್ತಿದೆ. ಈ ರೀತಿ ಸಹಾಯವನ್ನು ಮಾಡುವಾಗ ಕೆಲವು ಸಂದರ್ಭಗಳಲ್ಲಿ ಅನೇಕ ಪ್ರತಿಬಂಧಕಗಳು ಬರುತ್ತವೆ. ಆ ವಿಷಯವನ್ನು ನಾನು ಅನೇಕಸಲ ಇಲ್ಲಿ ಹೇಳಿದ್ದೇನೆ. ರೈತರಿಗೆ ಸಾಲ ಮುಂತಾದ ಸೌಲಭ್ಯಗಳು ಎಷ್ಟು ಸುಲಭವಾಗಿ ಜಾಗ್ರತೆಯಾಗಿ ಸಿಕ್ಕುತ್ತವೆಯೋ ಅಷ್ಟು ಜಾಗ್ರತೆಯಾಗಿ ವ್ಯವಸಾಯದಲ್ಲಿ ಉತ್ಪಾದನೆ ಜಾಸ್ತಿ ಆಗುತ್ತದೆ. ಈಗ ರೈತರಿಗೆ ಕೊಡತಕ್ಕ ಸಾಲಕ್ಕಾಗಿ ಅವರು ಶೇಕಡಾ 7 ರೂಪಾಯಿ $7\frac{1}{2}$ ರೂಪಾಯಿ ಬಡ್ಡಿಯನ್ನು ಕೊಡುತ್ತಿದ್ದಾರೆ. ಅದನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಪ್ರಯತ್ನ ನಡೆಯುತ್ತಿದೆ. ತೆಗೆಯಬೇಕಾದ ಬಾವಿಗಳಿಗೆ ಕೊಡುವ ಹಣಕ್ಕೆ ಬಹುಶಃ ಈಗ ಏನು ಬಡ್ಡಿ ದರ ಇದೆಯೋ ಅದನ್ನು ಆದಷ್ಟು ಕಡಿಮೆ ದರದಲ್ಲಿ ಕೊಡುವ ವ್ಯವಸ್ಥೆ ಮಾಡಬೇಕು. ಹಿಂದೆ ಬಡ್ಡಿ ದರ ಮೂರರಷ್ಟು ಇದ್ದುದು ಈಗ ಶೇಕಡಾ ಎಂಟಕ್ಕೆ ಏರಿದೆ ಮತ್ತು ಇದಕ್ಕೆ ಶೇಕಡ ಮೂರು ಅಥವಾ ನಾಲ್ಕರಷ್ಟು ಸಬ್‌ಸಿಡಿ ಕೊಡುತ್ತಾರೆ. ಆದುದರಿಂದ ಬಡ್ಡಿಯ ದರ ಆದಷ್ಟೂ ಕಡಿಮೆ ದರದಲ್ಲಿದ್ದರೆ ಜನಕ್ಕೆ ಹೆಚ್ಚು ಉಪಕಾರವಾದೀತು. ಆದುದರಿಂದ ರೈತರಿಗೆ ಸಾಲಗಳನ್ನು ಕೊಡುವಾಗ ಬಡ್ಡಿ ದರವನ್ನು ಕಡಿಮೆ ಮಾಡುವುದು ಆವಶ್ಯಕ ಎಂದು ಈ ಸಭೆಯ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನಮ್ಮ ಸಂಪತ್ತನ್ನು ಹೊರಗಿನ ದೇಶಗಳೊಡನೆ ಹೋಲಿಸಿದರೆ ನಮ್ಮಲ್ಲಿ ಕೈಗಾರಿಕೆಗಳು ಹೆಚ್ಚಾಗಿಲ್ಲದೇ ಇರುವುದರಿಂದ ಶೇಕಡಾ ಐವತ್ತರಷ್ಟು ವ್ಯವಸಾಯದಿಂದಲೇ ಉತ್ಪತ್ತಿಯಾಗುತ್ತದೆ. ಮುಂದೆ ಕೈಗಾರಿಕೆಗಳು ಜಾಸ್ತಿಯಾದರೆ ಉತ್ಪತ್ತಿಯೂ ಹೆಚ್ಚಬಹುದು. ಆದುದರಿಂದ ಬಡ ಜನರು ಕೃಷಿ ಮಾಡಲು ನಾನಾ ರೀತಿಯಲ್ಲಿ ಅವರಿಗೆ ಸಹಾಯ ಮಾಡಿ ಹೆಚ್ಚು ಉತ್ತೇಜನ ಕೊಡತಕ್ಕದ್ದು ಆವಶ್ಯಕ. ಬಹುಶಃ ನಾನು ಹೇಳುವುದಾದರೆ ರಾಷ್ಟ್ರದ ಉತ್ಪತ್ತಿಯಲ್ಲಿ ಸುಮಾರು ಶೇಕಡಾ 50ರಿಂದ 60ರಷ್ಟು ವ್ಯವಸಾಯದಿಂದಲೇ ಇದೆ ಮತ್ತು ಉಳಿದ ರಾಷ್ಟ್ರಗಳಲ್ಲಿನ ವ್ಯವಸಾಯದ ಉತ್ಪತ್ತಿಯಲ್ಲಿಯೂ ತಾರತಮ್ಯ ಇದೆ. ಆದುದರಿಂದ ವ್ಯವಸಾಯದ ಉತ್ಪತ್ತಿ ಹೆಚ್ಚಾಗಲು ಇದರ ಸಂಬಂಧವಾದ ಕೈಗಾರಿಕೆಗಳು ಹೆಚ್ಚಿಗೆ ಆಗುವುದು ಕೂಡ ಆವಶ್ಯಕ. ಈ ಒಂದು ದೃಷ್ಟಿಯಿಂದ ವ್ಯವಸಾಯಗಾರನಿಗೆ ಹೆಚ್ಚಿನ ಅನುಕೂಲಬೇಕು. ರಿಸರ್ವ್ ಬ್ಯಾಂಕಿನವರು ಹಣದ ರೂಪದಲ್ಲಿ ಸಾಲ ಕೊಡುವಾಗ ಸುಲಭ ಬಡ್ಡಿ ದರದಲ್ಲಿ ಸಾಲ ಸಿಗಬೇಕು. ಇಲ್ಲದಿದ್ದರೆ ಅವನು ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಲ್ಲಿ ಸಹಾಯ ಮಾಡುವುದು ಆವಶ್ಯಕ. ಕೇಂದ್ರ ಸರಕಾರದವರೂ ಇದನ್ನು ಆಲೋಚನೆ ಮಾಡಬೇಕು. ಈ ಮಾತನ್ನೇ ಮಾನ್ಯ ಸದಸ್ಯರು ಅನೇಕರು ಹೆಚ್ಚು ದುಡ್ಡಿನ ಸಹಾಯ ಮಾಡಬೇಕೆಂದು ಹೇಳಿದ್ದಾರೆ. ಅಲ್ಲದೆ ಇವೊತ್ತು ರೈತರು ಹೆಚ್ಚು ಅಭಿಮಾನದಿಂದ ಕೆಲಸ ಮಾಡುತ್ತಿದ್ದಾರೆ. ಅಲ್ಲದೆ ವಿದ್ಯಾವಂತರಾದವರು ವ್ಯವಸಾಯ ಮಾಡಲು ಹೆಚ್ಚು ಹೆಚ್ಚಾಗಿ ಹೋಗಬೇಕೆಂದು ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರೂ ಹೇಳಿದರು. ಅವರು ಹೇಳುವಂತೆ ಹೆಚ್ಚು ಹೆಚ್ಚಾಗಿ ವಿದ್ಯಾವಂತರು ವ್ಯವಸಾಯಗಾರರಾಗಿ ಕೆಲಸ ಮಾಡಲು ಮುಂದೆ ಹೋಗಬೇಕು. ಇದು ಒಪ್ಪತಕ್ಕಂತಹ ಮಾತು. ಎಲ್ಲಿ ವಿದ್ಯಾವಂತರು ವ್ಯವಸಾಯ ಮಾಡುತ್ತಾರೋ ಅಲ್ಲಿ ವ್ಯವಸಾಯದ ಕೆಲಸಗಳು ಚೆನ್ನಾಗಿ ನಡೆಯುತ್ತವೆ ಮತ್ತು ಅವರು ನೂತನ ವಿಧಾನಗಳನ್ನು

(ಶ್ರೀ ಎಸ್. ನಿಜಲಿಂಗಪ್ಪ)

ಅನುಸರಿಸಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಭಯವೇನೂ ಇಲ್ಲ. ಮತ್ತೊಂದು ವಿಷಯವೇನೆಂದರೆ, ಬೆಳೆಯುತಕ್ಕ ಮಾಲಿಗೆ ಸಾಕಷ್ಟು ಒಳ್ಳೆಯ ಧಾರಣೆಯೂ ಸಿಗುತ್ತಾ ಇದೆ, ಹಿಂದೆ ಎಂದೂ ಇಲ್ಲದ ಧಾರಣೆ ಈಗ ಸಿಗುತ್ತಿದೆ. ಧಾರಣೆ ಹೀಗೆ ಜಾಸ್ತಿಯಾಗುತ್ತ ಹೋದರೂ ದವಸಗಳು ಹೆಚ್ಚಾಗಿ ಹೊರಕ್ಕೆ ಬರುತ್ತಿಲ್ಲ. ಮತ್ತೊಂದು ಕಾರಣ ವ್ಯವಸಾಯ ಮಾಡುವವನು ಮುಂದಿನ ವರ್ಷ ಇನ್ನೂ ಹೆಚ್ಚು ಧಾರಣೆ ದವಸಕ್ಕೆ ಸಿಗಬಹುದು ಎಂದು ಮತ್ತು ಈಗ ಮಾರಿದರೆ ಕಡಿಮೆ ಧಾರಣೆ ಇದೆ ಎಂದು ಮಾರುತ್ತಿಲ್ಲ. ಈ ರೀತಿ ನಾನಾ ಕಾರಣಗಳಿಂದ ನಾನಾ ವರ್ಗಗಳಲ್ಲಿ ಇನ್ನೂ ಹೆಚ್ಚು ಲಾಭ ಸಂಪಾದನೆ ಮಾಡಬೇಕೆಂಬ ಹವ್ಯಾಸ ಹೆಚ್ಚಿದೆ ವ್ಯಾಪಾರಗಾರರು ಇಂತಹ ದೃಷ್ಟಿಯಿಂದ ಇರುವಾಗ ರಾಷ್ಟ್ರದ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ಆಗುವುದಿಲ್ಲ, ಅವರು ಸಾಕಷ್ಟು ಮಾಲನ್ನು ತೆಗೆದಿಟ್ಟು ಜನರಿಗೆ ಸಿಗದಂತೆ ಮಾಡುತ್ತಿರುವುದರಿಂದ ತೊಂದರೆಯಾಗುತ್ತಿದೆ. ಇದರ ಜೊತೆಗೆ ಬೆಳಸತಕ್ಕವರುಕೂಡ ಮುಂದೆ ದವಸ ಸಿಕ್ಕುತ್ತೋ ಇಲ್ಲವೋ ಎಂದು ಭಯದಿಂದ ಅವರಲ್ಲಿರುವ ದವಸವನ್ನು ಹೊರಕ್ಕೆ ಬಿಡದೆ ಬಚ್ಚಿಡುತ್ತಿದ್ದಾರೆ ಮುಂದೆ ಒಳ್ಳೆ ಬೆಳೆ ಬಂದಾಗ ಮಾರಬಹುದು ಎಂದು ಹೀಗೆ ಮಾಡುತ್ತಿದ್ದಾರೆ. ಹೀಗೆ ಮೂರು ನಾಲ್ಕು ಕಾರಣಗಳಿಂದಾಗಿ ಅಭಾವ ಪರಿಸ್ಥಿತಿ ಹೆಚ್ಚಾಗುವುದಕ್ಕೆ ಒಂದು ಕಾರಣವಾಗಿದೆ. ನಮ್ಮಲ್ಲಿ ಸ್ಕೇರ್ಸಿಟಿಗಿಂತ ಸ್ಕೇರ್ ಎನ್ನುವುದು ಜಾಸ್ತಿಯಾಗಿದೆ. ಈ ವರ್ಷ ಬಹುಶಃ ಮಳೆ ಅಭಾವದಿಂದ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ವರ್ಷ ವಿಶೇಷ ಪರಿಸ್ಥಿತಿ ಬಂದಿದೆ. ಸರ್ವೇ ಸಾಧಾರಣವಾಗಿ ನಾಲ್ಕೈದು ವರ್ಷಗಳಿಂದ ವ್ಯವಸಾಯವನ್ನೇ ಪೂರ್ತಿಯಾಗಿ ಮಾಡುತ್ತಿದ್ದ ಜನರು ಈ ಸಲ ಮಳೆ ಬರದೇ ಹೋದುದರಿಂದ ಅವರಿಗೆ ತೊಂದರೆಯಾಗಿದೆ. ಈ ತೊಂದರೆ ಹೋಗಬೇಕಾದರೆ ಹೆಚ್ಚು ಉತ್ಪತ್ತಿ ಮಾಡಿದರೆ ಈ ತೊಂದರೆಯನ್ನು ಬಗೆಹರಿಸಲು ರೈತರಿಗೆ ಸಾಕಷ್ಟು ಸಹಾಯ ಮಾಡಬೇಕು. ಊಟ ಮಾಡುವ ಜನರೂ ಹೆಚ್ಚಾಗಿ ಜನಸಂಖ್ಯೆ ಕೂಡ ಹೆಚ್ಚಾಗಿ ಬೆಳೆಯುತ್ತಿದೆ. ಇದನ್ನು ಕಡಿಮೆ ಮಾಡಬೇಕೆಂದು ಪ್ರಯತ್ನ ನಡೆಯುತ್ತಿದೆ. ಇದು ಒಂದು ವಿಚಾರ. ಎರಡನೇ ವಿಚಾರ ಪಾಂಚವಾರ್ಷಿಕ ಯೋಜನೆಗಳಿಂದಾಗಿ ಹೆಚ್ಚು ಹಣ ಜನಗಳ ಕೈಯ್ಯಲ್ಲಿ ಹರಿಯುತ್ತಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇವೊತ್ತು ಊಟ ಮಾಡತಕ್ಕ ಪ್ರಮಾಣ ಹೇಗಿದೆ ಎಂದರೆ 15—20 ವರ್ಷಗಳ ಹಿಂದೆ ಏನು ಇತ್ತೋ ಅದಕ್ಕೆ ಹೋಲಿಸಿದರೆ ಇವೊತ್ತು ಜನ ತಿನ್ನತಕ್ಕ ಪ್ರಮಾಣ ಜಾಸ್ತಿಯಾಗಿದೆ ಮತ್ತು ಆಹಾರ ಧಾನ್ಯಗಳು ಜಾಸ್ತಿಯಾಗಬೇಕಾಗಿದೆ. ಇವೊತ್ತು 46 ಲಕ್ಷ ಟನ್ನುಗಳಷ್ಟು ಬೆಳೆಯುತ್ತಿದ್ದರೂ ಕಡಿಮೆ ಎನ್ನತಕ್ಕ ಭಾವನೆ ಬೆಳೆದು ಬಂದಿದೆ. ಬೆಲೆ ಜಾಸ್ತಿಯಾಗಿರುವುದರಿಂದ ಬಡಜನ ಕೊಳ್ಳಲು ತೊಂದರೆಯಾಗುತ್ತಿದೆ. ಇದನ್ನು ಪರಿಹಾರ ಮಾಡಬೇಕಾದರೆ ಹೆಚ್ಚು ಹೆಚ್ಚು ಆಹಾರದ ದವಸ ಸಿಗುವಂತೆ ಮಾಡಬೇಕಾದರೆ ಒಂದು ಕಡೆ ನೀರಾವರಿ ಜಾಸ್ತಿಯಾಗಬೇಕು, ಬೀಜಗಳನ್ನು ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಇನ್‌ಸೆಕ್ಟಿಸೈಡುಗಳನ್ನು ಮಾಡಿ ಕ್ರಿಮಿ ಕೀಟಗಳನ್ನು ನಾಶಮಾಡತಕ್ಕದ್ದು ಅಲ್ಲದೆ ವಿದ್ಯಾವಂತರುಗಳು ಎಂದರೆ, ಸೊಫಿಸ್ಟಿಕೇಟೆಡ್ ಯಂಗ್ ಮೆನ್ ಎಂದರೆ, ಯುವಕರು ಹೆಚ್ಚಾಗಿ ವ್ಯವಸಾಯ ಮಾಡಲು ಮುಂದೆ ಬಂದರೆ ಇನ್ನೂ ಹೆಚ್ಚು ಉತ್ಪತ್ತಿ ಮಾಡಬಹುದು. ಆದರೆ ಅವರಿಗೆ ಮುಖ್ಯವಾಗಿ ಪವರು ಟಿಲ್ಲರುಗಳು ಬೇಕು. ಇದನ್ನು ಜಾಸ್ತಿಮಾಡಿ ತರಿಸಿ ಎಲ್ಲರಿಗೂ ಹಂಚಬೇಕು ಎಂದು ಮಾನ್ಯ ಸದಸ್ಯರುಗಳೂ ಇಲ್ಲಿ ಎಷ್ಟು ಜನ ಮಾತನಾಡಿದರೋ ಅವರೆಲ್ಲರೂ ಹೇಳಿದ್ದಾರೆ. ಎಲ್ಲರೂ ಪವರು ಟಿಲ್ಲರುಗಳನ್ನು ಕೊಡಬೇಕು, ಟ್ರಾಕ್ಟರುಗಳನ್ನು ಕೊಡಬೇಕು, ಎಂದು ಹೇಳುವುದನ್ನು ಎಲ್ಲರೂ ಒಪ್ಪತಕ್ಕ ಮಾತು. ಒಂದು ಸಂತೋಷದ ವಿಚಾರ ಇಲ್ಲಿ ಹೇಳಬೇಕು. ಬೆಂಗಳೂರಿನಲ್ಲೇ ಇಂತಹ ಒಂದು ಕಾರ್ಖಾನೆ ಪ್ರಾರಂಭವಾಗುವುದರಲ್ಲಿದೆ. ಈ ಕಾರ್ಖಾನೆಯಲ್ಲಿ ವರ್ಷಕ್ಕೆ 5,000 ಪವರು ಟಿಲ್ಲರುಗಳನ್ನು ಉತ್ಪತ್ತಿ ಮಾಡುವಂತಹ ಕಾರ್ಖಾನೆ ಕೇಂದ್ರ ಸರಕಾರದ ಅನುಮತಿ ಪಡೆದು ಬಹುಶಃ ಒಂದೆರಡು ವರ್ಷಗಳೊಳಗಾಗಿ ಆರಂಭವಾಗುತ್ತದೆ. ಆಗ ವರ್ಷಕ್ಕೆ ಎರಡು ಸಾವಿರ ಪವರು ಟಿಲ್ಲರುಗಳು ಉತ್ಪತ್ತಿಯಾಗುವ ಸಂಭವ ಇದೆ. ಈಗ ಜಪಾನ್ ದೇಶದಿಂದ 175 ಪವರು ಟಿಲ್ಲರುಗಳನ್ನು ತರಿಸಲಾಗಿದೆ. ಇನ್ನೂ 200 ಬರುವುದರಲ್ಲಿದೆ. ಅಲ್ಲದೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಾನ್ಯ ಸದಸ್ಯರು ನಮ್ಮ ಜಿಲ್ಲೆಗೆ ಏನೂ ಸಿಗಲಿಲ್ಲ ಎಂದೇ ಹೇಳುವ ಹವ್ಯಾಸ ತಪ್ಪಲಿಲ್ಲ......................

Sri SANJEEVANATH AIKALA (Surathkal).—Sir, I protest... .....

Mr. SPEAKER.—Order, order.

Sri B. BHASKAR SHETTY.—Sir ....

[*Interruption*]

Mr. SPEAKER.—Order, order.

ಶ್ರೀ ಎಸ್. ನಿಜಲಿಂಗಪ್ಪ :—ದಕ್ಷಿಣ ಕನ್ನಡ ಜಿಲ್ಲೆಯವರು ಹಾಗೆ ಪ್ರತಿಭಟನೆ ಮಾಡಿ ಮಾಡಿ ಅವರು ಅನುಕೂಲಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಹಾಗೆ ಪ್ರತಿಭಟನೆ ಮಾಡತಕ್ಕದ್ದು ಒಳ್ಳೆಯದು. ಮತ್ತು ಅಲ್ಲಿಯ ಜನರು ಬಹಳ ಒಳ್ಳೆಯವರು ಮತ್ತು ಚೆನ್ನಾಗಿ ಬೆಳೆಯುವವರೂ ಆಗಿದ್ದಾರೆ. ಆದರಿಂದ ಎಲ್ಲರಿಗೂ ಆಹಾರದ ದವಸ ಸಿಗುವಂತೆ ಮಾಡಬೇಕು. ಇದಕ್ಕೆ ಯಾರೂ ವಿರೋಧ ಮಾಡಬಾರದು.

Sri SANJEEVANATH AIKALA.—We are not getting our share.

Mr. SPEAKER.—Order, order.

Sri S. NIJALINGAPPA.—Sir, if my friends feel that this should get into the papers and they get some publicity, I have no objection.

ಈಗ ಬಂದಿರತಕ್ಕ ಟ್ರಾಕ್ಟರುಗಳ ಪೈಕಿ ಅವರಿಗೆ ಸುಮಾರು 30—35 ಸಿಕ್ಕಿವೆ. ಹೀಗೆ ಎಲ್ಲೆಲ್ಲಿ ಇದನ್ನು ಉಪಯೋಗಿಸಲು ಜನ ತಯಾರಾಗಿದ್ದಾರೋ ಅಲ್ಲೆಲ್ಲಾ ಅನುಕೂಲಗಳನ್ನು ಕಲ್ಪಿಸುತ್ತಿದ್ದಾರೆ. ಬಹುಶಃ ಎಲ್ಲರೂ ಪವರು ಟಿಲ್ಲರುಗಳು ಬೇಕೆಂದು ಕೇಳುತ್ತಾರೆ. ಈ ಪ್ರಶ್ನೆ ಸ್ವಲ್ಪಮಟ್ಟಿಗೆ ಬಗೆಹರಿಯಬೇಕಾದರೆ ನಮಗೆ 300—400 ಟ್ರಾಕ್ಟರುಗಳು ಈಗ ಬರುತ್ತವೆ. ಇದನ್ನು ಹಂಚುತ್ತೇವೆ. ಕೆಲವು ಜಿಲ್ಲೆಗಳಿಂದ ಇದಕ್ಕೆ ಕೋರಿಕೆಗಳೇ ಬಂದಿಲ್ಲ. ಅವರುಗಳೂ ವಿಚಾರಮಾಡಿ ಅವರಿಗೆ 8—10 ಟ್ರಾಕ್ಟರುಗಳು ಬೇಕೆಂದು ಕೇಳಿದರೂ ಕೊಡಬಹುದು. ಸರಕಾರಕ್ಕೂ ಕೊಡಬೇಕೆಂದು ಉದ್ದೇಶ ಇದೆ. ಆದರೆ ಹೆಚ್ಚು ಟ್ರಾಕ್ಟರುಗಳನ್ನು ನಾವೇ ತಯಾರು ಮಾಡುವುದು ಆವಶ್ಯಕ. ಇದರ ಜೊತೆಯಲ್ಲೇ ಬೀಜ ಬೇಕು ಎಂದು ಕೇಳುತ್ತಿದ್ದಾರೆ. ಹೈ ಬ್ರಿಡ್ ಬೀಜ ಎನ್ನುತ್ತಾರೆ, ಶಕ್ತಿ ಬೀಜಗಳು, ಸಮ್ಮಿಶ್ರ ಬೀಜಗಳೆನ್ನುತ್ತಾರೆ. ಅಂತೂ ಇಂತಹ ಶಕ್ತಿಯುತವಾದ ಬೀಜ ಗಳನ್ನು ಜಾಸ್ತಿ ಮಾಡಬೇಕಾದರೆ ಇನ್ನೂ ಎರಡು ವರ್ಷಗಳಾದರೂ ಬೇಕು. ಇದಕ್ಕೆ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ನೀರಾವರಿ ಪ್ರದೇಶಬೇಕು. ಸಾಕಷ್ಟು ಸೀಮೆ ಗೊಬ್ಬರಬೇಕು. ಇದನ್ನೂ ತಯಾರುಮಾಡುವ ಪ್ರಯತ್ನ ನಡೆದಿದೆ. ಬೆಳಗೊಳದಲ್ಲಿ ಒಂದು ಫರ್ಟಿಲೈಸರು ಕಂಪನಿ ಇದೆ. ಬಹುಶಃ ಇಲ್ಲಿ 25 ಅಥವಾ 30 ಸಾವಿರ ಟನ್ನುಗಳಷ್ಟು ಉತ್ಪತ್ತಿ ಮಾಡಬಹುದು. ನಮಗೆ ಸುಮಾರು 80 ಸಾವಿರ ಟನ್ನುಗಳಷ್ಟು ಗೊಬ್ಬರ ಉತ್ಪತ್ತಿ ಮಾಡುವ ಕಾರ್ಖಾನೆ ಮಾಡಬೇಕು. ಇದಕ್ಕೆ ಪ್ರಯತ್ನ ನಡೆದಿದೆ. ಬಹುಶಃ ಶೀಘ್ರದಲ್ಲೇ ಇದೂ ಬಗೆ ಹರಿಯುವಂತೆ ಕಾಣುತ್ತದೆ. ಇನ್ನೆರಡು ಮೂರು ತಿಂಗಳಲ್ಲಿ ಯಾವುದೋ ಒಂದು ಕಂಪನಿಗೆ ಲೆಸನ್ಸು ಸಿಗುವುದರಲ್ಲಿದೆ. ಮಂಗಳೂರಿನಲ್ಲಿ ಫರ್ಟಿಲೈಸರು ಕಾರ್ಖಾನೆ ಸ್ಥಾಪನೆಯಾಗುವ ನಿರೀಕ್ಷೆ ಇದೆ. ಇದಕ್ಕೆ ಸಾಕಷ್ಟು ಪ್ರಯತ್ನಗಳೂ ನಡೆಯುತ್ತಿವೆ.

9-00 A.M.

ಮಂಗಳೂರಿನ ವಿಚಾರದಲ್ಲಿ ಬಹುಶಃ ಅಲ್ಲಿಯ ಸದಸ್ಯರಿಗಿಂತಲೂ ನನಗೆ ಹೆಚ್ಚು ಅಭಿಮಾನ ಇದೆ ಎಂದು ಹೇಳುತ್ತೇನೆ. ಅವರು ಕೇಳದೇ ಹೋದರೂ ಅಲ್ಲಿ ಮಾಡಬೇಕಾದ್ದನ್ನು ಮಾಡುತ್ತೇವೆ. ಅಲ್ಲಿ ಫರ್ಟಿಲೈಸರ್ಸ್ ಫ್ಯಾಕ್ಟರಿ ಆಗಬೇಕು. ಅದರ ಜೊತೆಗೆ ಆದಷ್ಟು ಜಾಗ್ರತೆಯಾಗಿ ಅಲ್ಲಿ ಎಣ್ಣೆ ತಯಾರು ಮಾಡತಕ್ಕ ರಿಫೈನರಿ ಮಾಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೇವೆ. ಅದು ಆಗುತ್ತದೆಯೋ ಇಲ್ಲವೋ ಅದನ್ನು ಹೇಳದೆ ಹೋದರೂ ಅಲ್ಲಿ ಫರ್ಟಿಲೈಸರ್ಸ್ ಫ್ಯಾಕ್ಟರಿ ಆಗತಕ್ಕ ಸೂಚನೆಗಳು ಇವೆ. ಶೀಘ್ರದಲ್ಲೇ ತೀರ್ಮಾನವಾಗಬಹುದು ಎಂದು ಅನಿಸುತ ದೆ.

ಇನ್ನು ಸೀಡ್‌ಫಾರಂಸ್. ಒಳ್ಳೆಯ ಬೀಜಗಳನ್ನು ತಯಾರುಮಾಡತಕ್ಕ ಪ್ರಯತ್ನ ನಡೆದಿದೆ. ಎರಡು ವರ್ಷದಿಂದ ಹೈ ಬ್ರಿಡ್ ಮೇಜ್, ಜೋಳ, ಹಾಗೂ ಸಜ್ಜೆ ಇವುಗಳ ವಿಚಾರದಲ್ಲಿ ಪ್ರಯತ್ನ ನಡೆದಿದೆ. ಆದರೆ ಈ ವರ್ಷ ಎಷ್ಟು ಸಿಕ್ಕಬೇಕಾಗಿತ್ತೋ ಅಷ್ಟು ಸಿಕ್ಕಿಲ್ಲ, ಒಂದು ಸಂತೋಷದ ಮಾತು ಏನೆಂದರೆ, ಈಸಲ 15—20 ಸಾವಿರ ಎಕರೆಯಲ್ಲಿ ಉತ್ಪನ್ನ ಮಾಡುವುದಕ್ಕೆ ಸಾಧ್ಯವಾಗಿದೆ. ಸುಮಾರು 10 ಲಕ್ಷ ಎಕರೆ ಸಾಕಾಗುವಷ್ಟು ಜೋಳ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಸಜ್ಜೆ ಮತ್ತು ಮೆಕ್ಕೆ ಜೋಳ ಇವುಗಳ ವ್ಯವಸ್ಥೆ ಆಗುತ್ತಾ ಇದೆ. ತುಂಗಭದ್ರಾ ಏರಿಯಾದಲ್ಲಿ ರಾಯಚೂರಿನಲ್ಲಿ 5 ಸಾವಿರ ಎಕರೆಯಲ್ಲಿ ಒಂದು ಸೀಡ್ ಫಾರಂ ಮಾಡಿ, ಅದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ ಕೆಲಸ ಮಾಡಬೇಕೆಂದು ತೀರ್ಮಾನವಾಗಿದೆ. ಬಹುಶಃ ಮುಂದಿನ ವರ್ಷದಿಂದ ಈ ಕಷ್ಟ ಕಡಿಮೆಯಾಗಬಹುದು. ಎರಡು ವರ್ಷದ ನಂತರ ಈ ಪ್ರಶ್ನೆ ಬರುವುದೇ ಇಲ್ಲ ಎಂದು ಹೇಳುವುದಕ್ಕೆ ಸಂತೋಷಪಡುತೆ ೇನೆ.

ಅನೇಕ ಮಾನ್ಯ ಸದಸ್ಯರು ಇನ್‌ಸೆಕ್ಟಿಸೈಡ್ಸ್ ಬೇಕು ಎಂದು ಹೇಳಿದ್ದಾರೆ. ಹೈಬ್ರಿಡ್ ಬೀಜಗಳಿಂದ ಆಗತಕ್ಕ ಬೆಳೆಗಳಿಗೆ ಆಗಿಂದಾಗ್ಗೆ ಅದನ್ನು ಹಾಕಲೇಬೇಕಾಗುತ್ತದೆ. ಇನ್‌ಸೆಕ್ಟಿಸೈಡ್ಸ್ ಇಲ್ಲದೇ ಹೋದರೆ ಚೆನ್ನಾಗಿ ಬೆಳೆಯು ವುದಿಲ್ಲ. ಸಾಕಾದಷ್ಟು ನೀರು ಗೊಬ್ಬರ ಕ್ರಿಮಿನಾಶಕ ಇಂಥಾದ್ದು ಸಾಕಾದಷ್ಟು ಇರಬೇಕಾದ್ದು ಅವಶ್ಯಕ. ಇದಕ್ಕೆ ಸಾಕಾದಷ್ಟು ಪ್ರಯತ್ನ ನಡೆಯುತ್ತಾ ಇದೆ. ಹೀಗಾಗಿ ಮಾನ್ಯ ಸದಸ್ಯರು ಏನೇನು ಹೇಳುತ್ತಾ ಇದ್ದಾರೋ ಅದನ್ನು ನಾವೇ ಮುಂದುವರಿದು ಮಾಡುತ್ತಾ ಇದ್ದೇವೆ. ಬಾವಿಗಳ ವಿಚಾರದಲ್ಲಿ ಸಾಕಾದಷ್ಟು ಪ್ರಗತಿ ಸಾಧನೆ ಯಾಗಿದೆ. ಭಾವಿಗಳನ್ನು ಕೊಡುತ್ತಾ ಇದ್ದಾರೆ. ಇದರಲ್ಲಿ ಕೊರತೆ ಏನೆಂದರೆ, ದುಡ್ಡಿನ ಕೊರತೆ, ಮತ್ತು ಕೆಲವು ಸಂದರ್ಭಗಳಲ್ಲಿ ಯಂತ್ರಗಳು ಸಿಕ್ಕುವುದಿಲ್ಲ. ಶರಾವತಿಯಲ್ಲಿ ಸಾಕಾದಷ್ಟು ವಿದ್ಯುಚ್ಛಕ್ತಿ ಉತ್ಪನ್ನವಾದರೂ ಅದನ್ನು ಹಳ್ಳಿ ಹಳ್ಳಿಗೆ ತೆಗೆದುಕೊಂಡು ಹೋಗಿ ಪ್ರತಿಯೊಂದು ಬಾವಿಗೆ ಕೊಡಬೇಕೆಂದು ನಮಗೆ ಇಷ್ಟವಿದ್ದರೂ ಕೂಡ ಇದಕ್ಕೆ ಇರತಕ್ಕ ಒಂದು ಕೊರತೆ ಎಂದರೆ ತಂತಿಯ ಅಭಾವ. ತಂತಿ ಇಲ್ಲದೇ ಇರುವುದರಿಂದ ಬಹಳ

(ಶ್ರೀ ಎಸ್. ನಿಜಲಿಂಗಪ್ಪ)

ತೊಂದರೆಯಾಗಿದೆ ; ಅದನ್ನು ನಾನಾ ರೀತಿಯಲ್ಲಿ ಪ್ರಯತ್ನಪಟ್ಟು ತಯಾರುಮಾಡುತ್ತಾ ಇದ್ದೇವೆ. ಆದರೂ ಎಲ್ಲಾ ಕಡೆಯಲ್ಲೂ ಕೊಡುವುದಕ್ಕೆ ಸಾಧ್ಯವಾದೀತು ಎಂದು ಅನಿಸುವುದಿಲ್ಲ. ಈ ವರ್ಷ ಬಹುಶಃ ಸುಮಾರು 20 ಸಾವಿರ ಬಾವಿ ಆದೀತು ಎಂದು ಕಾಣುತ್ತದೆ. ನಮ್ಮ ವಿದ್ಯುಚ್ಛಕ್ತಿ ಬೋರ್ಡಿನವರು ನಮಗೆ ಲೈನ್ ಮೆಟೀರಿಯಲ್ಸ್ ತಂದುಕೊಟ್ಟರೆ ಲಕ್ಷ ಬಾವಿಗಳಿಗೆ ಕೊಡುವುದಕ್ಕೆ ಸಿದ್ಧವಾಗಿದ್ದೇವೆ ಎಂದು ಹೇಳುತ್ತಾ ಇದ್ದಾರೆ. ಪ್ರತಿ ವರ್ಷ 10__15 ಸಾವಿರ ಬಾವಿ ತೆಗೆದುಕೊಳ್ಳುವುದಾದರೆ ಬಹುಶಃ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಾವಿಗಳ ತೊಂದರೆ ಪೂರೈಸೀತು. ಅದೇ ರೀತಿ ಸಣ್ಣ ನೀರಾವರಿ ತೊಂದರೆ, ತಪ್ಪುತ್ತದೆ. ಮಧ್ಯಮ ವರ್ಗದ ಮತ್ತು ದೊಡ್ಡ ನೀರಾವರಿ ಯೋಜನೆಗಳ ಕಷ್ಟ ಇದೆ. ಮಾನ್ಯ ಸದಸ್ಯರು ನ್ಯಾಯವಾಗಿ ಕೇಳುತ್ತಾ ಇದ್ದಾರೆ. ಕೇಂದ್ರ ಸರ್ಕಾರದವರೇ ಈ 120 ಕೋಟಿ ರೂಪಾಯಿಗಳ ಯೋಜನೆಯನ್ನು ವಹಿಸಿಕೊಳ್ಳಲಿ ಎಂದು. ಅದೇ ರೀತಿ ನಾವೂ ಕೂಡ ಬರೆಯುತ್ತಾ ಇದ್ದೇವೆ. ನೆನ್ನೆತಾನೆ ಒಂದು ಕಾಗದ ಬಂದಿದೆ, ಪ್ಲಾನಿಂಗ್ ಕಮಿಷನ್‌ನಿಂದ, ಅವರು ಇದು ಬಹಳ ಕಷ್ಟವಾದ ಮಾತು ಆದರೂ ಕೂಡ ಇದನ್ನು ಆಲೋಚನೆ ಮಾಡುತ್ತಾ ಇದ್ದೇವೆ, ಬಡ್ಡಿ ಕೊಡುತ್ತೀರಾ, ಹಾಗೆ ಹೀಗೆ ಎಂತ ಹೇಳಿ ವಿಚಾರ ಮಾಡಿದ್ದಾರೆ. ಅವರ ಅರ್ಥ ಬಹುಶಃ ಬಡ್ಡಿ ಜಾಸ್ತಿ ಕೊಡದಿದ್ದರೂ ಈ ಸಾಲ ತೀರಿಸಲೇಬೇಕಾದೀತು ಎಂದು ಇರಬಹುದು. ಸಾಲ ಕೊಡುವುದಕ್ಕೆ ಪ್ರಯತ್ನ ಮಾಡಬಹುದೋ ಏನೋ ಎಂಬ ಸೂಚನೆ ಬಂದಿದೆ. ಇದು ಎಲ್ಲಿಗೆ ಬರುತ್ತದೆಯೋ ಗೊತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರಿಗೆ ಸಹಾಯ ಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿ ನೀರಾವರಿ ಪ್ರದೇಶ ಸರಾಸರಿ 9ಕ್ಕಿಂತ ಕಡಮೆ ಇರತಕ್ಕ ಸಂದರ್ಭದಲ್ಲಿ ಅವರು ನಮ್ಮ ಸಹಾಯಕ್ಕೆ ಬಂದು ಈ ಕೆಲಸ ಮಾಡುವುದು ಸೂಕ್ತ ಎಂದು ನನಗೆ ಅನಿಸುತ್ತದೆ. ಆದ್ದರಿಂದ ಈಗಲೂ ಈ ಸಭೆಯ ಮೂಲಕ ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡುತ್ತಾ ಇದ್ದೇವೆ. 120 ಕೋಟಿ ರೂಪಾಯಿನ ಈ ಕೃಷ್ಣಾನದಿ ಯೋಜನೆ ಏನಿದೆ ಅದನ್ನು ಅವರೇ ವಹಿಸಿಕೊಳ್ಳಬೇಕೆಂದು ಹೇಳುತ್ತಾ ಇದ್ದೇನೆ. ಇದರ ಮೇಲೆ ಪತ್ರವ್ಯವಹಾರ ನಡೆದಿದೆ. ಅನೇಕ ದೂರುಗಳನ್ನು ಮಾಡುತ್ತಾರೆ. ಅದು ಸರಿಯೇ. ಈ ರಾಜ್ಯ ಸರ್ಕಾರ ಏನೂ ಪ್ರಯತ್ನ ಮಾಡುತ್ತಾ ಇಲ್ಲ, ಹಾಗೆ ಹೀಗೆ ಎಂದು ಟೀಕೆ ಮಾಡುತ್ತಾರೆ. ಬಯ್ಯುವುದಕ್ಕೆ ಏನೂ ಇಲ್ಲದೇ ಇದ್ದರೆ ಏನಾದರೂ ಒಂದು ತಪ್ಪನ್ನು ವಿರೋಧಪಕ್ಷದವರು ಹುಡುಕಬೇಕಲ್ಲಾ ! ಅದನ್ನು ಎತ್ತಿ ತೋರಿಸಿ ಅದನ್ನೇ ದೊಡ್ಡದಾಗಿ ಮಾಡಬೇಕು, ತಪ್ಪು ಏನೂ ಇಲ್ಲದೇ ಹೋದರೂ ಏನೋ ಒಂದು ಹೇಳುವುದು ಸ್ವಾಭಾವಿಕ. ಅದನ್ನು ಬೇಡ ಎಂದು ನಾನು ಹೇಳುವುದಿಲ್ಲ. ಅದನ್ನು ಮಾಡತಕ್ಕ ಸಂದರ್ಭದಲ್ಲಿ ಸಮಯ, ಸಂದರ್ಭ, ಯೋಗ್ಯತೆ, ಅವಶ್ಯಕತೆ ಇದನ್ನೆಲ್ಲಾ ತಿಳಿದುಕೊಂಡು ಮಾಡಲಿ ಅಷ್ಟೆ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಗಳು ಬೆಳೆಯಬೇಕು, ಚೆನ್ನಾಗಿ ಬೆಳೆಯಬೇಕು ಅಷ್ಟೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).__ಹಾಗಾದರೆ ಏನೂ ತಪ್ಪೇ ಇಲ್ಲ ಅನ್ನುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.__ಈ ಮಾನ್ಯ ಸದಸ್ಯರಿಗೆ ಒಂದು ಮಾತು ಹೇಳಬೇಕು. ಜಗತ್ತಿನಲ್ಲಿ ಸತ್ಯ ಇದೆ ನ್ಯಾಯ ಇದೆ, ಒಳ್ಳೆಯದು ಇದೆ ಇದನ್ನು ತಿಳಿದುಕೊಂಡು ಹೇಳಬೇಕಾದ್ದನ್ನು ಹೇಳಿದರೆ ಎಷ್ಟೋ ಸಂತೋಷ ವಾದೀತು ಎಂದು ಕಾಣುತ್ತದೆ. ಅದು ಏನೇ ಆಗಲಿ ಸರ್ಕಾರದವರು ಮಾಡತಕ್ಕದ್ದು ಎಲ್ಲಾ ಸರಿ. ನಾವು ಎಲ್ಲವನ್ನೂ ಬಗೆಹರಿಸುತ್ತೇವೆ ಎಂದು ಹೇಳುವುದಕ್ಕೆ ನಾನು ಸಿದ್ಧವಾಗಿಲ್ಲ. ಮಾಡತಕ್ಕ ಕೆಲಸ ಬೇಕಾದಷ್ಟು ಇದೆ. ಸ್ವತಂತ್ರವಾಗಿರತಕ್ಕ ಈ ಸಮಯದಲ್ಲಿ ಅನೇಕ ಸಮಸ್ಯೆಗಳು ಬಂದಿವೆ, ಅವನ್ನೆಲ್ಲಾ ಬಗೆಹರಿಸುವುದು ಸುಲಭವಾದ ಕೆಲಸವಲ್ಲ. ಅದಕ್ಕೆ ಕಾಲ ಬೇಕು, ಶಕ್ತಿ ಬೇಕು ಮತ್ತು ಅನೇಕ ರೀತಿಯ ಸೌಲತ್ತುಗಳು ಬೇಕು. ಇವುಗಳೆಲ್ಲಾ ಬೇಕಾಗತಕ್ಕ ಸಂದರ್ಭದಲ್ಲಿ ನಾವು ಎಲ್ಲವನ್ನೂ ಒಂದೇ ಸಲ ಮಾಡುತ್ತೇವೆ ಎಂದು ಹೇಳುವ ದಡ್ಡತನ ನಮ್ಮಲ್ಲಿ ಇಲ್ಲ. ಸ್ವಲ್ಪವನ್ನು ದೊಡ್ಡದಾಗಿ ಟೀಕೆ ಮಾಡಿಕೊಂಡು ಹೇಳುವುದು ಅವರ ದಡ್ಡತನ. ಅದುಹೋಗ ಬೇಕು ಈ ಕೆಲಸಗಳನ್ನು ಮಾಡುವುದಕ್ಕೆ ಹಣ ಬೇಕು. ರೈತರಿಗೆ ಸಲ್ಲಬೇಕಾಗಿರುವುದು ಸಲ್ಲಬೇಕು, ಹಾಗೆ ಸಿಕ್ಕದಿದ್ದರೆ ವ್ಯವಸಾಯ ಒಂದು ಕೈಗಾರಿಕೆಯಾಗಿ ಬೆಳೆಯುವುದಿಲ್ಲ, ನಮ್ಮ ಅಭಾವ ಪರಿಹಾರವಾಗುವುದಿಲ್ಲ. ಒಂದು ಅಂಶ ತೀಕ್ಷ್ಣವಾಗಿ ಹೇಳಬೇಕೆಂದರೆ, ಇದು ನಾಚಿಕೆಗೇಡಿನ ಮಾತು. ನಾವು ಬೇರೆಕಡೆಗೆ ಹೋಗಿ ಕೈ ಒಡ್ಡಿ ಭಿಕ್ಷೆಬೇಡಿ ಅನ್ನ ತರುತ್ತಾ ಇದ್ದೇವೆ. ಇದು ನಿಲ್ಲಬೇಕು. ನಿಲ್ಲಬೇಕಾದರೆ ರೈತನಿಗೆ ಸಾಕಾದಷ್ಟು ಸಹಾಯ ಬೇಕು. ಅವನಿಗೆ ಒಳ್ಳೆಯ ಧಾರಣೆ ಸಿಕ್ಕಬೇಕು. ಇದು ಆಗುತ್ತಾ ಇಲ್ಲ ಎಂಬುದು ಎಲ್ಲರ ಅಭಿಪ್ರಾಯ, ಹೌದು ಅವನ ಉತ್ಪನ್ನ ಜಾಸ್ತಿಯಾಗಬೇಕಾದರೆ ಅವನಿಗೆ ಅನುಕೂಲತೆಯೂ ಜಾಸ್ತಿಯಾಗಬೇಕು. ಬೆಳೆಯತಕ್ಕ ಶಕ್ತಿ ಬೇಕು, ಶಕ್ತಿ ಕೊಡತಕ್ಕ ತಾಕತ್ತು ಕೊಡಬೇಕಾದರೆ ಸಾಲವನ್ನು ತಂದು ಸರ್ಕಾರ ಯಾವ ರೈತನಿಗೆ ಸಹಾಯ ಮಾಡುತ್ತದೆಯೋ ಆ ಸರ್ಕಾರಕ್ಕೆ ಆ ರೈತನೂ ಸಹ ಸ್ವಲ್ಪ ಮುಂದೆ ಬಂದು ಕೆಲವು ಕಾಲವಾದರೂ ಅನುಕೂಲ ಸ್ಥಿತಿಗೆ ಬರುವವರೆಗೆ ನಾನು ಸಹಾಯ ಮಾಡುವುದಕ್ಕೆ ಸಿದ್ಧನಾಗಿದ್ದೇನೆ, ನನಗೆ ಹೆಚ್ಚು ಹಣ ಕೊಡಿರಿ ಎಂದು ಹೇಳಬೇಕು. ಸರ್ಕಾರ ಹಾಕತಕ್ಕ ಕಂದಾಯವನ್ನು ಕರಭಾರವನ್ನು ಹೊರುವುದಕ್ಕೆ ಸಿದ್ಧವಾಗಿರಬೇಕು. ಇವತ್ತು ಮೈಸೂರು ಸರ್ಕಾರದಲ್ಲಿ ಈ ಒಂದೆರಡು ವರ್ಷಗಳಲ್ಲಿ ಏನು ಪ್ರಗತಿ ಸಾಧನೆಯಾಗಿದೆ ಇದು ಹಿಂದೆ 20__30

ವರ್ಷಗಳಲ್ಲಿ ಮಾತ್ರವಲ್ಲ 100 ವರ್ಷಗಳಲ್ಲಿ ಆಗಿಲ್ಲ ಎಂದು ಸ್ಪಷ್ಟವಾಗಿ ಹೇಳಬಹುದು. ಈಗಿನ ಪರಿಸ್ಥಿತಿ ಹಣಕಾಸಿನ ದೃಷ್ಟಿಯಿಂದ ಸರಿಯಾಗಿಲ್ಲ. ಜೊತೆಗೆ ಎಲ್ಲ ಅನುಕೂಲಗಳೂ ಆಗಬೇಕು ಇಂತಹ ಸಂದರ್ಭದಲ್ಲಿ ರೈತರೂ ಸಹ ಸ್ವಲ್ಪಮಟ್ಟಿಗೆ ಮುಂದೆ ಬಂದು ಕಂದಾಯ ಕೊಡುವುದಕ್ಕೆ ಸಿದ್ಧವಾಗಬೇಕು. ಅವರು ಕೊಡುವುದಕ್ಕೆ ಸಿದ್ಧವಾದರೂ ಬೇಡ ಎಂದು ಹೇಳುವವರು ಜಾಸ್ತಿಯಾಗಿದ್ದಾರೆ, ಅನೇಕ ಸಂದರ್ಭಗಳಲ್ಲಿ; ಒಂದು ಆಗುತ್ತದೆ, ಟೀಕೆ ಟಿಪ್ಪಣಿಗಳನ್ನು ಇಲ್ಲೂ ಮತ್ತು ಹೊರಗೂ ನೋಡಿದಾಗ ಏನಾಗಿದೆ ಎಂದರೆ, ಆಗಬೇಕಾದ ಕೆಲಸಕ್ಕೆ ಹರಕತ್ತು, ಆಗಬಾರದ ಕೆಲಸಕ್ಕೆ ಕುಮ್ಮಕ್ಕು ಇದು ಹೆಚ್ಚಾಗುತ್ತಾ ಇದೆ. ಇದು ವಿಷಾದ ಪಡತಕ್ಕ ವಿಚಾರ. ರೈತರು ಈ ಹೊರೆ ಹೊರುವುದು ಅವಶ್ಯಕ. ಈ ಹೊರೆ ಸಮಾಜದ ಬಾಕಿ ಭಾಗಗಳಲ್ಲಿ ಬೇರೆ ಕ್ಷೇತ್ರಗಳಲ್ಲೂ ಬೀಳುತ್ತದೆ. ಇವತ್ತು ನಾನಾ ರೀತಿಯಲ್ಲಿ ಅಭಾವ ಇದೆ, ಅದನ್ನು ಕಡಿಮೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಅದಕ್ಕೆ ಏನೇನು ಕೆಲಸವಾಗಬೇಕೋ ಅದನ್ನು ಬಹಳ ಹೆಚ್ಚಿನ ರೀತಿಯಲ್ಲಿ, ಇವತ್ತು ಹೆಮ್ಮೆ ಪಡತಕ್ಕ ರೀತಿಯಲ್ಲಿ ಮಾಡುತ್ತಾ ಇದ್ದೇವೆ. ಅರ್ಧಗಂಟೆ ಮಾತ್ರ ಮಾತನಾಡಬೇಕೆಂದು ಇದ್ದೆ. ಈಗಾಗಲೇ ಕಾಲ ಮುಗಿಯುತ್ತಾ ಬಂತು ಮಾನ್ಯ ಸದಸ್ಯರು ಇವತ್ತು ಬಹಳ ವಿಧಾಯಕವಾಗಿ ಮಾತನಾಡಿದ್ದಾರೆ ಅನೇಕ ಜನರು ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯವರು ಕಂದಾಯವನ್ನು ಎಲ್ಲವನ್ನೂ ಕೊಟ್ಟಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಆರೀತಿಯಲ್ಲೇ ನಡೆದುಕೊಂಡು ಹೋಗಲಿ ಬಹಳ ಒಳ್ಳೆಯದು. ದಕ್ಷಿಣ ಕನ್ನಡ ಜಿಲ್ಲೆಯವರು ಒಳ್ಳೆಯವರು ಅಂದ ಮಾತ್ರಕ್ಕೆ ಬಾಕಿಯವರು ಕೆಟ್ಟವರು ಅಂತ ಆಗುವುದಿಲ್ಲ. ರಾಮ ಒಳ್ಳೆಯವನು ಎಂದರೆ ಲಕ್ಷ್ಮಣ ಕೆಟ್ಟವನು ಅಂತ ಅಲ್ಲ. ಒಟ್ಟಿನಲ್ಲಿ ಕಟ್‌ಮೋಷನ್ಸ್‌ನಲ್ಲಿ ಇರತಕ್ಕ ಈ ಸೀಡ್ ಫಾರಂಸ್, ಪವರ್ ಟಿಲ್ಲರ್ಸ್, ಇನ್‌ಸೆಕ್ಟಿಸೈಡ್ಸ್, ಫರ್ಟಿಲೈಸರ್ಸ್, ನೀರಾವರಿ ಬಾವಿ, ಪಂಪ್‌ಸೆಟ್ಟುಗಳು, ಅವುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಇವುಗಳನ್ನು ಏನೇನು ಕೇಳುತ್ತಾ ಇದ್ದೀರೋ ಇದ್ಯಾವುದೂ ಹೊಸದಲ್ಲ. ಸರ್ಕಾರದವರು ಆಲೋಚನೆ ಮಾಡಿ ಏನೇನು ತೀರ್ಮಾನ ಮಾಡಿದ್ದೇವೆಯೋ ಅದನ್ನೆಲ್ಲಾ ಹೇಳಿದ್ದೇನೆ ; ಇನ್ನೇನನ್ನೂ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಇವತ್ತಿನ ಪರಿಸ್ಥಿತಿಯಲ್ಲಿ ರೈತನಿಗೆ ಏನು ಸಹಾಯ ಆಗಬೇಕೋ ಅದನ್ನೆಲ್ಲಾ ಸರ್ಕಾರದವರು ಮಾಡುತ್ತಾ ಇದ್ದಾರೆ, ತೀವ್ರಗತಿಯಿಂದ ಮಾಡಬೇಕೆನ್ನುವುದು ಒಂದೇ ವಿನಾ ಹೊಸ ಸೂಚನೆ ಏನೂ ಬಂದಿಲ್ಲ. ವಿಧಾಯಕವಾದ ಸೂಚನೆಗಳಿಗೆ ಆಸಕ್ತಿ, ಪ್ರೋತ್ಸಾಹ ಸಿಕ್ಕಬೇಕಾಗಿದೆ ಅದು ಸಂತೋಷಪಡತಕ್ಕ ಮಾತು ಅದಕ್ಕೆ ಯಾವ ವಿರೋಧವೂ ಇಲ್ಲ ಎಂದು ನಂಬಿದ್ದೇನೆ.

ಶ್ರೀ ಬಿ. ರಾಚಯ್ಯ (ಮೀನುಗಾರಿಕೆ ಮತ್ತು ಅರಣ್ಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ಅರಣ್ಯ ಮತ್ತು ಮೀನುಗಾರಿಕೆಗಳಿಗೆ ಸಂಬಂಧಪಟ್ಟ ಬೇಡಿಕೆಯ ಮೇಲೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಮಾತನಾಡಿದ ಬಹುಮಂದಿ ಸದಸ್ಯರು ಬಹಳ ನೀರಸವಾದ, ಸಪ್ಪೆಯಾದ, ಭಾಷಣ ಗಳನ್ನು ಮಾಡಿದರೆಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಇದನ್ನು ನೋಡಿದರೆ ಬಹುಶಃ ಪಾಪ. ಅರಣ್ಯ ಇಲಾಖೆಯ ವಿಷಯದಲ್ಲೇನು ಮಾತನಾಡುವುದು ಎಂದು ತಾತ್ಸಾರವಿದ್ದ ಹಾಗೆ ಕಾಣುತ್ತದೆ ಮಾತನಾಡ ದಿದ್ದರೆ ಎಲ್ಲಾ ಬಹಳ ಚೆನ್ನಾಗಿದೆಯೆಂದು ಭಾವಿಸಿಕೊಳ್ಳಬಹುದು ಎಂದು ಗಾಂಜಿ ವೀರಪ್ಪನವರು ಹೇಳುತ್ತಾರೆ. ಒಟ್ಟಿನಲ್ಲಿ ಈ ದಿವಸ ದೇಶದಲ್ಲಿ ಮಳೆಯಿಲ್ಲ, ಅಭಾವವಿದೆ ಎಂದು ಹೇಳುತ್ತಿರುವುದಕ್ಕೆ ಕಾರಣ ಬಹುಶಃ ಪ್ರಕೃತಿಯ ಒಂದು ಸಮತೋಲನವನ್ನು ನಾವು ಇಟ್ಟುಕೊಳ್ಳದಿರುವುದು ಎಂಬುದನ್ನು ಮಾನ್ಯ ಸದಸ್ಯರು ಮನಗಾಣಬಹುದು. ಯಾವ ದೇಶದಲ್ಲಿ ಅರಣ್ಯ ಉತ್ಕೃಷ್ಟವಾಗಿದೆ ಆ ದೇಶದಲ್ಲಿ ಇರುವ ಸಂಪದಭಿವೃದ್ಧಿ ಯನ್ನು ನಾವು ನೋಡಿದರೆ ಮಾನವನಿಗೂ ಅರಣ್ಯಕ್ಕೂ ಮೊದಲಿನಿಂದಲೂ ಕೂಡ ಬಹಳ ನಿಕಟವಾದ ಸಂಬಂಧ ಬೆಳೆದಿದೆ ಎಂಬುದು ವ್ಯಕ್ತವಾಗುತ್ತದೆ. ಯಾವ ಸಂಸ್ಕೃತಿಯಾಗಲಿ ಅಥವ ಒಳ್ಳೆಯ ಕೆಲಸಕಾರ್ಯವಾಗಲಿ ಪ್ರಾರಂಭವಾಗಿರುವುದು ಅರಣ್ಯದಿಂದ ಎಂಬುದನ್ನು ಶ್ರೀಮತಿ ನಾಗರತ್ನಮ್ಮನವರು ಜ್ಞಾಪಕಮಾಡಿಕೊಳ್ಳ ಬೇಕು.

ಸ್ವಾಮಿ, ಅರಣ್ಯಗಳು ಮನುಷ್ಯನ ನೈತಿಕ ಬೆಳವಣಿಗೆಗೆ ಮತ್ತು ನಾಗರೀಕತೆಗೆ ಸಹಾಯಮಾಡಿರುವುದರ ಜೊತೆಗೆ ಮನುಷ್ಯನಿಗೆ ಬೇಕಾಗಿರುವ, ಅವಶ್ಯಕವಾಗಿರುವ ಮರ-ಮುಟ್ಟುಗಳನ್ನು, ಕೈಗಾರಿಕೆಗಳಿಗೆ, ವಾಸದ ಮನೆಗಳಿಗೆ, ದನಗಳಿಗೆ ಮತ್ತು ಜನಗಳಿಗೆ ಬೇಕಾಗಿರುವ ಸಂಪತ್ತನ್ನು ಒದಗಿಸುತ್ತಿವೆ. ಇದಲ್ಲದೆ ದೇಶಕ್ಕ ಅತ್ಯಾವಶ್ಯಕವಾಗಿ ಬೇಕಾಗಿರುವ ಮಳೆಯನ್ನು ತರಿಸುವುದಕ್ಕೆ ಸಹಕಾರಿಯಾಗಿವೆ. ಈ ರೀತಿಯಾದ ಅನೇಕ ಕಾರಣಗಳಿಂದ ಅರಣ್ಯವು ನಮಗೆ ಅತ್ಯಾವಶ್ಯಕವೆಂಬುದನ್ನು ನಾವು ಮನಗಾಣಬೇಕು. ಈ ದೃಷ್ಟಿಯಿಂದ ಅರಣ್ಯಗಳಿಗೆ ಈಗಿರುವುದಕ್ಕಿಂತ ಹೆಚ್ಚಿನ ಪ್ರಾಶಸ್ತ್ಯ ಕೊಡುವುದಾದರೆ ಈ ದಿವಸ ನಾವೇನು ಅಭಾವ ಕಾಣು ತ್ತಿದ್ದೇವೆ, ಮಳೆಯಿಲ್ಲದೆ ಏನು ತೊಂದರೆ ಪಡುತ್ತಿದ್ದೇವೆ ಅದು ಹೋಗಿ ಸಕಾಲದಲ್ಲಿ ಮಳೆಯಾಗಿ ಜನರು ಸುಖವಾಗಿ ಬಾಳಲು ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಅರಣ್ಯದ ಅಭಿವೃದ್ಧಿಯ

(ಶ್ರೀ ಬಿ. ರಾಚಯ್ಯ)

ಕಡೆಗೆ ಹೆಚ್ಚು ಗಮನ ಹರಿಸಿದ್ದರೆ ಅವರಿಗೆ ಇದರ ಮೇಲೆ ಹೆಚ್ಚಿನ ಅಭಿಮಾನವಿದೆ ಎಂದು ಭಾವಿಸುತ್ತಿದ್ದೆ· ಇನ್ನಾದರೂ ಅವರು ಈ ರೀತಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಮಾತನಾಡಿದ ಬಹುಮಂದಿ ಸದಸ್ಯರು ಕಳಿಸಿರುವ ಖೋತಾ ನಿರ್ಣಯಗಳನ್ನು ವಿಮರ್ಶೆ ಮಾಡಿದರೆ ಅವನ್ನು 5 ಭಾಗಗಳಾಗಿ ವಿಂಗಡಿಸಬಹುದು. ಮೊದಲನೆಯದು ಅರಣ್ಯದಲ್ಲಿ ಎಷ್ಟು ಗಿಡಗಳನ್ನು ಹಾಕ ಲಾಗುತ್ತಿದೆ, ಹಾಕಿರುವುದರಲ್ಲಿ ಈ ದಿವಸ ಎಷ್ಟಿವೆ ಎಂಬುದು, ಎರಡನೆಯದು ಅರಣ್ಯದಲ್ಲಿ ಬರುವ ಉತ್ಪತ್ತಿ ಸಾಲದು, ಹೆಚ್ಚಾಗಬೇಕು ಎಂಬುದು, ಮೂರನೆಯದು ಅರಣ್ಯದಲ್ಲಿ ಬಹಳ ಬೆಲೆಬಾಳುವ ಗಂಧದ ಮರ ಮುಂತಾದುವುಗಳು ಬಹಳವಾಗಿ ಸಾಗಾಣಿಕೆಯಾಗುತ್ತಿವೆ, ಅದನ್ನು ತಡೆಗಟ್ಟಲು ಹೆಚ್ಚು ಸಿಬ್ಬಂದಿ ನೇಮಿಸ ಬೇಕು ಎಂಬುದು, ನಾಲ್ಕನೆಯದು ಎಷ್ಟು ಭೂಮಿಯನ್ನು ಸಾಗಿಗೆ ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಿಲ್ಲ, ಹೆಚ್ಚು ಸಾಗುವಳಿಗೆ ಕೊಡಬೇಕು ಎಂಬುದು, ಐದನೆಯದು ಕೈಗಾರಿಕೆಗಳನ್ನು ನಾವು ಹೆಚ್ಚಾಗಿ ಸ್ಥಾಪಿಸುವುದಕ್ಕೆ ಸಾಕಷ್ಟು ಪ್ರೋತ್ಸಾಹ ಕೊಟ್ಟಿಲ್ಲ ಎಂಬುದು. ಇದರ ಜೊತೆಗೆ ಕೈಗಾರಿಕೆಗಳಿಗೆ ಕೊಟ್ಟಿರುವ ಮರಗಳಾಗಲಿ ಬೊಂಬುಗಳಾಗಲಿ ಸರಿಯಾದ ಬೆಲೆಗೆ ಕೊಡದೆ ಸರಕಾರಕ್ಕೆ ನಷ್ಟವಾಗುವ ರೀತಿ ಕೊಟ್ಟಿದ್ದಾರೆ ಎಂದೂ ಹೇಳಿದ್ದಾರೆ. ಮಾನ್ಯ ಸದಸ್ಯರು ಈ ವಿಧವಾದ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಇತರ ಕೆಲವು ಸದಸ್ಯರು ಈ ಇಲಾಖೆಯಲ್ಲಾಗಿರುವ ಕೆಲಸಕಾರ್ಯಗಳ ವಿಷಯದಲ್ಲಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿರುವುದಲ್ಲದೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸವಾಗಬೇಕೆಂದು ಹೇಳಿದ್ದಾರೆ. ಅವರಿಗೆ ನಿಜವಾಗಿಯೂ ಕೂಡ ಧನ್ಯವಾದಗಳನ್ನರ್ಪಿಸುತ್ತೇನೆ. ಒಳ್ಳೆಯ ಕೆಲಸಕಾರ್ಯ ಆಗಿರುವ ಕಡೆ ಒಳ್ಳೆಯ ಮಾತನ್ನಾಡಿದರೆ ಅಧಿಕಾರಿಗಳಿಗೆ ಮತ್ತು ಇಲಾಖೆಯ ಜವಾಬ್ದಾರಿಯನ್ನು ವಹಿಸಿರುವವರಿಗೆ ಉತ್ತೇಜನ ದೊರೆಯುತ್ತದೆ. ಅದೇ ರೀತಿಯಿಂದ ಎಲ್ಲಿ ಕೆಲಸಕಾರ್ಯ ವಾಗಿಲ್ಲ ಅದನ್ನು ನಿಷ್ಪಕ್ಷಪಾತವಾಗಿ ಹೇಳಿದರೆ ಒಪ್ಪಿಕೊಳ್ಳುವುದು ನಿಜವಾಗಿಯೂ ಕೂಡ ರಾಜಕೀಯ ಧರ್ಮ ನಮ್ಮ ಇಲಾಖೆಯ ಕೆಲಸಕಾರ್ಯಗಳ ವಿಷಯವನ್ನು ಬಹುಶಃ ಆರ್ಥಿಕ ಸಚಿವರು ತಮ್ಮ ಇಲಾಖೆಗಳ ಪ್ರೋಗ್ರೆಸ್ಸನ್ನು ರಿವ್ಯೂ ಮಾಡುವಾಗ ಬಡ್ಜೆಟ್ ವಿವರಣೆಯ ರೂಪವಾಗಿ ಮಾನ್ಯ ಸಭೆಗೆ ತಿಳಿಸಿದ್ದಾರೆ, ಅದನ್ನು ನೋಡಿದರೆ ಅನಾವಶ್ಯಕವಾಗಿರುವ ಒಂದೆರಡು ಟೀಕೆಗಳಿಗೆ ಅವಕಾಶವಾಗುತ್ತಿರಲಿಲ್ಲ ಎಂದು ಭಾವಿಸಿದ್ದೇನೆ. ಮೊದಲನೆಯದಾಗಿ ಪ್ಲಾಂಟೇಷನ್ಸ್ 5 ವರ್ಷಗಳಲ್ಲಿ ಮಾಡಿರುವ ಕೆಲಸಕಾರ್ಯಗಳನ್ನು ತಮ್ಮ ಅನುಮತಿ ಬೇಡಿ ಸಭೆಯ ಮುಂದಿಡುತ್ತೇನೆ. 1956ನೆಯ ಇಸವಿಯ ಸುಮಾರಿನಲ್ಲಿ ನಮ್ಮಲ್ಲೇನು ಪ್ಲಾಂಟೇಷನ್ ಆಗಿತ್ತು, ಈ ದಿವಸ ಎಷ್ಟಾಗಿದೆ ಎಂಬ ವಿವರ ಕೊಟ್ಟರೆ ಮಾನ್ಯ ಸದಸ್ಯರಿಗೆ ತೃಪ್ತಿಯಾಗಬಹುದೆಂದು ಭಾವಿಸಿದ್ದೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ತೇಗದ ಮರವನ್ನು 1,21,652 ಎಕರೆಗಳಲ್ಲಿ, ಹಾಕಿತ್ತು: ಹಾಗೆಯೇ ಮೃದು ಮರವನ್ನು 8,052 ಎಕರೆಗಳಲ್ಲಿ. ಗೋಡಂಬಿ 11,005 ಎಕರೆಗಳಲ್ಲಿ, ಸೌದೆ ಮತ್ತು ಇತರೆ ಕಾಡು ಜಾತಿ ಮರ, 1,18,852 ಎಕರೆಗಳಲ್ಲಿ ಹಾಕಿತ್ತು, ಒಟ್ಟಿನಲ್ಲಿ ಎರಡನೆ ಯೋಜನೆಯ ಅಂತ್ಯದಲ್ಲಿ 2,60,011 ಎಕರೆಗಳಲ್ಲಿ ಗಿಡ ಹಾಕಿ ಬೆಳೆಸಿದೆ. ಮೂರನೆಯ ಪಂಚವಾರ್ಷಿಕ ಯೋಜನೆ ಅಂತ್ಯದಲ್ಲಿ 1,71,012 ಎಕರೆಗಳಲ್ಲಿ ತೇಗ, 23,022 ಎಕರೆಗಳಲ್ಲಿ ಮೃದು ಮರ, 28,547 ಎಕರೆಗಳಲ್ಲಿ ಗೋಡಂಬಿ, 2,91,741 ಎಕರೆಗಳಲ್ಲಿ ಸೌದೆ ಮತ್ತಿತರ ಕಾಡು ಜಾತಿ ಮರ, ರಬ್ಬರ್ 1,288 ಎಕರೆಗಳಲ್ಲಿ ಲಿನೋಲಿಯಂ 1,301 ಎಕರೆಗಳಲ್ಲಿ ಹಾಕಿ ಹೀಗೆ ಒಟ್ಟಿನಲ್ಲಿ 5,16,911 ಎಕರೆಗಳಲ್ಲಿ ಹೊಸದಾಗಿ ಕಾಡನ್ನು ಹೆಚ್ಚಿಸುವುದಕ್ಕೆ ಇಲಾಖೆಯವರು ಪ್ರಯತ್ನಿಸಿದ್ದಾರೆ. ಬಹುಶಃ ಎಲ್ಲಿ ಬರಡು ಭೂಮಿ ಇತ್ತೋ ಅಂಥಲ್ಲಿ ಗಿಡಗಳನ್ನು ಹಚ್ಚಿ ಹಸುರಾಗಿ ಕಾಣುವಂತೆ ಮಾಡಿದ್ದಾರೆ. ಅಲ್ಲಿ ಹಾಕಿರತಕ್ಕಂಥ ಗಿಡಗಳಲ್ಲಿ ಎಷ್ಟು ಗಿಡಗಳು ಉಳಿದಿವೆ ಎಷ್ಟು ಸತ್ತು ಹೋಗಿವೆ ಎಂದು ಶ್ರೀ ಮುಕ್ಕಣ್ಣಪ್ಪನವರು ಕೇಳಿದರು. ಅರಣ್ಯ ಇಲಾಖೆಯಲ್ಲಿ ಇರತಕ್ಕಂಥ ಮೈದಾನ ಪ್ರದೇಶ ಏನು ಇದೆಯೋ ಅಂಥ ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಕೊಡಿ ಎಂದು ಹೇಳಿ ಫಲವತ್ತಾದ ಭೂಮಿಯನ್ನು ರಿಲೀಜ್ ಮಾಡಿಸುತ್ತಾರೆ. ಇದಲ್ಲದೆ ಜಲಾಶಯಗಳಿಗಾಗಿ ಕೊಡಬೇಕಾಗುತ್ತದೆ, ಕೆರೆ ಕಟ್ಟೆಗಾಗಿ ಕೊಡಬೇಕಾಗುತ್ತದೆ, ವ್ಯಾಲಿಯಲ್ಲಿರತಕ್ಕ ಫಲವತ್ತಾದ ಭೂಮಿಯನ್ನು ಸಾಗುವಳಿಗೆ ಕೊಡ ಬೇಕಾಗುತ್ತದೆ. ಆದುದರಿಂದ ಅರಣ್ಯ ಇಲಾಖೆಯ ಒಳ್ಳೇ ಭೂಮಿಯಲ್ಲಿ ಮರ ಬೆಳೆಸುವುದಕ್ಕೆ ಅವಕಾಶವಿಲ್ಲ. ಉಳಿದಿರುವ ಅರಣ್ಯ ಇಲಾಖೆ ಪ್ರದೇಶ ಬೆಟ್ಟ ಗುಡ್ಡ ಮತ್ತು ಕಲ್ಲು ಮಣ್ಣುಗಳಿಂದ ಕೂಡಿದ್ದ ಭೂಮಿಯಲ್ಲಿ ಗಿಡ ಬೆಳೆಯಬೇಕಾದರೆ ಕಷ್ಟವಾಗಿದೆ. ಕೇಂದ್ರದ ಸೆಂಟ್ರಲ್ ಬೋರ್ಡ್ ಆಫ್ ಫಾರೆಸ್ಟ್ ಅವರು ಕಳೆದ ವರ್ಷ ಯಾವ ಯಾವ ಕ್ಷೇತ್ರದಲ್ಲಿ ಯಾವ ಯಾವ ಪ್ರಾಂತ್ಯದಲ್ಲಿ ಎಷ್ಟೆಷ್ಟು ಎಕರೆಯಲ್ಲಿ ಗಿಡಗಳು ನಿಂತಿವೆ ಎಂಬುದನ್ನು ತಜ್ಞರಿಂದ ಪರೀಕ್ಷೆ ಮಾಡಿರುವುದರಲ್ಲಿ ನಮ್ಮ ಸಂಸ್ಥಾನ ಮೊದಲನೇ ಸ್ಥಾನ ಪಡೆದು ಬಾಬು ರಾಜೇಂದ್ರ ಪ್ರಸಾದ್ ಷೀಲ್ಡ್ ಪಡೆದಿದೆ ಎಂಬುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಕೆಲವು ಕಡೆ ಮಳೆ ಅಭಾವದಿಂದ ಎಷ್ಟೋ ಎಕರೆ ಭೂಮಿಯಲ್ಲಿ ಮರ ಗಿಡಗಳನ್ನು ಬೆಳೆಸಲು ಆಗಿಲ್ಲ. ಮಳೆ ಬಂದಮೇಲೆ ಹಾಕಬೇಕೆಂದು ಇಟ್ಟುಕೊಂಡಿದ್ದೇವೆ. ಒಂದು ಎಕರೆಯಲ್ಲಿ ಎಷ್ಟು ಉತ್ಪತ್ತಿ ಬಂದಿದೆ ಎಂಬುದಕ್ಕೆ ಲೋಕನಾಥನ್ ಕಮಿಟಿ ರಿಪೋರ್ಟಿನಲ್ಲಿ ನೋಡಿ, ನಾವು ಹಿಂದೆ ಬಿದ್ದಿದ್ದೇವೆ ಎಂದು ಶ್ರೀ ಮುಕ್ಕಣ್ಣಪ್ಪನವರು ಹೇಳಿದರು. ಅದು ರಿಪೋರ್ಟಿನ ಯಾವ ಪುಟದಲ್ಲಿದೆ ಎಂದು ಕೇಳಿದರೆ ಅವರು ತಮ್ಮದೇ ಆದ ಭಾಷಣದ

ರೀತಿಯಲ್ಲಿ ಏನೋ ಹೇಳಿದರು. ಲೋಕನಾಥನ್ ಅವರು **Development of forests and Forest borne Industries in Mysore** ಎಂಬ ಒಂದು ಉಪಯುಕ್ತವಾದ ಪುಸ್ತಕ ಬರೆದು ಕಳಿಸಿದ್ದಾರೆ. ಆ ಪುಸ್ತಕದ 9ನೇ ಪೇಜಿನಲ್ಲಿ ಹೇಳಿದೆ. **Financial Yield of Forest in Mysore** ಬಗ್ಗೆ ಲೆಕ್ಕ ಹಾಕಿ ಒಂದು ಎಕರೆಗೆ ಆಲ್ ಇಂಡಿಯಾ ಫಿಗರ್ 1,541 ಉತ್ಪತ್ತಿಯಾಗುತ್ತದೆ. ಮೈಸೂರು ಸಂಸ್ಥಾನದಲ್ಲಿ 4,542 ರೂಪಾಯಿ ಉತ್ಪಾದನೆಯಾಗುತ್ತದೆ ಎಂದು ಹೇಳಿದ್ದಾರೆ. ಇದು ಅನ್-ಆರ್ಗನೈಜ್ಡ್ ಫಾರೆಸ್ಟ್. ಇನ್ನು ಆರ್ಗನೈಜ್ಡ್ ಫಾರೆಸ್ಟಿನಲ್ಲಿ ಆಲ್ ಇಂಡಿಯಾ ಫಿಗರ್ 2,500 ಇದೆ. ಮೈಸೂರು ಸಂಸ್ಥಾನದಲ್ಲಿ 6,724 ರೂಪಾಯಿ ಉತ್ಪತ್ತಿಯಾಗುತ್ತದೆ.

> "Increased realisation of revenue is chiefly due to timber and teak and sandalwood."

They have also said that Mysore holds the advantageous position. ಮಾನ್ಯ ಸದಸ್ಯರು ಇದನ್ನು ದಯವಿಟ್ಟು ಓದಬೇಕು ಎಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಉತ್ಪಾದನೆ ಈ ಇಲಾಖೆಯಲ್ಲಿ ಎಷ್ಟು ಬರಬೇಕೋ ಅಷ್ಟು ಬರುತ್ತಾ ಇಲ್ಲ. ಕಾಲು ಭಾಗ ಉತ್ಪತ್ತಿ ಬರುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದರು. ಮಿಕ್ಕಿದ್ದು ಕಳ್ಳ ಸಾಗಾಣಿಕೆಯಾಗುತ್ತದೆ ಎಂಬ ಭಾವನೆ ಮಾಡಿಕೊಂಡರುವ ಹಾಗೆ ಇದೆ. ಇಂಡಿಯಾ ದೇಶದ ಎಲ್ಲ ಪ್ರಾಂತ್ಯಗಳ ನಿವ್ವಳ ಉತ್ಪಾದನೆಯನ್ನು ಹೋಲಿಸಿ ನೋಡಿದರೆ ಕೇರಳ ಪ್ರಾಂತ ಮೊದಲನೇ ಸ್ಥಾನ ಪಡೆದಿದೆ. ಎರಡನೇ ಸ್ಥಾನ ಮೈಸೂರು ಸಂಸ್ಥಾನ ಪಡೆದಿದೆ. ಈ ಎರಡು ರಾಜ್ಯಗಳಲ್ಲಿ ಇರತಕ್ಕ ವ್ಯತ್ಯಾಸ ಏನು ಅಂದರೆ 100ಕ್ಕೆ 60 ಭಾಗ ನಮ್ಮಲ್ಲಿ ಅರಣ್ಯ ಪ್ರದೇಶ ಮರಗಳಿಲ್ಲದೆ ಇರತಕ್ಕಂಥಾದ್ದು ಇದೆ. ಕೇರಳದ ಅರಣ್ಯದಲ್ಲಿ ಒಳ್ಳೇ ಮರಗಳನ್ನು ಬೆಳೆಸಿದ್ದಾರೆ. ಇಂಡಿಯಾ ದೇಶದಲ್ಲಿ ಮಧ್ಯ ಪ್ರದೇಶ ಹೆಚ್ಚಿನ ಅರಣ್ಯ ಪಡೆದಿದ್ದರೂ ಕೂಡ ಕೇರಳಕ್ಕಿಂತ ಕಡಿಮೆ ಉತ್ಪತ್ತಿ ಒಂದು ಎಕರೆಗೆ ಮಾಡುತ್ತಾರೆ. ಎರಡನೇದ್ದು ಮೈಸೂರು ಸಂಸ್ಥಾನ ಮಾಡುತ್ತದೆ.

ಆಂಧ್ರ ಪ್ರದೇಶದಲ್ಲಿ ನೆಟ್ಟ ರೆವೆನ್ಯೂ ಪರ್ ಎಕರೆ	...	...	1.69
ಆಸ್ಸಾಮ	...	...	1.39
ಬಿಹಾರ್	...	...	1.58
ಗುಜರಾತ	...	...	3.05
ಜಮ್ಮು ಅಂಡ್ ಕಾಶ್ಮೀರ್	...	...	3.87
ಕೇರಳ	...	...	11.99
ಮಧ್ಯ ಪ್ರದೇಶ	...	...	1.86
ಮದ್ರಾಸ್	...	...	2.88
ಮಹಾರಾಷ್ಟ್ರ	...	...	2.59
ಮೈಸೂರು	...	...	5.67
ಒರಿಸ್ಸಾ	...	...	1.56
ಪಂಜಾಬ್ ಅಂಡ್ ರಾಜಸ್ಥಾನ	...	...	(ಮೈನೆಸ್)
ಉತ್ತರ ಪ್ರದೇಶ	...	...	3.89
ವೆಸ್ಟ್ ಬೆಂಗಾಲ್	...	...	2.13

ಇದನ್ನು ನೋಡಿದರೆ ಎರಡನೇ ಸ್ಥಾನ ನಮ್ಮ ಮೈಸೂರು ಸಂಸ್ಥಾನ ಪಡೆದಿದೆ ಎಂದು ಹೇಳಬಹುದು. ಆದರೂ ಕೂಡ ಇಷ್ಟು ಮಾತ್ರ ಹೇಳುತ್ತೇನೆ. ರೆವೆನ್ಯೂ ಅಂಡ್ ಎಕ್ಸಪೆಂಡೀಚರ್ ನೋಡಿದರೆ 10 ಕೋಟಿ 20 ಲಕ್ಷ ರೂಪಾಯಿ ಉತ್ಪಾದನೆಯಾಗಿದೆ. ಹಿಂದಕ್ಕೆ 1961-62ರಲ್ಲಿ ಸುಮಾರು ಏಳು ಕೋಟಿ ಇತ್ತು. ಖರ್ಚು ಎಸ್ಟಾಬ್ಲಿಷಮೆಂಟ್ ಚಾರ್ಜಸ್ ಪ್ರತಿವರ್ಷ ಕಡಿಮೆಯಾಗುತ್ತಾ ಈಗ 77 ಪರ್ಸೆಂಟ್ ಇದೆ. ಇತರ ಸಂಸ್ಥಾನಗಳನ್ನು ನೋಡಿದರೆ ನಮಗೆ ಅದು ಅತ್ಯಂತ ಕಡಿಮೆ, ಚದುರ ಮೈಲಿಗೆ ಖರ್ಚು ಕಡಿಮೆ ಇದೆ. ಹೆಚ್ಚಾಗಿ ಇರತಕ್ಕ ಅರಣ್ಯ ಭೂಮಿಯನ್ನು ಕಾಪಾಡಬೇಕಾದರೆ ಫಾರೆಸ್ಟ್ ಗಾರ್ಡ್ಸ್ ಸ್ಟ್ರೆಂಗ್ತ್ ಹೆಚ್ಚಿಸಬೇಕಾಗುತ್ತದೆ. ಆಂಧ್ರ ಬೊಂಬಾಯಿ ಕೇರಳ ಮದ್ರಾಸ್ ಮೈಸೂರು ಇಷ್ಟನ್ನು ಹೋಲಿಸಿ ನೋಡಿದರೆ ಒಂದು ಬೀಟಿಗೆ ಎಷ್ಟು ಇದೆ. ಗೊತ್ತಾಗುತ್ತದೆ.

ಆಂಧ್ರ	...	...	12
ಬೊಂಬಾಯಿ	...	...	9
ಗುಜರಾತ್	...	...	10
ಮೈಸೂರು	...	...	34

(ಶ್ರೀ ಬಿ. ರಾಚಯ್ಯ)

ಒಟ್ಟಿನಲ್ಲಿ ನಮ್ಮ ಮೈಸೂರಿನಲ್ಲಿ ಒಬ್ಬ ಗಾರ್ಡನಿಗೆ 34 ಬೀಟ್ ಮಾಡಬೇಕಾಗುತ್ತದೆ. ಅಂದರೆ ಒಬ್ಬ ಗಾರ್ಡ್ 2,600 ಎಕರೆ ಭೂಮಿ ನೋಡಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದರೆ ಅರಣ್ಯ ಸಂಪತ್ತನ್ನು ಕಾಪಾಡುವುದಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲದೇ ಇರುವುದು ಗೊತ್ತಾಗುತ್ತದೆ. ಇನ್ನು ಮೂರನೆಯದಾಗಿ ಫಾರೆಸ್ಟ್ ಪ್ರೊಟೆಕ್ಷನ್‌ಗಾಗಿ ಸರಕಾರ ಸಾಕಷ್ಟು ಗಮನಕೊಡುತ್ತಾ ಇಲ್ಲ ಅನೇಕ ಕಡೆ ಕಳ್ಳ ಸಾಗಾಣಿಕೆಯಾಗುತ್ತದೆ ಎಂದು ಒಬ್ಬ ಮಾನ್ಯ ಸದಸ್ಯರು ಟೀಕೆ ಮಾಡಿದರು. ಬಹುಶಃ ಈ ಇಲಾಖೆಯಲ್ಲಿ ಹಿಂದೆ ಎಂದೂ ಇಲ್ಲದೇ ಇದ್ದಂಥ ರೀತಿಯಲ್ಲಿ ಅಲ್ಲಲ್ಲಿ ಚೆಕಿಂಗ್ ಸ್ಟೇಷನ್ಸ್ ಇರಬೇಕು ಎಂದು 600 ಚೆಕಿಂಗ್ ಸ್ಟೇಷನ್ಸ್ ಏರ್ಪಾಡು ಮಾಡಿದ್ದೇವೆ. ಇದಲ್ಲದೆ 7 ಫ್ಲೈಯಿಂಗ್ ಸ್ಕ್ವಾಡ್ಸ್ ಮಾಡಿದ್ದೇವೆ. ನಮ್ಮ ಸಂಸ್ಥಾನದಲ್ಲಿ ಎಷ್ಟು ಗಣನೀಯ ವಾದ ಪ್ರಮಾಣದಲ್ಲಿ ಗಂಧದ ಮರದ ಕಳ್ಳ ಸಾಗಾಣಿಕೆ ತಡೆಗಟ್ಟಲು ಸಾಧ್ಯವಾಯಿತು ಎಂಬುದನ್ನು ಶ್ರೀಮತಿ ರತ್ನಮ್ಮ ಮಾಧವರಾವ್ ಅವರು ಅಂಕಿ ಅಂಶಗಳಿಂದ ತಿಳಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಸ್ವಲ್ಪ ವಿವರ ಕೊಡುತ್ತೇನೆ.

1962-63 ನಂಬರ್ ಆಫ್ ಕೇಸಸ್ ಡಿಟೆಕ್ಟೆಡ್	...	...	7,746
1963-64	...	...	10,860
1964-65	...	...	12,434

9-30 A.M.

ಈ ಮೂರು ವರ್ಷಗಳಲ್ಲಿ ಕಾಂಪೌಂಡ್ ಆಗಿರುವುದು, 6925, 9641, 9795. Amount of produce involved ಮೊದಲನೆ ವರ್ಷ 2,80,310, 1963-64ರಲ್ಲಿ 4,21,511, 1964-65ರಲ್ಲಿ 3,62,744. number of cases prosecuted ಮೊದಲನೆ ವರ್ಷ 120, ಎರಡನೆ ವರ್ಷ 245, ಮೂರನೆ ವರ್ಷ 133. Amount involved ಮೊದಲನೆ ವರ್ಷ 11,770 ಎರಡನೆ ವರ್ಷ10,265, ಕಳೆದ ವರ್ಷ 10,823, ಈ ರೀತಿ ಗಂಧದ ಕಳ್ಳ ಸಾಗಾಣಿಕೆ ನಡೆಯುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಮಾನ್ಯ ಸದಸ್ಯರಿಗೆಲ್ಲಾ ಏನು ಭಾವನೆ ಇದೆಯೆಂದರೆ: ರಿಜರ್ವ್ ಫಾರೆಸ್ಟ್‌ನಲ್ಲಿ ಕಳ್ಳಸಾಗಾಣಿಕೆ ಹೆಚ್ಚು ನಡೆಯುತ್ತಿದೆ, ಇದನ್ನು ಅರಣ್ಯ ಇಲಾಖೆಯವರು ಕಂಡು ಹಿಡಿಯುವುದಕ್ಕೆ ಆಗಿಲ್ಲವೆಂದು. ಇದರಲ್ಲಿ ಒಂದು ಕಷ್ಟವೆಂದರೆ, ಐದು ಭಾಗಗಳಿಂದ ಐದು ರೀತಿಯ ಕಾನೂನುಗಳು ನಮ್ಮ ರಾಜ್ಯಕ್ಕೆ ಬಂದು ಸೇರಿದೆ, ನಮ್ಮ ರಾಜ್ಯದ ಕಾನೂನು ಪ್ರಕಾರ ಹಳೆಯ ಮೈಸೂರಿನಲ್ಲಿ ಗಂಧದ ಮರಗಳು ಸರ್ಕಾರದ ಸ್ವತ್ತಾಗಿದ್ದವು. ಬೇರೆಯವರು ಕದ್ದು ಮಾರುವುದಕ್ಕೆ ಅವಕಾಶ ವಿರಲಿಲ್ಲ. ಬಹಳ ಹಿಂದೆ ಬಳ್ಳಾರಿ, ಕೊಳ್ಳೆಗಾಲದಲ್ಲಿ ಯಾರು ಯಾರು ಗಂಧದ ಮರಗಳನ್ನು ಬೆಳೆಸಿದ್ದರೋ ಅವರಿಗೆ ಅದರಮೇಲೆ ಹಕ್ಕು ಇತ್ತು. ಅಲ್ಲಿಂದೀಚೆಗೆ ಈ ಮರಗಳ ಬೆಲೆಯನ್ನು ನಿಗದಿ ಮಾಡುವ ಹಕ್ಕು ಸರ್ಕಾರಕ್ಕೂ, ಖಾಸಗೀ ಮಾಲೀ ಕರುಗಳಿಗೂ ಇತ್ತು. ಇದರ ಬಗ್ಗೆ ಒಂದು ಯೂನಿಫಾರಮ್ ಆಕ್ಟ್ ಮಾಡಿದ್ದಾಗಿದೆ. ಇದರ ಬಗ್ಗೆ ರೂಲ್ಸ್‌ಗಳೆಲ್ಲಾ ಫೈನಲೈಸ್ ಆಗಿವೆ. ಈಗ ಲಾ ಡಿಪಾರ್ಟ್‌ಮೆಂಟ್‌ನವರು ಸ್ಕೃಟಿನಿ ಮಾಡುತ್ತಿದ್ದಾರೆ. ಒಂದೆರಡು ತಿಂಗಳಲ್ಲಿ ಫೈನಲೈಸ್ ಆಗಿ ಯೂನಿಫಾರಮ್ ರೂಲ್ಸ್ ಬಂದಾಗ ಕಳ್ಳಸಾಗಾಣಿಕೆ ಹೆಚ್ಚು ನಡೆಯುವುದಕ್ಕೆ ಅವಕಾಶವಾಗುವುದಿಲ್ಲ. ಇನ್ನು ಒಂದು ತಿಂಗಳಲ್ಲಿ ಈ ಗಂಧದ ಮರದ ಕಳ್ಳ ಸಾಗಾಣಿಕೆ ಇನ್ನೂ ಕಡಿಮೆಯಾಗುವುದಕ್ಕೆ ಸರ್ಕಾರದವರು ಏನು ಪ್ರಯತ್ನ ಮಾಡಿದ್ದಾರೆಂದರೆ, ಗಂದದ ಕಡ್ಡಿಯನ್ನು ತಯಾರು ಮಾಡುವವರಿಗೆ, ಶಿಕಾರಿಪುರ, ಸೊರಬ, ಬೆಂಗಳೂರು ಮುಂತಾದ ಕಡೆಗಳಲ್ಲಿ ಐವರಿ ವರ್ಕ್ಸ್ ಮಾಡುವವರಿಗೆ ಗಂಧದಮರ ಹೆಚ್ಚು ಬೇಕಾಗುವುದರಿಂದ, ಅವರಿಗೆ ಕಡಿಮೆ ಬೆಲೆಯಲ್ಲಿ ಕೊಡಬೇಕೆಂದು ಇದ್ದೇವೆ. ಇದರಿಂದ ಅವರುಗಳು ಕಳ್ಳ ಸಾಗಾಣಿಕೆಯ ಮೂಲಕ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಇಲಾಖೆಯವರೇ ಎಲ್ಲಾ ಮರಗಳನ್ನೂ ತೆಗೆದುಕೊಂಡು ಅವರುಗಳಿಗೆ ಅರ್ಧ ಬೆಲೆಗೆ ಕೊಡುವುದರಿಂದ ಕಳ್ಳ ಸಾಗಾಣಿಕೆ ಹೆಚ್ಚು ಆಗುವುದಕ್ಕೆ ಅವಕಾಶವಾಗುವುದಿಲ್ಲ. ಮತ್ತೊಂದು ಅಂಶವೆಂದರೆ, ಮದ್ರಾಸ್ ಪ್ರಾಂತ್ಯ, ಕೇರಳಾ ಪ್ರಾಂತ್ಯ, ಆಂಧ್ರ ಪ್ರಾಂತ್ಯಗಳವರ ಜೊತೆಯಲ್ಲಿ ಇನ್‌ಟರ್ ಸ್ಟೇಟ್ ಕಮಿಟಿಯನ್ನು ಸ್ಥಾಪನೆ ಮಾಡಿಕೊಂಡು, ನಮ್ಮ ಭಾಗದ ಗಂಧದ ಮರಗಳು ಆ ಕಡೆ ಹೋದರೆ ಅವರು ಕಂಡುಹಿಡಿದು ನಮಗೆ ಸಹಕರಿಸಬೇಕೆಂದು ಕೇಳಿದ್ದೇವೆ. ಅವರು ಸಹ ಸಹಕಾರ ನೀಡಿದ್ದಾರೆ. ಇದರಿಂದ ಬಹುಮಟ್ಟಿಗೆ ಕಳ್ಳ ಸಾಗಾಣಿಕೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗಿದೆ. Central Forest Advisory Board ನವರು ಇಡೀ ದೇಶಕ್ಕೆ ಸಂಬಂಧಪಟ್ಟ ರೀತಿ ಸ್ಯಾಂಡ್‌ಲ್‌ವುಡ್ ಬಗ್ಗೆ ಒಂದು ಕಾಮನ್ ರೂಲ್ಸ್ ಮಾಡಬೇಕೆಂದು ಹೇಳಿದ್ದಾರೆ. ನಾವು ಸಹ ಒಪ್ಪಿದ್ದೇವೆ. ಬೇರೆ ಸಂಸ್ಥಾನದವರು ಸಹ ಇದನ್ನು ಅಳವಡಿಸಿದರೆ ಕಳ್ಳ ಸಾಗಾಣಿಕೆ ಕಡಿಮೆಯಾಗುತ್ತದೆ. ಮೈಸೂರು ಸಂಸ್ಥಾನದವರು ಹೊರದೇಶಗಳಿಗೆ ಗಂಧದ ಎಣ್ಣೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಕ್ಕೆ ಒಪ್ಪಿದ್ದಾರೆ.

ಕಳ್ಳಭಟ್ಟಿ ಇಳಿಸುವವರು ಒಂದು ಕಾರ್ಖಾನೆ ಇಟ್ಟುಕೊಂಡು, ಕಳ್ಳಸಾಗಾಣಿಕೆಯಿಂದ ಬರುವ ಮರಗಳನ್ನು ಕಡಮೆ ಬೆಲೆಗೆ ಕೊಂಡು ಎಣ್ಣೆ ಇಳಿಸಿ International Market ನಲ್ಲಿ ಸರ್ಕಾರದ ಬೆಲೆಗಿಂತಲೂ ಕಡಮೆ ಬೆಲೆಗೆ ಮಾರುತ್ತಿರುವುದು ಕಂಡುಬಂದಿದ್ದರಿಂದ, ಈಗ ಗಂಧದ ಮರಗಳ ಬೆಲೆಯನ್ನು ಅರ್ಧದಷ್ಟು ಇಳಿಸಿದ್ದೇವೆ. ಗಂಧದ ಎಣ್ಣೆ ಮಾರಾಟದಿಂದ 18 ಲಕ್ಷ ರೂಪಾಯಿಗಳ ಲಾಭ ಸಂಪಾದನೆ ಮಾಡಿದ್ದೇವೆ. ಈಗ ಎಲ್ಲಾ ಮರಗಳನ್ನೂ ಸರ್ಕಾರದವರೇ ತೆಗೆದುಕೊಂಡು, ಕಾರ್ಖಾನೆಗಳವರಿಗೆ ಕಡಮೆ ಬೆಲೆಗೆ ಮಾರುವುದರಿಂದ, ಎಲ್ಲಾ ಗಂಧದ ಮರಗಳೂ ಸರ್ಕಾರದ ಸ್ವತ್ತಾಗಿರುವುದರಿಂದ, ಕಳ್ಳಬಟ್ಟಿ ಇಳಿಸುತ್ತಿದ್ದ ಗಂಧದ ಕಾರ್ಖಾನೆಗಳವರು ತಮ್ಮ ಕಾರ್ಖಾನೆಗಳನ್ನು ಮುಚ್ಚಬೇಕಾದ ಸಂಧರ್ಭ ಬಂದಿದೆ. ರೈತರುಗಳು ತಮ್ಮ ತಮ್ಮ ಜಮೀನುಗಳಲ್ಲಿರತಕ್ಕ ಮರಗಳನ್ನು ಸಂರಕ್ಷಣೆ ಮಾಡಿಕೊಳ್ಳಲು ಅವರಿಗೆ ಸರ್ಕಾರದವರು ಯಾವ ರೀತಿಯ ಉತ್ತೇಜನವನ್ನೂ ಕೊಟ್ಟಿಲ್ಲವೆಂದು ಒಬ್ಬರು ಸದಸ್ಯರು ಹೇಳಿದರು. ಅದಕ್ಕೋಸ್ಕರವಾಗಿ, ಯಾರು ಗಂಧದ ಮರಗಳನ್ನು ಬೆಳೆಸುತ್ತಾರೋ, ಸಂರಕ್ಷಣೆ ಮಾಡುತ್ತಾರೋ, ಅವರುಗಳಿಗೆ ಗಂಧದ ಮರದ ಬೆಲೆಯ ಅರ್ಧದಷ್ಟನ್ನು ಕೊಡಬೇಕೆಂದು ಸರ್ಕಾರದವರು ತೀರ್ಮಾನಿಸಿದ್ದೇವೆ ಎಂಬ ವಿಷಯವನ್ನು ಅತ್ಯಂತ ಸಂತೋಷದಿಂದ ತಿಳಿಸುತ್ತೇನೆ. ಗಂಧದ ಕಾರ್ಖಾನೆಯಲ್ಲಿ ಗಂಧದ ಕೋಟೆಗಳಿಂದ ಕೆಲವು hard woodನಲ್ಲಿ ಸರಿಯಾಗಿ ಎಣ್ಣೆ ಬರುವುದಿಲ್ಲವೆಂದು ತೆಗೆದುಕೊಳ್ಳುವುದಿಲ್ಲವೆಂದು ಕೆಲವರು ಹೇಳಿದ್ದಾರೆ. ಬಹುಶಃ ನಮ್ಮ ಗಂಧದ ಕೋಟೆಯಲ್ಲಿ ಕಳಪೆ ಮಾಲು ಇರಲಿ, ಒಳ್ಳೆಯಮಾಲು ಇರಲಿ, ಅವುಗಳನ್ನು ಡ್ರೆಸ್‌ಮಾಡಿ ಗಂಧದ ಕಾರ್ಖಾನೆಗೆ ಕೊಡುತ್ತೇವೆ. Chief Conservator of Forests ಅವರಿಗೆ ಈ ರೀತಿ ಡ್ರೆಸ್ ಮಾಡಿದ ಗಂಧದ ಕೊರಡುಗಳನ್ನು ಕಾರ್ಖಾನೆಗಳವರಿಗೆ ಕೊಡುವುದಕ್ಕೆ ಹಕ್ಕಿರುತ್ತದೆಯೇ ಹೊರತು, ಬೇರೆಯವರಿಗೆ ಹಕ್ಕು ಇರುವುದಿಲ್ಲ. ಈ ಒಂದು ವಿಚಾರದಲ್ಲಿ ಸರ್ಕಾರದ ಮನಾಪಲಿಯಾಗಿದೆಯೆಂದು ಹೇಳಬಹುದು. ಈಗಲಾದರೂ ಈ ಸಭೆಯ ಗಮನಕ್ಕೆ ತಿಳಿಸುವುದೇನೆಂದರೆ, ಈ ಗಂಧದ ಮರಗಳನ್ನು ಎಲ್ಲಾ ರೈತರುಗಳೂ, ಅದು ಸಣ್ಣ ಗಿಡವೇ ಆಗಿರಲಿ, ದೊಡ್ಡ ಗಿಡವೇ ಆಗಿರಲಿ, ಕಡಿದು ಹಾಳು ಮಾಡುವುದಕ್ಕೆ ಬದಲು, ಅದನ್ನು ರಕ್ಷಣೆ ಮಾಡಿದರೆ, ಕೋಲಾರದ ಚಿನ್ನದ ಗಣಿಯಿಂದ ಎಷ್ಟು ಪ್ರತಿಫಲ ಬರುತ್ತಿದೆಯೊ ಅಷ್ಟೇ ಪ್ರತಿಫಲ ಇದರಲ್ಲೂ ಬರುತ್ತದೆ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಮೂರನೇಯದಾಗಿ ಫಾರೆಸ್ಟ್ ಇಲಾಖೆಯಿಂದ ಹೆಚ್ಚು ಹೆಚ್ಚು ಜಮೀನನ್ನು ವ್ಯವಸಾಯಕ್ಕೆ ಕೊಟ್ಟಿಲ್ಲವೆಂದು ಕೆಲವುಸದಸ್ಯರು ಟೀಕೆಮಾಡಿದ್ದಾರೆ. ರೆವಿನ್ಯೂ ಇಲಾಖೆಯವರು ಒಪ್ಪದೆ ಇದ್ದರೂ ಸಹ ಕೆಲವರು ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು unauthorised occupation ಮಾಡಿಕೊಂಡು ಬೆಳೆ ಬೆಳೆಯುತ್ತಿದ್ದಾರೆಂದು ಕೆಲವು ಸದಸ್ಯರು ವ್ಯಕ್ತಪಡಿಸಿದರು. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದರು. ಈ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಸಭೆಯಮುಂದೆ ಇಟ್ಟರೆ ಗೊತ್ತಾಗುತ್ತದೆ. ಅರಣ್ಯ ಇಲಾಖೆಯು ಬಹಳ ಉದಾರವಾಗಿದೆ ಎಂದರೆ ತಪ್ಪಾಗುವುದಿಲ್ಲ. ಯಾರೋ ಅರಣ್ಯ ಇಲಾಖೆಯ ಸಚಿವನಾಗಿದ್ದರೂ, ಅರಣ್ಯವನ್ನು ಲಿಕ್ವಿಡೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ವ್ಯವಸಾಯಕ್ಕಾಗಿ ಅರಣ್ಯ ಇಲಾಖೆಯಿಂದ ಎಷ್ಟು ಭೂಮಿಯನ್ನು ಕೊಡಬೇಕೆಂದು ಯೋಚನೆ ಮಾಡಬೇಕಾಗಿದೆ. ಇರುವ ಜಮೀನಿನಲ್ಲೇ ಹೆಚ್ಚು ಬೆಳೆ ಬೆಳೆಯಬೇಕೇ ಹೊರತು, ಅರಣ್ಯವನ್ನು ನಾಶಮಾಡಿ ಅಲ್ಲಿಯೇ ಬೆಳೆ ಬೆಳೆಯುವುದು ಸಾಧುವಲ್ಲಾ ಎಂದು ದಿವಂಗತ ಜವಹರ್‌ಲಾಲ್ ನೆಹರು ಅವರು ಹೇಳಿದ್ದರು. ಕಾಡಿಗಾಗಿ ನಾವು ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ. ಫಾರೆಸ್ಟ್ ಇಲಾಖೆಯಿಂದ ಧರ್ಮಾ ಪ್ರಾಜೆಕ್ಟ್, ಅಂಬಲಿ ಪ್ರಾಜೆಕ್ಟ್, ಭಧ್ರಾ ಪಾಜೆಕ್ಟ್, ತುಂಗಭದ್ರಾ ಪ್ರಾಜೆಕ್ಟ್, ಶರಾವತಿ ಪ್ರಾಕೆಕ್ಟ್, ಘಟಪ್ರಭಾ ಪ್ರಾಜೆಕ್ಟ್, ನುಗು ಪ್ರಾಜೆಕ್ಟ್, ಮತ್ತು ಕಾಳೀನದಿ ಪ್ರಾಜೆಕ್ಟ್‌ಗಳಿಗಾಗಿ 68,245 ಎಕರೆಗಳಷ್ಟು ಭೂಮಿಯನ್ನು ಕೊಡಬೇಕಾಗಿ ಬಂತು. ಹೀಗೆ ಫ್ಯಾಕ್ಟರಿಗಳಿಗೋಸ್ಕರವಾಗಿ 3,827 ಎಕರೆಗಳನ್ನೂ, ಮೈನಿಂಗ್ ಏರಿಯಾಕ್ಕೆ 49,627 ಎಕರೆಗಳನ್ನೂ ಬಿಡಬೇಕಾಗಿ ಬಂತು. ಪವರ್ ಲೈನ್ಸ್‌ಗೆ 4,222 ಎಕರೆಯಷ್ಟು ಬಿಡಬೇಕಾಗಿ ಬಂದಿತು. ಮೂರು ಜನರ ಕಮಿಟಿ ಮಾಡಿದ್ದಾರೆ. ಆ ಕಮಿಟಿ ತೀರ್ಮಾನದ ಪ್ರಕಾರ 1,07,228 ಎಕರೆಗಳನ್ನು ವ್ಯವಸಾಯಕ್ಕೋಸ್ಕರ ರಿಲೀಸ್ ಮಾಡಿದ್ದೇವೆ. ಹೀಗೆ ವ್ಯವಸಾಯಕ್ಕೋಸ್ಕರ 1961ರಿಂದ 1964-65ನೇ ಇಸವಿಗೆ ಬೆಳಗಾಂ, ಬಳ್ಳಾರಿ, ಶಿವಮೊಗ್ಗ ಮತ್ತು ಕೂರ್ಗ್ ಸರ್ಕಲ್‌ಗಳಿಂದ 65,303 ಎಕರೆಗಳನ್ನು ಬಿಡುಗಡೆ ಮಾಡಿದ್ದೇವೆ. ಅಲ್ಲದೆ ಎಕ್ಸ್‌ಪ್ರೋಪ್ರಿಯೇಟೆಡ್ ರೈಯಟ್ಸ್‌ನ್ನು ಪುನರ್ವ್ಯವಸ್ಥೆ ಮಾಡುವುದಕ್ಕೆ ಹಿಡಕಲ್, ಕಪಿನಿ, ತುಂಗಭದ್ರ ಮತ್ತು ಭದ್ರಾ ಪ್ರದೇಶದಲ್ಲಿ 19,185 ಎಕರೆಗಳಷ್ಟು ಬಿಟ್ಟುಕೊಟ್ಟಿದ್ದೇವೆ. ಅರಣ್ಯ ಇಲಾಖೆಯಿಂದ ಸುಮಾರು 3,07,686 ಎಕರೆ 24 ಗುಂಟೆಗಳನ್ನು ಇದರಿಂದಾಗಿ ಇವೊತ್ತು ಕಳೆದುಕೊಂಡಿದ್ದೇವೆ. ರೆವಿನ್ಯೂ ಮತ್ತು ಇತರ ಮೈನರ್ ಫಾರೆಸ್ಟ್‌ನಲ್ಲಿ ಮೂರು ಮಂದಿ ಕಮಿಟಿಯ ಶಿಫಾರ್ಸಿನಮೇಲೆ 8 ಲಕ್ಷ 9 ಸಾವಿರ 144 ಎಕರೆಯಷ್ಟು ಅರಣ್ಯ ಇಲಾಖೆಗೆ ಬರಬೇಕೆಂದು ಅದನ್ನು ವರ್ಗಾಯಿಸಿದ್ದಾರೆ. ಆದ್ದರಿಂದ ತಮಗೆ ಅರ್ಥವಾಗುತ್ತದೆ ಅರಣ್ಯ ಇಲಾಖೆಯಲ್ಲಿ ಎಲ್ಲಿ ಬೇಸಾಯಕ್ಕೆ ಯೋಗ್ಯವಾಗಿದೆ ಅಂತಹ ಭೂಮಿಯನ್ನು ಬೇಸಾಯಕ್ಕೆ ಬಿಟ್ಟುಕೊಟ್ಟು ಎಲ್ಲಿ ಒಳ್ಳೆಯ ಮರಗಳು ಇತ್ತು ಮೈನರ್ ಫಾರೆಸ್ಟ್ ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳಲ್ಲಿ ಅನೇಕ ರೀತಿಯಾದಂಥ ಮರಗಳು ಬೆಳೆದು ಕಾಡು ಬೆಳೆಯುವುದಕ್ಕೆ ಅನುಕೂಲವಾಗಿದೆ ಅಂತಹ ಭೂಮಿಯನ್ನು ಅರಣ್ಯ ಇಲಾಖೆಗೆ ಸೇರಿಸಿಕೊಂಡಿದ್ದೇವೆ. ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕೇರಳದವರಾಗಲೀ ಅಥವಾ ಮೈಸೂರು ಸಂಸ್ಥಾನದವರೇ ಆಗಲಿ,

(ಶ್ರೀ ಬಿ. ರಾಚಯ್ಯ)

ಕೆಲವರು ಅರಣ್ಯ ಭೂಮಿಯನ್ನು ಅತಿಕ್ರಮ ಪ್ರವೇಶಮಾಡಿ ಮರಗಳನ್ನು ಕಡಿದುಹೋಗುವುದಲ್ಲದೆ ಕಳ್ಳ ಸಾಗಾಣಿಕೆ ಮಾಡಿರುವುದನ್ನು ಸರ್ಕಾರದವರ ಗಮನಕ್ಕೆ ತಂದರೆ ಅವರನ್ನು ಓಡಿಸುವುದಕ್ಕೆ ಮತ್ತು ಆ ರೀತಿ ಅಕ್ರಮ ಪ್ರವೇಶ ಮಾಡದೇ ಇರುವುದಕ್ಕೆ ಕಾರ್ಯಕ್ರಮ ಈಗಾಗಲೇ ಸರ್ಕಾರದವರು ತೆಗೆದುಕೊಂಡಿದ್ದಾರೆ ಆ ಭೂಮಿ ಇದುವರೆಗೆ ರೆವಿನ್ಯೂ ಇಲಾಖೆಯಲ್ಲಿ ಇತ್ತೇವಿನಾ ಅರಣ್ಯ ಇಲಾಖೆಯ ಸುಪರ್ದಿನಲ್ಲಿರಲಿಲ್ಲ ಎಂದು ಮಾನ್ಯ ಶ್ರೀ ಮುಕ್ಕಣ್ಣಪ್ಪನವರ ಗಮನಕ್ಕೆ ತರುತ್ತೇನೆ. ಮೈನರ್ ಫಾರೆಸ್ಟ್, ಡಿಸ್ಟ್ರಿಕ್ಟ್ ರಿಸರ್ವ್ ಇವು ರೆವಿನ್ಯೂ ಇಲಾಖೆಯ ಸುಪರ್ದಿನಲ್ಲಿ ಹೆಸರಿಗೆ ಮಾತ್ರ ಇರುವುದರಿಂದ, ಅದನ್ನು ನೋಡಿಕೊಳ್ಳುವುದಕ್ಕೆ ಸಿಬ್ಬಂದಿ ಇಲ್ಲದೇ ಇರುವುದರಿಂದ ಅಕ್ರಮ ಪ್ರವೇಶ ಕಳ್ಳ ಸಾಗಾಣಿಕೆ ಮಾಡುವುದಕ್ಕೆ ಅವಕಾಶವಾಯಿತು ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಸುಪರ್ದಿನಲ್ಲಿ ಇದ್ದಿದ್ದರೆ ಈ ರೀತಿ ಕಳ್ಳ ಸಾಗಾಣಿಕೆ ಮತ್ತು ಅಕ್ರಮ ಪ್ರವೇಶ ಆಗುತ್ತಾ ಇರಲಿಲ್ಲ. ನಮ್ಮ ಸುಪರ್ದಿಗೆ ಬಂದ ಕೂಡಲೇ ಆ ರೀತಿ ಆಗದಂತೆ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಶಿವಮೊಗ್ಗದ ಕಾಡಿನಲ್ಲಿ ನೆಲೆಸಿದವರು ಯಾರು ಇದ್ದಾರೆ ಅವರ ಜಾತಾ ಬೆಂಗಳೂರಿಗೆ ಕಾಲುನಡಿಗೆಯಲ್ಲಿ ಬರುತ್ತಿದ್ದಾರೆ. ಅವರು ತಮ್ಮನ್ನು ಅನಾವಶ್ಯಕವಾಗಿ ಕಾಡುಭೂಮಿಯಿಂದ ಹೊರಗೆ ಹಾಕುತ್ತಿದ್ದಾರೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಜಾತಾ ಸತ್ಯಾಗ್ರಹ, ಅನ್ನ ಸತ್ಯಾಗ್ರಹಕ್ಕೆ ಅಂಜಿ ಕೆಲಸಮಾಡುವ ಹಾಗಿದ್ದರೆ, ನಾಳೆ ಮನೆಬಿಟ್ಟು ಹೋಗಬೇಕಾಗುತ್ತದೆ. ಯಾರು ಆರೀತಿ ಕಳ್ಳ ಸಾಗಾಣಿಕೆ ಮಾಡುತ್ತಾರೋ ಅವರ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ಸದಸ್ಯರೂ ಈ ಪಕ್ಷದ ಸದಸ್ಯರೂ ಅನುಕಂಪ ಇಟ್ಟುಕೊಳ್ಳದೆ ಇದ್ದರೆ, ಈ ದೇಶದಲ್ಲಿ ಒಳ್ಳೆಯ ಕಾರ್ಯ ಸಾಧನೆ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತೇನೆ. ಅರಣ್ಯ ವಸ್ತುಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳ ವಿಚಾರವಾಗಿ, ಮಾನ್ಯ ಸದಸ್ಯರಾದ ಶ್ರೀ ಸುಂತನ್‌ಕರ್ ಅವರು ಹೇಳಿದ್ದಾರೆ. ಕೊನೆಯದಾಗಿ ಭಾಷಣ ಮಾಡಿದ ಶ್ರೀ ರೇವಣಸಿದ್ದಪ್ಪನವರು ಕೊಡತಕ್ಕಂಥ ರೇಟು ಏನು ಇದೆ, ಅದು ಅತ್ಯಂತ ಕಡಿಮೆಯಾಗಿದೆ. ಅದರಿಂದ ಸರ್ಕಾರಕ್ಕೆ ಬರತಕ್ಕ ಲಾಭ ಕಡಿಮೆಯಾಗುತ್ತದೆ. ಹರಾಜಿನಲ್ಲಿ ಇಡದೆ ರೇಟ್ ಫಿಕ್ಸ್ ಮಾಡಿ ಯಾತಕ್ಕೆ ಕೊಡಬೇಕು ಎಂದು ಪ್ರಶ್ನೆ ಮಾಡಿದರು. ಕೈಗಾರಿಕೆಯ ಬೇಡಿಕೆ ಸಭೆಯಮುಂದೆ ಬಂದಾಗ ಮಾನ್ಯ ಸದಸ್ಯರು ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆ ಹಿಂದೆ ಬಹಳ ಅಭಿವೃದ್ಧಿ ಪಡೆದಿತ್ತು. ಈಗ ಕೈಗಾರಿಕಾಭಿವೃದ್ಧಿ ಹೆಚ್ಚು ಕುಂಠಿತವಾಗಿದೆ, ಹೆಚ್ಚು ರೀತಿಯಲ್ಲಿ ಸರ್ಕಾರದವರು ಪ್ರೋತ್ಸಾಹಕೊಡುತ್ತಾ ಇಲ್ಲ ಎಂದು ಒಂದುಕಡೆ ಟೀಕೆ ಮಾಡಿದರೆ ಮತ್ತೊಂದುಕಡೆ ಕೈಗಾರಿಕಾಭಿವೃದ್ಧಿಮಾಡಿದಕಡೆ, ರೇಟ್ಸ್ ಕಡಿಮೆ ಹಾಕುತ್ತೀರಿ ಎಂದು ಹೇಳುತ್ತೀರಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯಾವ ಕಚ್ಚಾಮಾಲು ಎಲ್ಲಿ ಬೆಳೆಯುತ್ತಾರೋ ಅಲ್ಲಿ ಸಹಾಯ ಮಾಡಬೇಕು. ಶಿವಮೊಗ್ಗದಲ್ಲಿ ಮಾಲು ಇದ್ದರೆ ಶಿವಮೊಗ್ಗದವರಿಗೆ ಕೊಡಿ. ಚಿಕ್ಕಮಗಳೂರಿನಲ್ಲಿ ಮಾಲು ಸಿಕ್ಕುವುದಾದರೆ ಚಿಕ್ಕಮಗಳೂರಿನವರಿಗೆ ಕೊಡಿ.

ಶ್ರೀ ಬಿ. ರಾಚಯ್ಯ.—ಅರಣ್ಯ ಉತ್ಪಾದನೆ ಆಗತಕ್ಕ ಕಚ್ಚಾವಸ್ತುಗಳು ಎಲ್ಲಿ ಉತ್ಪಾದನೆ ಆಗುತ್ತವೆಯೋ ಅಲ್ಲಿ ಜನ ಮುಂದೆ ಬಂದರೆ ಅವರಿಗೇ ಉತ್ತೇಜನ ಕೊಟ್ಟಿದ್ದೇವೆಯೇವಿನಾ ಹೊರಗಡೆಯವರಿಗೆ ಕೊಟ್ಟಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಈ ಒಂದು ಕೇಸಿನಲ್ಲಿ ಇಂಡಿಯಾ ದೇಶದಲ್ಲಿ ಒಂದೇ ಅತ್ಯಂತ ದೊಡ್ಡ ಸಂಸ್ಥೆ ಆದ ಮೆಸ್ಸರ್ಸ್ ಇಂಡಿಯಾ ಮ್ಯಾಚ್ ಕಂಪೆನಿಗೆ ನಾನು ಬರುವುದಕ್ಕೆ ಮುಂಚಿತವಾಗಿ ಬಹಳ ಹಿಂದೆ ಕನ್ಸೆಷನ್ ರೇಟಿನಲ್ಲಿ ಸಾಫ್ಟ್‌ವುಡ್ ಕೊಟ್ಟಿದ್ದರು. ಇಷ್ಟು ಮಾತ್ರ ಹೇಳುತ್ತೇನೆ. ನಾನು ಬಂದಮೇಲೆ ಹೊರಗಡೆಯಿಂದ ಬರತಕ್ಕ ಯಾವುದೇ ಕಂಪನಿಗಳಿಗೆ ಹೆಚ್ಚಿನ ಪ್ರಾಶಸ್ತ್ಯಕೊಟ್ಟಿಲ್ಲ. ನಮ್ಮ ಸಂಸ್ಥಾನದಲ್ಲಿ ಯಾರು ಕಾರ್ಖಾನೆಗಳನ್ನು ಸ್ಥಾಪನೆ ಮಾಡುತ್ತಾರೋ ಅವರಿಗೆ ಪ್ರಾಶಸ್ತ್ಯ ಕೊಡುತ್ತೇವೆ. ಹೊರಗಡೆಯವರಿಗೆ ಕೊಡುವುದಿಲ್ಲವೆಂದು ತೀರ್ಮಾನ ತೆಗೆದುಕೊಂಡು, ಅದರ ಪ್ರಕಾರ ನಡೆದುಕೊಂಡು ಬರುತ್ತಿದ್ದೇವೆ. ಸಂಸ್ಥಾನದಲ್ಲಿ ಸ್ಥಾಪಿತವಾಗಿರತಕ್ಕ ಪ್ಲೈವುಡ್ ಕಾರ್ಖಾನೆ ಆಗಲೀ ಅಥವಾ ಪೇಪರ್ ಮಿಲ್ಸ್ ಆಗಲೀ ಮ್ಯಾಚ್ ಫ್ಯಾಕ್ಟರಿ ಆಗಲೀ, ಒಬ್ಬರಿಗೊಬ್ಬರಿಗೆ ತಾರತಮ್ಯ ಮಾಡುತ್ತಿದ್ದೇವೆಂದು ಹೇಳಿದರು. ನಾನು ಅಧಿಕಾರಕ್ಕೆ ಬರುವ ಮುನ್ನ, 1958ನೇ ಇಸವಿಯ ಹಿಂದೆ ರೇಟು ಫಿಕ್ಸ್ ಮಾಡಿದ್ದರು. ಅದನ್ನು ಅಗ್ರಿಮೆಂಟ್ ಮುಗಿಯುವುದಕ್ಕೆ ಮುಂಚಿತವಾಗಿ ಇಂತಹ ವರ್ಷದೊಳಗೆ ಮಾತ್ರ ಈ ರೇಟನ್ನು ರಿವೈಸ್ ಮಾಡಬಹುದು ಎಂದು ಕಂಡೀಷನ್‌ನಲ್ಲಿ ಇದ್ದರೂ ಕೂಡ, ಅದನ್ನು ವಿರೋಧಿಸಿ ಎಮರ್ಜೆನ್ಸಿ ನೆಪದಲ್ಲಿ ಎರಡು ಸಾರಿ ರೇಟ್ಸ್ ರಿವೈಸ್ ಮಾಡಿರುವುದರಿಂದ ಪ್ಲೈವುಡ್ ಫ್ಯಾಕ್ಟರಿಯವರು ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡುವುದಕ್ಕಾಗುವುದಿಲ್ಲ, ಎಂದು ಪ್ರೊಟೆಸ್ಟ್ ಮಾಡಿದ್ದಾರೆ. ಹಾಗೆ ಮ್ಯಾಚ್‌ವುಡ್ ಕಂಪೆನಿಯವರೂ ಹೇಳುತ್ತಾ ಇದ್ದಾರೆ. ನನಗೆ ದೂರದೃಷ್ಟಿಯಿಲ್ಲ; ರಾ ಮೆಟೀರಿಯಲ್ಸ್ ಬೆಲೆ ಹೆಚ್ಚಿಸುವುದರಿಂದ ಕೈಗಾರಿಕೆ ಅಭಿವೃದ್ಧಿ ಆಗುವುದಿಲ್ಲ, ಅವರು ಕೊಡತಕ್ಕ ಇನ್‌ಡೈರೆಕ್ಟ್ ಟ್ಯಾಕ್ಸ್ ಎಂದರೆ, ಸೇಲ್ಸ್ ಟ್ಯಾಕ್ಸ್, ಎಕ್ಸೈಜ್ ಡ್ಯೂಟಿ, ಕಮರ್ಷಿಯಲ್ ಟ್ಯಾಕ್ಸ್ ಮತ್ತು ಸಂಸ್ಥಾನಕ್ಕೆ ಒದಗತಕ್ಕ ಲೇಬರ್

ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಲ್ ಇವುಗಳನ್ನು ಮರೆತು ಮೊಟ್ಟೆ ಇಡತಕ್ಕ ಬಾತುಕೋಳಿಯನ್ನು ಕೊಲೆ ಮಾಡುವುದಕ್ಕೆ ಹೊರಟಿದ್ದೇವೆ ಎಂದು ನನ್ನಮೇಲೆ ಟೀಕೆ ಮಾಡಿದ್ದಾರೆ. ರೇಟುಗಳನ್ನು ನೋಡಿದರೆ, 1960ನೇ ಇಸವಿಯಲ್ಲಿ ರೇಟು 43 ರೂಪಾಯಿ ಇತ್ತು, ಅದು ಇವೊತ್ತು 65 ರೂಪಾಯಿ ಆಗಿದೆ. ಎರಡು ಸಾರಿ ರಿವೈಸ್ ಮಾಡಿರತಕ್ಕ ರೇಟು ನೋಡಿದ ಪಕ್ಷದಲ್ಲಿ ಹಿಂದೆ ಕೊಡತಕ್ಕ ರೇಟಿಗಿಂತ 1½ ಯಷ್ಟು ಆಗಿದೆ. ನಾವು ಅದನ್ನು ಕಡಿದು, ಸಾಗಾಣಿಕೆಮಾಡಿ ಡಿಪೋಗಳಿಗೆ ತಂದು ಅದನ್ನು ಹರಾಜು ಮಾಡಬೇಕಾದರೆ, ಮರ ಒಣಗಿಹೋದರೆ ಕೈಗಾರಿಕೆಗಳಿಗೆ ಉಪಯೋಗಕ್ಕೆ ಬರುವುದಿಲ್ಲ. ಅದನ್ನು ಕಡಿದು ಸಾಗಾಣಿಕೆ ಮಾಡುವ ಖರ್ಚನ್ನು ಲೆಕ್ಕ ಹಾಕಿ ನೋಡಿದರೆ, ಸ್ಟಾಂಡಿಂಗ್ ಟಿಂಬರ್ ಕೊಡತಕ್ಕದ್ದು, ಲಾಭಾದಾಯಕವಾಗಿದೆ. ಎನ್ನತಕ್ಕದ್ದನ್ನು ಸರ್ಕಾರ ಮನ ವರಿಕೆ ಮಾಡಿಕೊಂಡು ಈ ರೀತಿಯಾದಂಥ ಒಂದು ಇಂಡಸ್ಟ್ರೀಗೆ ಎನ್‌ಕರೇಜ್‌ಮೆಂಟ್ ಕೊಟ್ಟ ಹಾಗೆ ಆಗಬೇಕು, ಮತ್ತು ಇಲಾಖೆಗೆ ಲಾಭ ಬರಬೇಕು ಎನ್ನುವ ಎರಡು ದೃಷ್ಟಿಗಳಿಂದ ಮಾಡಿದೆ. ಯಾವ ಸದಸ್ಯರು ಬೇಕಾದರೂ ಕೂಡ ಯಾವ ಟೈಂನಲ್ಲಿ ಏನೇನು ರೇಟು, ಯಾವ ಯಾವ ವರ್ಷ ಫಿಕ್ಸ್‌ಮಾಡಿದ್ದೇವೆ, ಮಾರ್ಕೆಟ್ ರೇಟು ಏನು ಇದೆ ಎಂದು ನೋಡಬಹುದು. ಅವರು ಬಂದು ನೋಡಿ ತಪ್ಪುಮಾಡಿದ್ದೇವೆ, ದುರುಪಯೋಗವಾಗಿದೆ ಎಂದು ಸಾಬೀತುಮಾಡಿದರೆ ನನಗೆ ಈ ಕೆಲಸ ಬೇಡ. ಇನ್ನೊಂದು ಮಾತು ಹೇಳಿದರು. ಕಂಟ್ರಾಕ್ಟ್ ಕೊಡತಕ್ಕವರಿಗೆ ಒಳ್ಳೆಯ ಮರಗಳನ್ನು ಸಾಗಾಣಿಕೆ ಮಾಡಲು ಅವಕಾಶಕೊಟ್ಟು ಡಿಪೋಗಳಿಗೆ ಮಾತ್ರ ಕೊನೆಯ ರೆಂಬೆಗಳನ್ನು ತರುತ್ತಾರೆ ಎಂದು. ಎಲ್ಲಿ ಮರ ಕೊಡುತ್ತಾರೋ ಅಲ್ಲಿ ರೇಂಜ್ ಆಫೀಸರು ಅಸಿಸ್ಟೆಂಟ್ ಸರ್ವೇಯರ್ ಸ್ಟಾಂಡಿಂಗ್ ಮರಗಳನ್ನು ಗುರುತುಮಾಡಿ ಕಡಿದಮೇಲೆ ನೋಡುತ್ತಾರೆ. ಎಲ್ಲೆಲ್ಲಿ ಕಳ್ಳ ಸಾಗಾಣಿಕೆ ಸರ್ಕಾರದ ಗಮನಕ್ಕೆ ಬಂದಿದೆಯೋ ಅಲ್ಲಿ ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ಚಿಕ್ಕಮಗಳೂರಿನಲ್ಲಿ ಮರ ಸಾಗಿಸಿ ಎಷ್ಟೋ ಜನ ಸಾಹುಕಾರರಾಗಿದ್ದಾರೆ.

ಶ್ರೀ ಬಿ. ರಾಚಯ್ಯ.—ಒಂದು ಪೈಲೆಟ್ ಜೀಪ್ 8 ಲಾರಿಗಳು ಮರ ಸಾಗಾಣಿಕೆ ಮಾಡುತ್ತಾ ಇದ್ದುವು. ಒಬ್ಬ ಡಿ.ಎಫ್.ಓ. ಹೋಗಿ ಮೂರು ರಾತ್ರಿ ಕಷ್ಟಪಟ್ಟು ಹಿಡಿದರು. ಡಿ.ಎಫ್.ಓ. ಅವರನ್ನು ಪ್ರಾಸಿಕ್ಯೂಟ್ ಮಾಡಬೇಕು ಪರ್ಮಿಷನ್ ಕೊಡಿ, ಅವರು ಹಲ್ಲು ಮುರಿದಿದ್ದಾರೆ ಎಂದು ಕೆಲವರು ಪ್ರಯತ್ನ ಮಾಡಿದರು. ಆದರೆ ಆತನು ಓಡುತ್ತಾ ಇದ್ದು ; ಬಿದ್ದುದರಿಂದ ಆತನ ಹಲ್ಲು ಮುರಿಯಿತು. ಪೈಲೆಟ್ ಜೀಪಿನವರು ರಿವಲ್ವಾರ್ ಇಟ್ಟುಕೊಂಡಿದ್ದರೂ, ಅದು ಅತೀ ವೇಗವಾಗಿ ಹೋಗುತ್ತಿದ್ದರೂ, ಕಳ್ಳ ಸಾಗಾಣಿಕೆಯನ್ನು ತಪ್ಪಿಸುವುದಕ್ಕೆ ಮನುಷ್ಯನಿಗೆ ಎಷ್ಟು ಸಾಧ್ಯವೋ ಅಷ್ಟನ್ನೂ ಪ್ರಯತ್ನ ಮಾಡಿದ್ದೇವೆ.

ಇನ್ನು ಮಾನ್ಯ ಸದಸ್ಯರೊಬ್ಬರು ಹೇಳಿದಹಾಗೆ, ನಮ್ಮ ಮನೆಯೊಳಗೆ, ಮೈಸೂರು ಸಿಟಿಯಲ್ಲಿ, ಬೆಂಗಳೂರು ಸಿಟಿಯಲ್ಲಿ ಇಷ್ಟು ಪೋಲೀಸ್‌ದಳ ಇದ್ದರೂ ಸುತ್ತುಮುತ್ತಲೂ ನಡೆಯುತ್ತಿದ್ದ ಕಳ್ಳತನವನ್ನು ನೋಡಿದರೆ, ನಮ್ಮ ಅರಣ್ಯ ಇಲಾಖೆಯ ವಿಚಾರ ತಾವೇ ಊಹಿಸಬಹುದು. ಯಾರು ಯಾರು ಸರಿಯಾಗಿ ವರ್ತಿಸುವು ದಿಲ್ಲವೋ, ಯಾರು ಯಾರು ಇದರಲ್ಲಿ ಒಳಗಾಗುತ್ತಾರೋ ಅಂಥವರನ್ನು ಶಿಕ್ಷೆಗೆ ಗುರಿಪಡಿಸುತ್ತೇವೆ. ಕೆಲವು ರೇಂಜ್ ಆಫೀಸರುಗಳನ್ನು, ಮತ್ತು ನೂರಾರು ಗಾರ್ಡ್‌ಗಳನ್ನು, ಹಾಗೂ ಡಿ.ಎಫ್.ಓ., ಎ.ಎಫ್.ಓ. ಇನ್ನಿತರ ರನ್ನು ಸಸ್ಪೆಂಡ್ ಮಾಡಿದ್ದೇವೆ. ಇದೆಲ್ಲಾ ವಿಜಿಲೆನ್ಸ್‌ನವರ ನೇತೃತ್ವದಲ್ಲಿಯೂ ವಿಚಾರಣೆ ನಡೆಯುತ್ತಿದೆ. ಮತ್ತು ಈ ಇಲಾಖೆಯಲ್ಲಿ ದಾವೆಮಾಡಿದ ವಿಚಾರಗಳಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಮಾಡಿದೆ ಎನ್ನುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಬಹುಶಃ ಮಾನ್ಯ ಸ್ನೇಹಿತರಾದ ಶ್ರೀ ಸಿದ್ದಯ್ಯ ಕಾಶೀಮಠ ಅವರು ಒಂದೆರಡು ಕಟ್ ಮೋಶನ್ಸ್ ಕಳಿಸಿ, ಒಂದು ಫಾರೆಸ್ಟ್ ಬಂಗಲೆಯನ್ನು ಫರ್ನಿಶ್ ಮಾಡಬೇಕೆಂದು ಪ್ರಸ್ತಾಪಮಾಡಿದ್ದಾರೆ. ಅದನ್ನು ಈಗಾಗಲೇ ತೆಗೆದುಕೊಂಡಿದ್ದೇವೆ.

ಸಾಂಡೂರು ಪ್ರದೇಶದ ಸಂಬಂಧವಾಗಿ ನಾಲ್ಕು ಕೇಸುಗಳು ಈಗಾಗಲೇ ನಡೆಯುತ್ತಿವೆ. ಯಾರಿಗೂ ಬಿಟ್ಟು ಕೊಟ್ಟಿಲ್ಲ. ಆದ್ದರಿಂದ ಎಲ್ಲೆಲ್ಲಿ ಸರ್ಕಾರದ ಗಮನಕ್ಕೆ ಕಳ್ಳಸಾಗಾಣಿಕೆಯಾಗುತ್ತದೆ ಎಂದು ಬಂದಿದೆಯೋ, ಅದನ್ನು ಹಿಡಿದು ಅವರಿಗೆ ಶಿಕ್ಷೆ ಮಾಡುತ್ತೇವೆ.ಜೊತೆತೆಗೆ ಪೋಲೀಸ್ ಇಲಾಖೆಯವರೂಕೂಡ ಕೆಲವುಕಡೆ ಇದಕ್ಕೆ ಹೆಚ್ಚು ಸಹಾಯವನ್ನು ಮಾಡುತ್ತಿದ್ದಾರೆ. ಆದರೆ ಕೆಲವುಕಡೆ ಇವರ ಸಹಾಯ ಸಾಕಷ್ಟು ಸಿಗುತ್ತಾ ಇಲ್ಲ. ಅದೇ ರೀತಿ ಇದು ಕೋರ್ಟಿಗೆ ಹೋದಾಗ ನಮ್ಮಲ್ಲಿ ಅದಕ್ಕೆ ಬೇಕಾದ ನಮ್ಮದೇ ಆದ ಪ್ರೋಸಿಕ್ಯೂಟರ್ಸ್ ಇಲ್ಲದೆ ಸ್ವಲ್ಪ ತೊಂದರೆಯಾಗುತ್ತಿದೆ. ಅನೇಕರಿಗೆ ಇದರಿಂದ ಸ್ವಲ್ಪ ಭಯವಿದೆ. ಇದಕ್ಕೋಸ್ಕರ ಮುಂದಿನ ವರ್ಷ ಅರಣ್ಯ ಇಲಾಖೆಯದ್ದೇ ಆದ ಒಬ್ಬ ಪ್ರೋಸಿಕ್ಯೂಟರನ್ನು ನೇಮಕ ಮಾಡಬೇಕೆಂಬ ಉದ್ದೇಶವನ್ನು ಸರ್ಕಾರದವರು ಇಟ್ಟುಕೊಂಡಿದ್ದೇವೆ. ಇನ್ನು ರಬ್ಬರ್ ಪ್ಲಾಂಟೇಶನ್‌ನ್ನು ಸಾಧಾರಣ 20 ಲಕ್ಷ ಎಕರೆಗಳಲ್ಲಿ ಮಾಡಬೇಕೆಂದು ಸರ್ಕಾರದ ಉದ್ದೇಶವಾಗಿದೆ. ಈ ಪ್ಲಾಂಟೇಶನ್‌ನ್ನು ಅರಣ್ಯ ಇಲಾಖೆಯ ಮುಖಾಂತರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಬೇಕೆಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಹಾಗೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ಬೋಟ್ ಬಿಲ್ಡಿಂಗ್ ಯಾರ್ಡನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದೆ. ಅದೇ ರೀತಿ ಜಪಾನೀಸ್ ಸಹಾಯದಿಂದ ಒಂದು ಫರ್ನಿಚರ್ ಯೂನಿಟ್ಟನ್ನು ತೆಗೆಯ ಬೇಕೆಂದು ಇಟ್ಟುಕೊಂಡಿದ್ದೇವೆ. ಮತ್ತು ಒಂದು ಲಿನೋಲಿಯಮ್ ಮುಂತಾದ ಪ್ಲಾಂಟನ್ನು ಮಾಡಬೇಕೆಂದು ಇದ್ದೇವೆ. ಅದಕ್ಕೆ ಒಂದು

(ಶ್ರೀ ಬಿ. ರಾಚಯ್ಯ)

ಡಿಸ್ಟಿಲರಿ ಕೂಡ ತೆಗೆಯಬೇಕೆಂದು ಇದೆ. ಇದನ್ನೆಲ್ಲಾ ಮುಂದಿನ ವರ್ಷ ಇಟ್ಟುಕೊಂಡಿದ್ದೇವೆ. ಪ್ರತಿವರ್ಷ ಮಳೆಯ ಅಭಾವದಿಂದ ದನಗಳಿಗೆ ಆಹಾರ ಸಿಗದಿರುವುದರಿಂದ. ಅದಕ್ಕೆ ಒಂದು ಫಾಡರ್ ಬ್ಯಾಂಕನ್ನು ಮಾಡ ಬೇಕೆಂದು ಈ ಇಲಾಖೆಯವರು ಇಟ್ಟುಕೊಂಡಿದ್ದಾರೆ. 1,250 ಟನ್ಸ್ ಹುಲ್ಲನ್ನು ಅರಣ್ಯ ಇಲಾಖೆಯವರು ಕಷ್ಟಕಾಲದಲ್ಲಿ ಎಲ್ಲಾ ಜಿಲ್ಲೆಗಳಿಗೆ ರವಾನೆ ಮಾಡಿದ್ದಾರೆ.

ಇನ್ನು ಮಾನ್ಯ ಶ್ರೀ ಮಾದಯ್ಯ ಗೌಡರು ಒಳ್ಳೆಯ ತಳಿಯ ಹುಲ್ಲನ್ನು ಬೆಳೆಸಬೇಕು ಎಂದು ಹೇಳಿದರು. ಅದನ್ನೂ ಸ್ವಲ್ಪ ಮಟ್ಟಿಗೆ ಪ್ರಾರಂಭಮಾಡಿದ್ದೇವೆ. ಇನ್ನೂ ಹೆಚ್ಚಾಗಿ ಮಾಡುತ್ತೇವೆ. ಇನ್ನು ಫಾರೆಸ್ಟ್ ಲೇಬರ್ ಕೋ-ಆಪರೇಟಿವ್ ಸೊಸೈಟಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸ್ಥಾಪನೆ ಮಾಡಿ ಈ ಮಧ್ಯವರ್ತಿ ಜನಗಳು ಹೆಚ್ಚು ಲಾಭ ಪಡೆಯದಹಾಗೆ ಮಾಡಬೇಕೆಂದು ಮಾಡಿದ್ದೇವೆ. ಹಾಗೆ ಕ್ಯಾಶ್ಯು ಪ್ಲಾಂಟೇಶನ್ ಸುಮಾರು 25 ಸಾವಿರ ಎಕರೆಗಳಲ್ಲಿ ಮಾಡಿದ್ದೇವೆ. ಒಂದು ಕ್ಯಾಶ್ಯೂಶೆಲ್ ಪ್ರೊಸೆಸಿಂಗ್‌ನ್ನೂ ಈ ಇಲಾಖೆಯ ಮುಖಾಂತರ ತೆರೆಯಬೇಕೆಂದು ಇಟ್ಟುಕೊಂಡಿದ್ದೇವೆ. ಮತ್ತು ಈ ಮ್ಯಾಪ್ಸ್ ಮತ್ತು ಅಟ್ಲಾಸ್ ಏನಿದೆ ಅದನ್ನೂ ಕೂಡ ರಿವೈಸ್ ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. ಇದು ಪ್ರಥಮತಃ ಈ ಇಲಾಖೆಯಲ್ಲಿ ಮಾಡುತ್ತಿರುವುದು. ಒಟ್ಟಿನಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಅರಣ್ಯವನ್ನು ಸಂರಕ್ಷಣೆಮಾಡತಕ್ಕಂತದ್ದನ್ನು ಯೋಚಿಸುತ್ತಿದೆ. ಹೆಚ್ಚು ಪ್ಲಾಂಟೇಶನನ್ನು ಬೆಳೆಸಿ, ದೇಶಕ್ಕೆ ಹೆಚ್ಚಿನ ಸಂಪಾದನೆಯನ್ನು ಮಾಡಬೇಕೆಂದು ಎಲ್ಲಾ ತರದ ಕಾರ್ಯ ಕ್ರಮಗಳನ್ನೂ ಹಾಕಿಕೊಂಡಿದೆ.

ಆದರೆ, ಈ ಇಲಾಖೆಯ ಅಧಿಕಾರಿಗಳಿಗೆ ಕೊಡುತ್ತಿರುವ ಸಂಬಳ ಬಹಳ ಕಡಿಮೆ. ಒಬ್ಬ ಗಾರ್ಡಿಗಲೀ, ಫಾರೆಸ್ಟೆ ರೇಂಜರಿಗಾಗಲೀ, ಅಥವಾ ರೇಂಜ್ ಆಫೀಸರಿಗಾಗಲೀ ಕೊಡುತ್ತಿರುವ ಸಂಬಳ ಬಹಳ ಕಡಿಮೆ. ರೇಂಜ್ ಆಫೀಸರಿಗೆ ಕೇವಲ 70 ರೂಪಾಯಿ ಎಂದರೆ ಅದು ತೀರಾ ಕಡಿಮೆ. ಅದಕ್ಕೋಸ್ಕರ ಇತರ ತಜ್ಞರ ಇಲಾಖೆಗಳಲ್ಲಿ ಏನು ಸಂಬಳ ಕೊಡುತ್ತಾರೇ, ಅದನ್ನು ಇಲ್ಲಿ ಇವರಿಗೂ ಕೊಡಬೇಕೆಂಬ ಒಂದು ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಅದರಿಂದ ತೃಪ್ತಿಕರವಾಗಿ ನೌಕರರು ಕೆಲಸಮಾಡಲು ಅನುಕೂಲವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ಈಗ ಗಾರ್ಡ್ಸಿಗೆ ಏನು ಕೊಡಬೇಕೆಂದು ಇದ್ದೀರಿ?

ಶ್ರೀ ಬಿ. ರಾಚಯ್ಯ.—ಮತ್ತು ಯಾರ್‍ಯಾರು ಈ ಇಲಾಖೆಯಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿ ಕಳ್ಳ ಸಾಗಾಣಿಕೆಗಳನ್ನು ತಡೆಗಟ್ಟಿ, ತಮ್ಮ ರಿಸ್ಕಿನಿಂದ ಸರ್ಕಾರದ ಸೊತ್ತನ್ನು ಉಳಿಸಲು ಪ್ರಯತ್ನ ಮಾಡುತ್ತಾರೋ, ಅಂಥವರಿಗೆ ಪೋಲೀಸ್ ಇಲಾಖೆಯಲ್ಲಿ ಏನು ಒಂದು ಮೆಡಲನ್ನು ಕೊಡುತ್ತಾರೋ, ಅದೇರೀತಿಯಲ್ಲಿ ಈ ಇಲಾಖೆಯಲ್ಲೂ ಕೊಡಬೇಕೆನ್ನುವುದನ್ನು ತೀರ್ಮಾನಮಾಡಿದ್ದೇವೆ. ಮತ್ತು ಎಲ್ಲೆಲ್ಲಿ ಸಿಬ್ಬಂದಿವರ್ಗ ಕಡಿಮೆ ಇದೆಯೋ ಅದನ್ನು ಜಾಸ್ತಿಮಾಡಬೇಕಾಗುತ್ತದೆ. ಈಗಾಗಲೇ ರಬ್ಬರ್ ಪ್ಲಾಂಟೇಶನಿಗಾಗಿ, ಸಿರ್ಸಿ, ಹೊನ್ನಾವರ, ಚಾಮರಾಜನಗರಗಳಲ್ಲಿ ನಾಲ್ಕು ಡಿವಿಜನುಗಳನ್ನು ಮಾಡಿದ್ದೇವೆ. ಇನ್ನೂ ಎರಡು ಸರ್ಕಲ್‌ಗಳನ್ನು ಮಾಡ ಬೇಕಾಗುತ್ತದೆ. ಇದನ್ನೆಲ್ಲಾ ಮಾಡಬೇಕೆಂದು ಮುಂದಿನ 66-67ನೇ ಸಾಲಿನಲ್ಲಿ ಯೋಜನೆಯನ್ನು ಇಟ್ಟು ಕೊಂಡಿದ್ದೇವೆ. ಮತ್ತು ಚಿತ್ರದುರ್ಗದಲ್ಲಿ ಯಾವುದೋ ಹರಿಜನ ಕೋ-ಆಪರೇಟಿವ್ ಸೊಸೈಟಿಗೆ ಬಹಳ ಕನ್‌ಸೆಶನ್ ಕೊಟ್ಟರು ಎಂದು ಹೇಳಿದರು. ಅದು ಯಾರಿಗೆ ಏನು ಎಂದು ನನಗೆ ಗೊತ್ತಿಲ್ಲ. ನಾನು ಬಂದಮೇಲೆ ನನಗೆ ಇಂಥ ಯಾವುದೂ ಆಗಿರುವುದು ಜ್ಞಾಪಕವಿಲ್ಲ. ಹಿಂದೆ ಇತ್ತೋ ಏನೋ ಗೊತ್ತಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರಿಗೆ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸೀಟ್ ಕೊಟ್ಟಿದ್ದಾರೆ. ಎಲೆಕ್ಷನ್ನಿಗೆ ನಿಂತಿದ್ದಾರೆ. ಇವರು ಗೊತ್ತಿಲ್ಲ ಎಂದು ಹೇಳಿದರು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದು ಹರಿಜನ ಆರ್ಥಿಕ ಅಭಿವೃದ್ಧಿ ಕೋ-ಆಪರೇಟಿವ್ ಸೊಸೈಟಿ.

ಶ್ರೀ ಬಿ. ರಾಚಯ್ಯ.—ಹರಿಜನ ಕೋ-ಆಪರೇಟಿವ್ ಸೊಸೈಟಿಗೆ ಯಾವುದೂ ಕೊಟ್ಟಿಲ್ಲ. ಕೊಟ್ಟಿರುವುದು ಒಬ್ಬ ಕಂಟ್ರಾಕ್ಟರರಿಗೆ. ಬರಗಾಲ ಬಂದುದರಿಂದ 56 ಸಾವಿರ ಎಕರೆ ಭೂಮಿಯನ್ನು ಫಾರೆಸ್ಟ್ ಕಂಟ್ರಾಕ್ಟರಿಗೆ ಕೊಟ್ಟಿದ್ದನ್ನು ರಿಲೀಸ್ ಮಾಡಿರುವುದರಿಂದ. ಆತನಿಗೆ ಬಹಳ ನಷ್ಟವಾಗಿದೆ ; ಹಿಂದೆ ಬಾಕಿ ಇಟ್ಟುಕೊಂಡಿದ್ದುದನ್ನು ಆರು ತಿಂಗಳೊಳಗೆ ವಸೂಲು ಮಾಡುವ ಬದಲು ಒಂದು ವರ್ಷ ಹೆಚ್ಚಿಗೆ ಕೊಡಿ ಎಂದು ಕೇಳಿದರು, ಹಾಗೆ ಕೊಟ್ಟು ಬಾಕಿ ಇದ್ದದನ್ನು ಒಂದು ಕಾಸೂ ಇಲ್ಲದಹಾಗೆ ವಸೂಲು ಮಾಡಿದ್ದೇವೆ. ಇದೇ ಮಾನ್ಯ ಸದಸ್ಯರು ಅದಕ್ಕಾಗಿ ನನ್ನ ಅಭಿನಂದಿಸಿದರು. ಇವತ್ತು ಕನ್‌ಸೆಷನ್ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಅವರಿಂದ ಯಾರೂ ವಸೂಲು ಮಾಡುವುದಕ್ಕಾಗುವುದಿಲ್ಲ ಎಂದು ಶ್ರೀ ಬಿ. ಎಲ್. ಗೌಡರು, ರೇವಣ್ಣ ಸಿದ್ದಪ್ಪನವರು, ಮುಂತಾದವರು ಹೇಳುತ್ತಿದ್ದರು. ಆದರೆ, ಅದನ್ನೆಲ್ಲಾ ವಸೂಲು ಮಾಡಿದ್ದೇವೆ ಎಂದು ನಾನು ಇಲ್ಲಿ ಹೇಳುತ್ತೇನೆ.

10-00 A.M.

ಮೈಸೂರು ಸಂಸ್ಥಾನದಲ್ಲಿ ವನ್ಯ ಮೃಗಗಳ ಸಂರಕ್ಷಣೆಯ ಕಾರ್ಯ ಹೆಚ್ಚಿನ ರೀತಿಯಲ್ಲಿ ಆಗಬೇಕೆಂದು ಮಾನ್ಯ ಆರ್. ಎಂ. ದೇಶಾಯಿಅವರು ಹೇಳಿದ್ದಾರೆ. ಬಂಡೀಪುರವನ್ನು ನ್ಯಾಷನಲ್ ಪಾರ್ಕ್ ಆಗಿ ಮಾಡಲು

ಕೇಂದ್ರದ ವೈಲ್ಡ್ ಲೈಫ್ ಬೋರ್ಡಿನವರು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಆಗಬೇಕಾಗಿರುವ ಎಕ್ಸ್‌ಪ್ಯಾನ್‌ಷನ್ ಸ್ಕೀಮು ಈಗಾಗಲೇ ಕಾರ್ಯಗತವಾಗುತ್ತಿದೆ. ದಾಂಡೇಲಿ, ಜಾಗರ್ ವ್ಯಾಲಿ, ತುಂಗಭದ್ರ ಮತ್ತು ಶರಾವತಿಯಲ್ಲಿ ಹಾಗೂ ರಂಗನತಿಟ್ಟು ಈ ಜಾಗಗಳಲ್ಲಿ ಹಕ್ಕಿಗಳ ರಕ್ಷಣೆ ಮಾಡುವ ಕಾರ್ಯವನ್ನು ಇಟ್ಟುಕೊಂಡಿದ್ದೇವೆ. ಈ ರೀತಿಯಾಗಿ ಅಭಿವೃದ್ಧಿ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡುತ್ತಿದ್ದೇವೆ.

[MR. DEPUTY SPEAKER in the Chair]

ಮೀನುಗಾರಿಕೆ ವಿಷಯದಲ್ಲಿ ಒಂದೆರಡು ಮಾತುಗಳನ್ನು ತಿಳಿಸಬೇಕು ಎಂದು ಇಚ್ಛೆ ಪಡುತ್ತೇನೆ. ಮೀನುಗಾರಿಕೆ ವಿಷಯದಲ್ಲಿ ಮಾತನಾಡಿದ ಎಲ್ಲ ಸದಸ್ಯರೂ ಬಹುಮಟ್ಟಿಗೆ ಕೆಲಸ ಚೆನ್ನಾಗಿ ನಡೆದಿದೆ, ಆದರೆ ಇನ್ನೂ ಹೆಚ್ಚಿಗೆ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿದೆ ಎಂದು ತಿಳಿಸಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ವಿಚಾರವಾಗಿ ಹೆಚ್ಚು ಮಾತನಾಡಿದಂಥ ಸದಸ್ಯರು ಒಳನಾಡಿನ ಮೀನುಗಾರಿಕೆಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿಲ್ಲ, ಅದಕ್ಕೆ ಹೆಚ್ಚು ಗಮನ ಕೊಡಬೇಕು ನಮಗೂ ಮೀನು ಸಿಕ್ಕಿದ ಹಾಗೆ ಆಗುತ್ತದೆ ಎಂದು ಹೇಳಿದರು. ಮೈಸೂರು ಸಂಸ್ಥಾನದ ಪುಣ್ಯದಿಂದ 186 ಮೈಲಿ ಕರಾವಳಿ ಪ್ರದೇಶ ಪಡೆದಿದೆ, 10 ಸಾವಿರ ಎಕರೆಯಷ್ಟು ನೀರಿನಲ್ಲಿ ಮೀನನ್ನು ಹಿಡಿಯುವುದಕ್ಕೆ ಅವಕಾಶವಾಗಿದೆ. ಇಂಡಿಯಾ ದೇಶದ ಐದನೇ ಒಂದು ಭಾಗದಷ್ಟು ಕರಾವಳಿ ನಮಗೆ ಇದ್ದರೂಕೂಡ ಇಂಡಿಯಾ ದೇಶದ ಎಲ್ಲ ರಾಜ್ಯಗಳ ಉತ್ಪಾದನೆಯಲ್ಲಿ ಆರನೆ ಒಂದು ಭಾಗದಷ್ಟು ಉತ್ಪಾದನೆ ನಮ್ಮ ಕರಾವಳಿ ತೀರದಲ್ಲಿ ನಾವು ಮಾಡುತ್ತಿದ್ದೇವೆ. ಒಂದು ಲಕ್ಷ 61 ಸಾವಿರ ಟನ್ ಮೀನನ್ನು ಸಂಗ್ರಹ ಮಾಡಿ ಸುಮಾರು ಒಂದು ಕೋಟಿ 18 ಲಕ್ಷ ರೂಪಾಯಿನಷ್ಟು ವಿದೇಶಿ ವಿನಿಮಯವನ್ನು ಗಳಿಸಿದ್ದೇವೆ. ಇನ್ನೂ ಹೆಚ್ಚಾಗಿ ಮೀನನ್ನು ಹಿಡಿಯುವುದಕ್ಕೆ ಮತ್ತು ಅದನ್ನು ಒಳನಾಡಿಗೆ ಸಾಗಿಸುವುದಕ್ಕೆ, ಪರದೇಶಗಳಿಗೆ ರಫ್ತು ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಇದುವರೆಗೆ ಒಂದು ಮತ್ತು ಎರಡನೆಯ ಯೋಜನೆಯಲ್ಲಿ ಏನು ಶೀತಲ ಗೃಹಗಳನ್ನು ಮತ್ತು ತರಪೇತಿ ಕೇಂದ್ರಗಳನ್ನು ತೆರೆದಿದ್ದೆವು, ಈ ಶೀತಲ ಗೃಹಗಳಲ್ಲಿ 25 ಟನ್ ಮಂಜುಗಡ್ಡೆಯನ್ನು ತಯಾರು ಮಾಡುವುದಕ್ಕೆ ಮಾತ್ರ ಮೂರನೆ ಯೋಜನೆಯ ಮೂರನೆ ವರ್ಷದವರೆಗಿನ ಕಾಲದಲ್ಲಿ ಸಾಧ್ಯವಾಗಿತ್ತು. ಆದರೆ ಈ ಒಂದು ವರ್ಷದಲ್ಲೇ ಸುಮಾರು 27 ಟನ್‌ನಷ್ಟು ಮಂಜುಗಡ್ಡೆಯನ್ನು ತಯಾರು ಮಾಡತಕ್ಕ ಶೀತಲ ಗೃಹಗಳ ಕಟ್ಟಡಗಳ ಕೆಲಸ ಪ್ರಾರಂಭವಾಗಿದೆ ಒಟ್ಟಿನಲ್ಲಿ 57 ಟನ್‌ನಷ್ಟು ಮಂಜುಗಡ್ಡೆಯನ್ನು ಒಂದು ದಿವಸಕ್ಕೆ ತಯಾರು ಮಾಡುವಂಥ ಗೃಹಗಳನ್ನು ಸರ್ಕಾರ ಮಂಜೂರು ಮಾಡಿ ಅದರ ಕೆಲಸಕಾರ್ಯಗಳು ನಡೆಯುತ್ತಿವೆ. ಇವುಗಳಲ್ಲದೆ, ಮೀನನ್ನು ಜೋಪಾನ ಮಾಡತಕ್ಕದ್ದು, ಅವುಗಳನ್ನು ಕೆಡದಂತೆ ಇಡಲು ಸ್ಟೋರೇಜ್ ಅನುಕೂಲತೆಗಳು ಇವುಗಳನ್ನು ಒಂದರಿಂದ ನಾಲ್ಕು ಪಟ್ಟು ಹೆಚ್ಚು ಮಾಡಿದ್ದೇವೆ. ಹಾಗೆಯೇ ತರಪೇತಿ ಕೇಂದ್ರದಲ್ಲಿಯೂ ಸುಮಾರು 612 ಜನರಿಗೆ ತರಪೇತಿಯನ್ನು ಕೊಟ್ಟಿದ್ದೇವೆ. ಅದಲ್ಲದೆ 225 ದೋಣಿಗಳನ್ನು ಈಗಾಗಲೇ ಹಂಚಿದ್ದೇವೆ. 1956ನೆ ಇಸವಿಯಲ್ಲಿ ನಮ್ಮಲ್ಲಿ ಒಂದೂ ಮೆಕ್ಯಾನೈಸ್ಡ್ ಬೋಟ್ಸ್ ಇರಲಿಲ್ಲ. ಈಗ 225 ದೋಣಿಗಳಾಗಿವೆ. 59 ದೋಣಿಗಳಿಗೆ ಬೇಕಾಗುವ ಇಂಜಿನ್‌ಗಳನ್ನು ಕೊಟ್ಟು ಅದನ್ನು ಕಟ್ಟುವ ಕೆಲಸವೂ ನಡೆಯುತ್ತಿದೆ. ಇದಕ್ಕಾಗಿ ಮಂಗಳೂರು ಮತ್ತು ಕಾರವಾರದಲ್ಲಿ ದೋಣಿಗಳನ್ನು ಕಟ್ಟುವುದಕ್ಕೆ ಸರ್ಕಾರದವರು ಬೋಟ್ ಬಿಲ್ಡಿಂಗ್ ಯಾರ್ಡ್‌ಗಳನ್ನು ಕಟ್ಟಿದ್ದರು. ಅದರ ಜೊತೆಗೆ ಸಹಕಾರ ಸಂಸ್ಥೆಗಳ ಮುಖಾಂತರ ಮತ್ತು ಖಾಸಗಿ ಜನಗಳ ಮುಖಾಂತರ ದೋಣಿಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಮುಂದಿನ ವರ್ಷ 100 ದೋಣಿಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಈ ವರ್ಷ ಹೊನ್ನಾವರ, ಗಂಗವಳ್ಳಿ ಮತ್ತು ಕೃಷ್ಣರಾಜಸಾಗರದಲ್ಲಿ ಮೂರು ತರಪೇತಿ ಕೇಂದ್ರಗಳನ್ನು ತೆರೆದಿದ್ದೇವೆ. ಮುಂದಿನ ವರ್ಷ ಹೆಸರುಘಟ್ಟ, ವಾಣಿವಿಲಾಸ ಸಾಗರ ಮತ್ತು ತುಂಗಭದ್ರದಲ್ಲಿ ಮೂರು ತರಪೇತಿ ಕೇಂದ್ರಗಳನ್ನು ತೆರೆಯತಕ್ಕ ಯೋಜನೆಗಳನ್ನು ಇಟ್ಟುಕೊಂಡಿದ್ದೇವೆ. ತುಂಗಭದ್ರದಲ್ಲಿ ಇವತ್ತು ನೆಟ್ ಮೇಕಿಂಗ್ ಪ್ಲಾಂಟನ್ನು ಮೊದಲನೆಯ ಬಾರಿಗೆ ಮೈಸೂರು ರಾಜ್ಯದಲ್ಲಿ ಸ್ಥಾಪನೆ ಮಾಡುವ ಯೋಜನೆಯನ್ನಿಟ್ಟುಕೊಂಡಿದ್ದೇವೆ. ಇದರ ಕೆಲಸ ಕಾರ್ಯಗಳು ಈಗಾಗಲೇ ನಡೆದಿವೆ.

ಮೀನನ್ನು ಸಾಗಾಣಿಕೆ ಮಾಡುವುದಕ್ಕೆ ಇನ್‌ಸುಲೇಟೆಡ್ ವ್ಯಾನ್ಸ್, ರಿಫ್ರಿಜಿರೇಟರ್ ವಾನ್ಸ್, ಇವುಗಳನ್ನು ಹಿಂದೆ ಇದ್ದದಕ್ಕಿಂತ ಎರಡರಷ್ಟು ಒಂದೇ ವರ್ಷದಲ್ಲಿ ಕೊಂಡುಕೊಂಡಿದ್ದೇವೆ.

ಒಳನಾಡಿನಲ್ಲಿ 18 ಜಲಾಶಯಗಳು, ಮೂರು ಸಾವಿರ ದೊಡ್ಡ ಕೆರೆಗಳು, 2,700 ಸಣ್ಣ ಕೆರೆಗಳು, ಇವುಗಳಲ್ಲಿ 10 ಲಕ್ಷ ಎಕರೆ ಪ್ರದೇಶದಲ್ಲಿ ಮೀನು ಸಾಕುವುದಕ್ಕೆ ಅವಕಾಶವಿದೆ. ಇದಕ್ಕಾಗಿ ತುಂಗಭದ್ರದಲ್ಲಿ 14 ಎಕರೆಯಲ್ಲಿ ಸೀಡ್ ಫಾರಂ ತಯಾರು ಮಾಡಿದ್ದೇವೆ. ಇದುವರೆಗೂ ನಾವು ಕಲ್ಕತ್ತದಿಂದ ತರಿಸುತ್ತಿದ್ದ ಫಿಷ್ ಫ್ರೈ ತರಿಸುವುದನ್ನು ನಿಲ್ಲಿಸಿ ಒಂದು ಎಕರೆಯಲ್ಲಿ ಇದರ ಉತ್ಪಾದನೆಯನ್ನು ಮಾಡುತ್ತಿದ್ದೇವೆ. ಹಿಂದೂಸ್ಥಾನದಲ್ಲಿ ಮೊಟ್ಟ ಮೊದಲನೆಯ ಇನ್‌ಲ್ಯಾಂಡ್ ಸೀಡ್ ಫಾರಂ ಎಂದರೆ ತುಂಗಭದ್ರದಲ್ಲಿ ಮಾಡಿರುವುದು. ಎರಡನೆಯದು ಏಷ್ಯದಲ್ಲೇ ದೊಡ್ಡ ಫಾರಂ ಎಂದರೆ ಭದ್ರದಲ್ಲಿ 50 ಎಕರೆಗಳ ದೊಡ್ಡ ಫಾರಂ. ನೀರಸಾಗರ,

(ಶ್ರೀ ಬಿ. ರಾಚಯ್ಯ)

ಶಾಂತಿಸಾಗರ, ಕೃಷ್ಣರಾಜಸಾಗರ ಈ ಸ್ಥಳಗಳಲ್ಲಿ ಈ ವರ್ಷ ಸೀಡ್ ಫಾರಂ ವಿಸ್ತರಿಸುವ ಕಾರ್ಯಕ್ರಮವಿದೆ. ಇದಲ್ಲದೆ 18 ಜಲಾಶಯಗಳಲ್ಲಿಯೂ ಕೂಡ ಸೀಡ್ ಫಾರಂ ತೆಗೆದು ಅಲ್ಲಿ, ಫ್ರೈ, ಫಿಂಗರ್‌ಲಿಂಗ್ಸ್ ಇವುಗಳ ಉತ್ಪಾದನೆಯನ್ನು ಮಾಡಿ ಅವುಗಳನ್ನು ಎಲ್ಲ ಭಾಗಗಳಲ್ಲಿರುವ ಕೆರೆಗಳಿಗೂ ಒದಗಿಸುತ್ತಿದ್ದೇವೆ. ಇದರ ಜೊತೆಗೆ ಒಳನಾಡಿನಲ್ಲಿ 10 ಇನ್‌ಟೆನ್‌ಸಿವ್ ಬ್ಲಾಕ್ ಎಂದು ಫಿಷರಿ ಡೆವಲಪ್‌ಮೆಂಟ್ ತೆಗೆದುಕೊಂಡಿದ್ದೇವೆ, ಅಪ್ಲೈಡ್ ನ್ಯೂಟ್ರಿಷನ್ 5, ಎಕ್ಸ್‌ಟೆನ್‌ಷನ್ ಸ್ಕೀಂ 5 ತೆಗೆದು ಹೆಚ್ಚಿನ ಸಂಖ್ಯೆಯಲ್ಲಿ ಮೀನು ಸಾಗಾಣಿಕೆಯನ್ನು ಮಾಡುತ್ತಿದ್ದೇವೆ. ಇದರಲ್ಲಿ ಎರಡು ಮೂರು ಸಾವಿರ ರೂಪಾಯಿಗಳವರೆಗೂ ಪಂಚಾಯಿತಿಯವರು ಸಂಪಾದನೆ ಮಾಡಿದ್ದಾರೆ. ಮೀನನ್ನು ಹೆಚ್ಚಿನ ರೀತಿಯಲ್ಲಿ ಉತ್ಪಾದನೆ ಮಾಡುವುದಕ್ಕೆ ಮತ್ತು, ಆಹಾರದ ಕೊರತೆಯನ್ನು ನೀಗುವುದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕು ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಮೀನಿನ ಉದ್ಯಮ ವನ್ನು ಅವಲಂಬಿಸಿರತಕ್ಕ ಜನ ಅತ್ಯಂತ ಬಡತನದಿಂದ ಕೂಡಿರತಕ್ಕ ಜನ. ಇವರು ಅವಿದ್ಯಾವಂತರಾಗಿದ್ದಾರೆ. ಅವರ ಪುನರ್ವಸತಿಗಾಗಿ ಮೂರನೆಯ ಯೋಜನೆಯಲ್ಲಿ 500 ಮನೆಗಳನ್ನು ಕಟ್ಟಿಸಿಕೊಡಲಾಗಿದೆ. 46 ಶಾಲೆ ಗಳನ್ನು ತೆರೆಯಲಾಗಿದೆ. ಇವುಗಳಲ್ಲಿ 13 ಹೈಸ್ಕೂಲುಗಳಾಗಿವೆ. 10 ಸಾವಿರ ವಿದ್ಯಾರ್ಥಿಗಳು ಈ ಶಾಲೆ ಗಳಲ್ಲಿ ಓದುತ್ತಿದ್ದಾರೆ. ಅವರೆಲ್ಲರೂ ಕೂಡ ಬುದ್ಧಿವಂತರು. ಈ ಜನಗಳಿಗಾಗಿ 105 ಸಹಕಾರ ಸಂಘಗಳನ್ನು ಮಾಡಲಾಗಿದೆ, ಬೆಂಗಳೂರಿನಲ್ಲಿ ಒಂದು ಇನ್‌ಲ್ಯಾಂಡ್ ಫೆಡರೇಷನ್ ಇದೆ. ಮತ್ತೊಂದು ಸೌತ್ ಕೆನರಾ ಫಿಷ್ ಫೆಡರೇಷನ್, ನಾರ್ತ್ ಕೆನರಾದಲ್ಲಿ ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ಕೂಡ ಅವರಿಗೆ ಸಾಲಗಳನ್ನು ಕೊಡತಕ್ಕದ್ದು ಮತ್ತು ಅವರಿಗೆ ಫಿಷರಿ ರಿಕ್ವಿಸಿಟ್ಸ್ ಇವುಗಳನ್ನು ಕೊಡತಕ್ಕದ್ದು ಅಲ್ಲದೆ ಸಹಕಾರ ಸಂಸ್ಥೆಗಳ ಮುಖಾಂತರ ಅವರಿಗೆ ಬೇಕಾದ ಸಹಾಯವನ್ನು ಕೊಡುತ್ತಿದ್ದೇವೆ. ಒಂದು ಸಹಕಾರ ಸಂಸ್ಥೆಯವರೂಕೂಡ ಡಿಫಾಲ್ಟ್ ಆಗಿಲ್ಲ. ಐದು ವರ್ಷಗಳಲ್ಲಿ ಹಿಂದಕ್ಕೆ ಕೊಡಬೇಕಾದ ಹಣವನ್ನು ಮೂರು ವರ್ಷಗಳಲ್ಲಿಯೇ ವಾಪಸ್ ಕೊಟ್ಟು ಅವರ ಪ್ರಾಮಾಣಿಕತೆಯನ್ನು ಎತ್ತಿ ತೋರಿಸಿದ್ದಾರೆ.

ಮೈಸೂರು ಸಂಸ್ಥಾನದಲ್ಲಿ ಒಳನಾಡಿನಲ್ಲಿ ಅನೇಕ ಕೆರೆಗಳು ಬತ್ತಿ ಹೋಗಿರುವುದರಿಂದ ಆ ಕೆರೆಗಳಲ್ಲಿ ಮೀನಿನ ಮರಿಗಳನ್ನು ತಂದು ಹಾಕುವುದು ಸಾಧ್ಯವಾಗಲಿಲ್ಲ. ಮುಂದಿನ ವರ್ಷದಿಂದ ಸಮೃದ್ಧಿಯಾಗಿ ಮಳೆಯಾಗಿ ಕೆರೆಕಟ್ಟೆಗಳು ತುಂಬಿದ ಪಕ್ಷದಲ್ಲಿ ಆ ಕೆರೆಗಳಲ್ಲಿ ಮೀನಿನ ಮರಿಗಳನ್ನು ಹಾಕಬಹುದು. ಅದರಿಂದ ನಮ್ಮ ಸಂಸ್ಥಾನದ ಉತ್ಪತ್ತಿಯನ್ನೂ ಹೆಚ್ಚು ಮಾಡುವುದಕ್ಕೆ ಅವಕಾಶವಾಗುತ್ತದೆ. ಪ್ರೋಟೀನ್ ಫಿಷ್ ಏನಿದೆ ಅದನ್ನು ಹೆಚ್ಚಿನ ರೀತಿಯಲ್ಲಿ ತಯಾರು ಮಾಡುವುದಕ್ಕೂ ಅವಕಾಶವಾಗುತ್ತದೆ. ಆದುದರಿಂದ ಈ ಬಾಬಿಗೆ ಕೊಟ್ಟಿರತಕ್ಕ ಹಣ ಸಾಲುವುದಿಲ್ಲ, ಇನ್ನೂ ಹೆಚ್ಚಿಗೆ ಹಣವನ್ನು ಒದಗಿಸಿಕೊಡಬೇಕು, ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಮೂರನೆಯ ಯೋಜನೆಯಲ್ಲಿ 130 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ ಕೂಡ 180 ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡುವುದಕ್ಕೆ ಅವಕಾಶವನ್ನು ಕೊಟ್ಟರು. ಹಾಗೆಯೇ ಈಗ 46 ಲಕ್ಷ ಇರುವುದನ್ನು ಕೂಡ 146 ಲಕ್ಷ ಖರ್ಚು ಮಾಡುವುದಕ್ಕೆ ಅವಕಾಶ ಕೊಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ. ಆ ದೃಷ್ಟಿಯಿಂದ ಮೀನಿನ ಅಭಿವೃದ್ಧಿ ಇನ್ನೂ ಹೆಚ್ಚಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ ಎಂದು ಭಾವಿಸಿದ್ದೇನೆ. ನಾಲ್ಕನೆಯ ಯೋಜನೆಯಲ್ಲಿ ಆರು ಮೆರೀನ್ ಫಿಷರಿ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳ ಬೇಕೆಂದು ಇಟ್ಟುಕೊಂಡಿದ್ದೇವೆ. ಹಾಗೆಯೇ ಇನ್‌ಲ್ಯಾಂಡ್ ಫಿಷರಿ ಪ್ರಾಜೆಕ್ಟ್‌ನಲ್ಲಿ 10 ಬ್ಲಾಕುಗಳನ್ನು ಹೆಚ್ಚು ಮಾಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಮುಂದಿನ ವರ್ಷ ಒಂದು ಫಿಷರಿ ಕಾರ್ಪೊರೇಷನ್ ಮಾಡುವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ.

ಹೈಸ್ಕೂಲುಗಳಲ್ಲಿ ಫಿಷರಿ ಟೆಕ್‌ನಲಾಜಿಯನ್ನು ಪ್ರಾರಂಭ ಮಾಡತಕ್ಕದೆಂದು ಸರ್ಕಾರದವರು ಒಪ್ಪಿ ಕೊಂಡಿದ್ದಾರೆ. ಅದರ ಬಗ್ಗೆ ಒಂದು ಸ್ಟ್ಯಾಟಿಸ್ಟಿಕಲ್ ವಿಂಗನ್ನು ಸ್ಥಾಪನೆ ಮಾಡ ಬೇಕೆಂದು ಮಾಡಿಕೊಂಡಿದ್ದಾರೆ.

ಒಟ್ಟಿನಲ್ಲಿ ಇದುವರೆಗೆ ಏನೇನು ಕೆಲಸಕಾರ್ಯಗಳು ಉಳಿದಿವೆ ಅವನ್ನು ಮಾಡಿ ಈ ಐದು ಯೋಜನೆಗಳನ್ನು ಈ ವರ್ಷ ಕಾರ್ಯಗತ ಮಾಡತಕ್ಕ ಒಂದು ಯೋಚನೆಯನ್ನು ಸಂಬಂಧಪಟ್ಟ ಇಲಾಖೆಯವರು ಇಟ್ಟುಕೊಂಡಿ ದ್ದಾರೆ. ಅದರಿಂದಲೇ ಕೇಂದ್ರ ಸರ್ಕಾರದವರು ಹಾಗೂ ರಾಜ್ಯ ಸರ್ಕಾರದವರು ಫಿಷರಿ ಡಿಪಾರ್ಟ್‌ಮೆಂಟಿ ಗೋಸ್ಕರ ಯಾವರೀತಿ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದಾರೆ ಎಂಬುದಾಗಿ ನಾನು ಕೊಟ್ಟ ಅಂಕಿ ಅಂಶಗಳಿಂದ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಾಗಿದೆ. ಆದ್ದರಿಂದ ಈಗ ಸಭೆಯಮುಂದೆ ಇರತಕ್ಕ ಬೇಡಿಕೆಗಳಿಗೆ ಮಾನ್ಯ ಸದಸ್ಯರೆಲ್ಲರೂ ಅವಿರೋಧವಾಗಿ ಒಪ್ಪಿ ಮಂಜೂರಾತಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಈಗ ವ್ಯವಸಾಯ ಇಲಾಖೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅನೇಕ ವಿಷಯಗಳನ್ನು ಹೇಳಿದರು. ಇದರಲ್ಲಿ ಸರ್ಕಾರಕ್ಕೂ ಮತ್ತು ರೈತರಿಗೂ ನಿಕಟಸಂಪರ್ಕವನ್ನು ಏರ್ಪಡಿಸ ಬೇಕಾಗಿದೆ. ಮೈಸೂರು ಫಾರ್ಮರ್ಸ್ ಆರ್ಗನೈಜೇಷನ್ ಮತ್ತು ಮೈಸೂರು ಫಾರ್ಮರ್ಸ್ ಫೋರಂ ವಿಷಯ

ವಾಗಿ ಮುಖ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಅವು ಜೀವಂತವಾಗಿ ಕೆಲಸಮಾಡುತ್ತಿವೆಯೆ, ಅಲ್ಲಿ ಏನೇನು ಕೆಲಸಕಾರ್ಯಗಳಾಗಿವೆ, ರೈತರಿಗೆ ಯಾವ್ಯಾವ ರೀತಿಯಲ್ಲಿ ಸರ್ಕಾರದವರು ಸಹಾಯ, ಸಹಕಾರಗಳನ್ನು ಕೊಟ್ಟಿದ್ದಾರೆ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಎರಡು ಸಂಸ್ಥೆಗಳು ಯೋಗ್ಯ ರೀತಿಯಲ್ಲಿ ಕೆಲಸಮಾಡುತ್ತಿವೆ. ಆದರೆ ಮೊದಲಿನಲ್ಲಿ ಸಾಕಷ್ಟು ಸಹಾಯ ಸರ್ಕಾರದವರಿಂದ ಇರಲಿಲ್ಲ. ಈಗ ಸರ್ಕಾರದವರು ಸಹಾಯ ಕೊಡಬೇಕೆಂದು ಮನವಿಮಾಡಿದ್ದಾರೆ. ಮತ್ತು ಕೆಲವು ಪಬ್ಲಿಕೇಷನ್ಸ್ ಸಹ ಮಾಡಿದ್ದಾರೆ. ಮಾಹೆಯಾನ ಪಬ್ಲಿಕೇಷನ್ಸ್ ರೈತರಿಗೆ ಬಹಳ ಉಪಯುಕ್ತವಾದುವು. ಆದ್ದರಿಂದ ಹೆಚ್ಚಿನ ರೀತಿಯಲ್ಲಿ ಸರ್ಕಾರ ಸಹಾಯಮಾಡುವುದು ಅವಶ್ಯಕವಿದೆ. ಇದನ್ನು ಖಾಯಂ ಆಗಿ ನಡೆಸುವುದಕ್ಕೆ ಒಂದು ಸ್ವಂತ ಕಟ್ಟಡ ಹಾಗೂ ಒಂದು ಕೋಲ್ಡ್ ಸ್ಟೋರೇಜ್ ಪ್ಲಾಂಟ್—ಇಡಬೇಕೆಂದು ಪ್ರಯತ್ನಮಾಡುತ್ತಿದ್ದಾರೆ. ಅದಕ್ಕಾಗಿ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆ.

ಶ್ರೀ ಸಂಜೀವನಾಥ ಐಕಳ.—ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಕೊಡುತ್ತೇವೆ ಎಂಬುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅದಕ್ಕೆ ಬೇಕಾದ ಸಾಲವನ್ನು ಯಾವರೀತಿಯಲ್ಲಿ ಕೊಟ್ಟಿದ್ದಾರೆ ? ಅದರಲ್ಲಿ ಮುನಿಸಿಪಾಲಿಟಿಯೋ, ಕಾರ್ಪೊರೇಷನ್ನೋ ಸರ್ಕಾರವೂ ಅಲ್ಲ, ಖಾಸಗಿ ಜನರೂ ಅಲ್ಲ. ಕೋಲ್ಡ್ ಸ್ಟೋರೇಜ್ ಕೋಲ್ಡಾಗಿ ಪೇಪರ್‌ನಲ್ಲಿ ಬಿದ್ದಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಮೊನ್ನೆ ಅದಕ್ಕೂ ಸಹಾಯಮಾಡಬೇಕೆಂದು ತೀರ್ಮಾನವಾಗಿದೆ ಅವರ ಕೈಲಿ ಕೊಡುತ್ತೇವೆ. ಅದರಲ್ಲಿ ಏನೂ ಅನುಮಾನ ಬೇಡ.

ಶ್ರೀ ಸಿದ್ದಯ್ಯ ಕಾಶೀಮಠ್.—ಹಿಂದೆ ಇಲ್ಲಿ ಹೆಸರುವಾಸಿಯಾದಂಥ ಗಾರ್ಡನ್ನುಗಳು ಅಂದರೆ ವಿಧಾನ ಸೌಧ ಗಾರ್ಡನ್ ಮತ್ತು ಕಬ್ಬನ್‌ಪಾರ್ಕ್ ಗಾರ್ಡನ್. ಇವು ಸುವ್ಯವಸ್ಥಿತವಾದ ರೀತಿಯಲ್ಲಿರುವುದರಿಂದ ಅಲ್ಲಿ ಸರ್ಕಾರದವರು ಸರ್ಕಾರೀ ತೋಟವನ್ನಾಗಿ ಬೆಳೆಸ್ತುತ್ತಿದ್ದಾರೆ. ಹಾಗೆಯೇ ನಮ್ಮ ರಾಜ್ಯದ ಎಲ್ಲಾ ತೋಟಗಳನ್ನೂ ಸರಿಯಾದ ರೀತಿಯಲ್ಲಿಡುವ ಹಾಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈಗಿರತಕ್ಕ ತೋಟಗಳು ಒಳ್ಳೆಯ ಸ್ಥಿತಿಯಲ್ಲಿವೆ. ಮಾನ್ಯ ಸದಸ್ಯರು ಹೇಳಿದಹಾಗೆ ಎಲ್ಲಾ ತೋಟಗಳನ್ನೂ ಚೆನ್ನಾಗಿಡುವುದು ಸರ್ಕಾರದವರ ಕರ್ತವ್ಯ, ಮತ್ತು ಅವಶ್ಯಕ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಧಾರವಾಡ, ಬಿಜಾಪುರ, ಬೆಳಗಾಂನಲ್ಲಿ ಚಾಪೆ, ಬುಟ್ಟಿ ಮರ—ಇವುಗಳನ್ನು ಮಾಡತಕ್ಕ ಮೇದಿರುಗಳಿಗೆ ಅವರ ಸಮಾಜದ ಅಭಿವೃದ್ಧಿಗಾಗಿ ದಬ್ಬೆ, ಬೊಂಬುಗಳನ್ನು ಕೊಡಬೇಕು ಎಂಬುದಾಗಿ ಹೋದಸಾರಿಯೇ ವಿನಂತಿಮಾಡಿಕೊಂಡಿದ್ದೆವು. ಆ ವಿಚಾರವಾಗಿ ಸಾಕಷ್ಟು ಹೇಳಿದ್ದೇವೆ. ಒಂದು ಜಂಗಲ್ಲನ್ನೇ ಅವರಿಗಾಗಿ ರಿಜರ್ವ್‌ಮಾಡಿ ಇಡಬೇಕೆಂದೂ ಮತ್ತು ಸ್ವಲ್ಪ ಭಾಗವನ್ನು ಪೇಪರ್ ಮಿಲ್ ನವರಿಗೂ ಕೊಡಬೇಕೆಂದೂ ಹೇಳಿದ್ದೆವು. ಅದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಈ ಕೈಗಾರಿಕೆಯನ್ನು ಅವಲಂಬಿಸಿರತಕ್ಕ ಜನ ಸಣ್ಣ ಪುಟ್ಟ ಪಂಗಡಗಳವರು. 3 ತಿಂಗಳುಗಳವರೆಗೆ ಬಿದಿರನ್ನು ಕಡಿಯಬಾರದೆಂದು ನಿಯಮ ಮಾಡಲಾಗಿದೆ. ಮೊಳಕೆ ಬಂದಾಗ ಅದನ್ನು ತೆಗೆದುಕೊಂಡುಹೋಗಿ ಊಟ ಮಾಡುವುದಕ್ಕೆ ಉಪಯೋಗಿಸುತ್ತಾರೆ. ಮೊಳಕೆಗಳು ಹೋದಮೇಲೆ ಬಿದಿರು ಬರುವುದಿಲ್ಲ. ಅದಕ್ಕೆ ನಿರ್ಬಂಧವಿದೆ. ಮಿಕ್ಕಿದ್ದನ್ನು ಎಷ್ಟುಬೇಕೋ ಅಷ್ಟು ಕೊಡುತ್ತಾರೆ. ತೊಂದರೆ ಯಾದಾಗ ಎಷ್ಟುಬೇಕೋ ಅಷ್ಟನ್ನು ಬೇರೆ ಭಾಗದಿಂದ ತರಿಸಿಕೊಡಬೇಕೆಂದು ಅಧಿಕಾರಿಗಳಿಗೆ ಸೂಚನೆಕೊಟ್ಟಿದೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸುಳ್ಯಾ).—ಸಾಗುವಳಿಗೆ 1 ಲಕ್ಷ ಚಿಲ್ಲರೆ ಎಕರೆಯಷ್ಟು ಜಮೀನನ್ನು ಅರಣ್ಯ ಪ್ರದೇಶದಲ್ಲಿ ಮೀಸಲಾಗಿಡಬೇಕೆಂದು ಹಿಂದೆಯೇ ಹೇಳಿತ್ತು. ಸೌತ್ ಕೆನರಾದಲ್ಲಿ ಇದಕ್ಕೋಸ್ಕರ ಎಷ್ಟು ಎಕರೆ ಜಮೀನನ್ನು ಬಿಟ್ಟಿದ್ದಾರೆ. ಅದರ ಪೈಕಿ ರೆವಿನ್ಯೂ ಎಷ್ಟು ಎಕರೆ ಜಮೀನನ್ನು ಸೌತ್ ಕೆನರಾಕ್ಕೆ ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಸುಮಾರು 50 ಸಾವಿರ ಎಕರೆಗಳವರೆಗೆ ಅಲ್ಲಿನ ರೆವಿನ್ಯೂ ಜಮೀನು ಅರಣ್ಯ ಇಲಾಖೆಗೆ ಸಂಬಂಧಪಟ್ಟಿದೆ. ಸುಮಾರು 7 ಸಾವಿರ ಚಿಲ್ಲರೆ ಜಮೀನು ಸಾಗುವಳಿಗೆ ಬಿಟ್ಟಿದೆ.

Sri R. S. HEGDE (Honnawar).—Have the Government started any industry in forests and are they running on profitable lines ?

ಶ್ರೀ ಬಿ. ರಾಚಯ್ಯ.—ನಿನ್ನೆ ದಿವಸ ಶ್ರೀಮಾನ್ ದೇವೇಗೌಡರು ಮಾತನಾಡುತ್ತಾ ಈ ವಿಚಾರವಾಗಿ ಕೇಳಿದ್ದರು. ಈ ಇಲಾಖೆಯ ಮುಖಾಂತರ ಅನೇಕ ಸಾ ಮಿಲ್ಲುಗಳು ಲಾಭವನ್ನು ಪಡೆದಿವೆ. ಜೈಹಿಂದ್ ಸಾ ಮಿಲ್ ದಾಂಡೇಲಿಯಲ್ಲಿ ಸುಮಾರು ಶೇ. 5.29 ರಷ್ಟು ಲಾಭವನ್ನು ಸಂಪಾದನೆ ಮಾಡಿದೆ. ಶಿವಮೊಗ್ಗದ ಗೌರ್ನ್‌ಮೆಂಟ್ ಸಾ ಮಿಲ್ ಶೇ. 5.1ರಷ್ಟು ಲಾಭ ಪಡೆದಿದೆ, ಮುಡಕಲ್ ಗೌರ್ನ್‌ಮೆಂಟ್ ಸಾ ಮಿಲ್ಸ್ ಶೇ. 5.4ರಷ್ಟು ಲಾಭ ಪಡೆದಿದೆ. ಭದ್ರಾವತಿಯ ಗೌರ್ನ್‌ಮೆಂಟ್ ವುಡ್ ಪ್ರಿಜರ್‌ವೇಷ- ಮಿಲ್ಸ್ ಶೇ. 15.50 ರಷ್ಟು ಲಾಭ ಸಂಪಾದಿಸಿದೆ. ಆದರೆ ತುಮಕೂರಿನ ಸೆಂಟ್ರಲ್ ವುಡ್ ವರ್ಕಿಂಗ್ ಫ್ಯಾಕ್ಟರಿ ಇರುವಕಡೆ ಸುತ್ತ ಮುತ್ತಲೂ ಅರಣ್ಯವಿಲ್ಲ. ಅಲ್ಲಿ ಪ್ಲಾಂಟನ್ನು ಹಾಕುವುದಕ್ಕೆ, ಸಾಗಾಣಿಕೆ ಮಾಡುವುದಕ್ಕೆ ಟ್ರಾನ್ಸ್‌ಪೋರ್ಟೇಷನ್ ಜಾಸ್ತಿಯಾಗುತ್ತಿರುವುದರಿಂದ ಸುಮಾರು ಶೇ. 1.3ರಷ್ಟು ನಷ್ಟದಲ್ಲಿ ಅದು ನಡೆಯುತ್ತಿದೆ.

ಶ್ರೀ ಎಸ್. ಎ. ಕರಿಲಿಂಗಣ್ಣನವರ್ (ಗೋಕಾಕ್-1).—ಸರ್ಕಾರದವರು ಈಗ ಒಂದು ಸಾವಿರ ಪ್ಲಾಂಟ್‌ಗಳನ್ನು ಹಾಕಬೇಕಾಗಿದೆ ಎಂದು ಹೇಳಿರುವುದರಿಂದ ಪ್ರತಿಯೊಂದು ಪ್ಲಾಂಟಿಗೂ ಸುಮಾರು 22 ರೂಪಾಯಿಗಳ ಖರ್ಚು ರೈತನಿಗೆ ಬೀಳುತ್ತದೆ. ಅದು ಅವನಮೇಲೆ ಬೀಳದಹಾಗೆ ಸರ್ಕಾರದವರೇ ನೇರವಾಗಿ ಆ ಕಾರ್ಯವನ್ನು ಮಾಡುವುದಕ್ಕೆ ಏನು ಕ್ರಮವನ್ನು ಈಗಾಗಲೇ ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಆ ವಿಚಾರ ಸರ್ಕಾರದ ಆಲೋಚನೆಯಲ್ಲಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪವರ್ ಟಿಲ್ಲರ್ಸ್‌ಮೇಲೆ ಮಾರಾಟ ತೆರಿಗೆ ವಿಧಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಟೌನುಗಳಲ್ಲಿನ ಮಲಮೂತ್ರಾದಿಗಳನ್ನು ಹಾಗೂ ಕೆಲವು ಕಚ್ಚಾ ವಸ್ತುಗಳನ್ನು ಸೇರಿಸಿ ಗೊಬ್ಬರ ತಯಾರು ಮಾಡತಕ್ಕ ಬಗ್ಗೆ ಏನೂ ತಿಳಿಸಲಿಲ್ಲ. ಇವರು ಕೇಂದ್ರದ ಸಹಾಯ ಧನದಿಂದ ಕಾಂಪೋಸ್ಟ್ ಗೊಬ್ಬರವನ್ನು ತಯಾರುಮಾಡಲು ಏನೂ ಪ್ರಯತ್ನ ಮಾಡುತ್ತಿಲ್ಲ. ಅದರ ಬಗ್ಗೆ ಏನೂ ಹೇಳಲಿಲ್ಲ. ಮತ್ತೆ ಬಾವಿಗಾಗಿ ಅರ್ಜಿಗಳನ್ನು ಕೊಟ್ಟರೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನ ಸೊಸೈಟಿಯವರು ಅವನ್ನು ಸರಿಯಾಗಿ ರಿಸೀವ್‌ಮಾಡಿ ಪರಿಶೀಲಿಸುತ್ತಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಹಣವನ್ನು ಕೂಡಿಸಿಕೊಟ್ಟ ಕಡೆಗಳಲ್ಲಿ ಕೆಲವು ಬಾವಿಗಳನ್ನು ತೆರೆಯಲು ಸರ್ಕಾರದವರು ತೀರ್ಮಾನ ಮಾಡುತ್ತಾರೆ. ಬಾವಿಗಳಿಗಾಗಿ ಬರತಕ್ಕ ಅರ್ಜಿಗಳನ್ನು ಕಡ್ಡಾಯವಾಗಿ ರಿಜಿಸ್ಟರ್ ಮಾಡಬೇಕು. ಪ್ರಯಾರಿಟಿ ಮೇಲೆ ಅರ್ಜಿಗಳನ್ನು ತೆಗೆದುಕೊಂಡು ತೀರ್ಮಾನ ಮಾಡಬೇಕೆಂದು ಅವರಿಗೆ ಹೇಳಿದೆ. ಇನ್ನು ಅರಣ್ಯ ಶಾಖೆಯ ಸಚಿವರು ಇಲ್ಲಿ ಯಾವ್ಯಾವ ಕೈಗಾರಿಕೆಗಳು ಸ್ಥಾಪನೆಯಾಗುತ್ತವೆ, ಯಾವ್ಯಾವ ಕೈಗಾರಿಕೆಗಳಿಂದ ಎಷ್ಟರ ಮಟ್ಟಿಗೆ ಲಾಭಬಂದಿದೆಯೆಂಬುದನ್ನು ತಿಳಿಸಿದ್ದಾರೆ. ಯಾವ್ಯಾವ ಜಿಲ್ಲೆಯಲ್ಲಿ ಏನೇನು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದೋ ಅಲ್ಲಿಯೇ ಸ್ಥಾಪನೆ ಮಾಡುತ್ತೇವೆಯೋ ಹೊರತು ಬೇರೆ ಜಿಲ್ಲೆಯಲ್ಲಿ ಮಾಡುವುದಿಲ್ಲ. ಯಾವ್ಯಾವ ಜಿಲ್ಲೆಯಲ್ಲಿ ಕಾಡನ್ನು ಬೆಳೆಸುತ್ತಿದ್ದಾರೋ ಅಲ್ಲಿ ಹೆಚ್ಚಿನ ಸೌಕರ್ಯ ಸಿಗುತ್ತವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೈಗಾರಿಕೆಗಳನ್ನು ವಿಶೇಷವಾಗಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗಾ, ಮೈಸೂರಿಗೆ ಮಾತ್ರ ಇವರು ಕೊಟ್ಟಿದ್ದಾರಲ್ಲವೇ ?

ಶ್ರೀ ಬಿ. ರಾಚಯ್ಯ.—ಶಿವಮೊಗ್ಗಾದ ಪ್ಲೈವುಡ್ ಮತ್ತು ಮ್ಯಾಚ್ ಕಾರ್ಖಾನೆಗೆ ಕೆಲವು ಸೌಕರ್ಯಗಳನು ಕೊಟ್ಟಿದೆ. ಆದರೆ ಯಾರೂ ಅವರ ಕಾರ್ಖಾನೆಗೆ ಕೊಡದೆ ಬೇರೆಯವರಿಗೆ ಆರೀತಿ ಸೌಕರ್ಯಗಳನ್ನು ಕೊಟಿದ್ದಾರೆಂದು ಇವತ್ತಿನವರಿಗೂ ಸರ್ಕಾರಕ್ಕೆ ಅರ್ಜಿ ಕೊಟ್ಟಿಲ್ಲ. ಮೊನ್ನೆ ಹೇಳಿದರು ಬೊಂಬುಗಳನ್ನು ಯಾರಿಗೋ ಕೊಟ್ಟಿದ್ದಾರೆಂದು ಭದ್ರಾವತಿ ಪೇಪರ್ ಮಿಲ್‌ನವರಿಗೆ 50 ಪೈಸೆಯಂತೆ ಕೊಟ್ಟಿದೆ. ಶರಾವತಿ ಮುಳುಗಡೆಯಾದಂತಹವರು ಯಾರೂ ಇನ್ನೂ ಅದರಲ್ಲಿ ತೆಗೆದುಕೊಳ್ಳಲಿಲ್ಲ. ದಾಂಡೇಲಿ ಪೇಪರ್ ಮಿಲ್‌ನವರು ಯಾರಾದರೂ ಅರ್ಜಿ ಹಾಕಿದ್ದಾರೆಂದೂ ಅವರಿಗೆ ಆ ದರದಲ್ಲಿ ಕೊಟ್ಟಿದ್ದರೆ ಆರೋಪಣೆ ಮಾಡಬಹುದಾಗಿತ್ತು. ನೀರಿನಲ್ಲಿ ಮುಳುಗಿಹೋಗಿ ನಷ್ಟ ಹೊಂದಿದವರಿಗೆ, ಕಾರ್ಖಾನೆ ಸುಟ್ಟುಹೋಗಿ ನಷ್ಟಪಟ್ಟವರಿಗೆ ಒಂದು ಟನ್ ಡ್ರೈ ಬೊಂಬಿಗೆ 7.50ರಂತೆ ಕೊಟ್ಟಿದ್ದೇವೆ. ಬೊಂಬಾಯಿ ಸರ್ಕಾರದವರು 1 ಟನ್ ಫಲ್ಪ್‌ಗೆ 3.25ರಂತೆ ಕೊಡುತ್ತಾರೆ. 2½ಟನ್ನುಗಳಷ್ಟು ಡ್ರೈ ಬೊಂಬು ಬೇಕಾಗುತ್ತದೆ. 2.5 ರೂಪಾಯಿಗಳನ್ನು ಹೆಚ್ಚಿಸಿದುದರಿಂದ ಅವರು ಕಾಂಪ್ಲಿಮೆಂಟ್ ಮಾಡಲಿಲ್ಲ. ಆರೋಪಣೆ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸಂಬಂಧಪಟ್ಟ ಕಾಗದ ಪತ್ರಗಳನ್ನು ಮತ್ತು ದಾಖಲಾತಿಗಳನ್ನು ಸರ್ಕಾರಕ್ಕೆ ಕೊಟ್ಟರೆ, ಅದನ್ನು ಸರಿಪಡಿಸುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ನಿನ್ನೆ ದಿವಸ ಕೆಲವು ಮಾನ್ಯ ಸದಸ್ಯರು ಹಿಂದಿನ ಫಾರೆಸ್ಟ್ ಮಂತ್ರಿಗಳು ಮರಗಳನ್ನು ಕಡಿಮೆ ರೇಟಿಗೆ ಕೊಟ್ಟಿದ್ದರು ಎಂದು ಆರೋಪಣೆ ಮಾಡಿದರು. ಅದು ನಿಜ. ಹಿಂದೆ ಮರಗಳನ್ನು ಎಷ್ಟು ರೇಟಿಗೆ ಕೊಟ್ಟಿದ್ದರು, ಈಗ ನಾವು ಎಷ್ಟು ರೇಟು ಮಾಡಿದ್ದೇವೆ ಎಂಬುದನ್ನು ನಾನು ಈಗ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ—

		ಹಿಂದೆ ಕೊಟ್ಟಿದ್ದ ರೇಟು ರೂಪಾಯಿಗಳು	ಈಗ ಕೊಟ್ಟಿರುವ ರೇಟು ರೂಪಾಯಿಗಳು
ಗೋಟಿಂಗ್ ತಾರೆ ಮರ	...	10	40
ಜಮಾರ್ ಮರ	...	31	40
ಹಲಗೆ ಮರ	...	31	55
ಅಪ್ಪ ಮರ	...	25	35
ಫಾಥ್ಲ	...	12	50
ಮ್ಯಾಂಗೋ	...	50	100
ಬೆನೆಟಾ	...	45	225

ಆದ್ದರಿಂದ ನಾವು ಸರ್ಕಾರಕ್ಕೆ ಲಾಭ ಬರುವಂತೆ ಮಾಡಬೇಕೆಂಬುದನ್ನು ಅರಿತುಕೊಂಡು ರೇಟುಗಳನ್ನು ಎರಡು ಸಾರಿ ರಿವೈಜ್ ಮಾಡಿ ರೇಟನ್ನು ಹೆಚ್ಚಿಗೆ ಮಾಡಿದ್ದೇವೆ.

ಶ್ರೀ ಎಸ್. ನಿಜಲಿಂಗಪ್ಪ.—ಈಗಾಗಲೇ ಕಟ್‌ಮೋಷನ್ ಮೇಲೆ ಜವಾಬು ಕೊಟ್ಟಿದೆ. ಸುಮ್ಮನೆ ಕ್ಲಾರಿಫಿಕೇಷನ್ ಕೇಳುತ್ತೇವೆಂದು ಇದನ್ನು ಕ್ವೆಶ್ಚನ್ ಅವರ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಪವರ್ ಟಿಲ್ಲರಿಗೆ ಸೇಲ್ಸ್ ಟ್ಯಾಕ್ಸ್ ಬಿಡಬೇಕು ಎಂದು ಹೇಳಿದರು. ಅದು ಒಂದು ಸೂಚನೆಯೇ ಹೊರತು, ಈಗ ಅದನ್ನು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಅದು ಸಾಕಷ್ಟು ಆಲೋಚನೆ ಮಾಡಬೇಕಾದ ವಿಚಾರ. ಆಮೇಲೆ ಮಲಮೂತ್ರವನ್ನು ಉಪಯೋಗಿಸಿಕೊಂಡು ಗೊಬ್ಬರವನ್ನು ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಅದು ಒಳ್ಳೆಯ ಕೆಲಸ. ಇವರು ಹೇಳುವುದಕ್ಕಿಂತ ಮುಂಚೆಯೇ ಅನೇಕ ದೊಡ್ಡವರು ಸಹ ಅದನ್ನು ಹೇಳುತ್ತಿದ್ದಾರೆ. ಅದನ್ನು ಎಲ್ಲೆಲ್ಲಿ ಎಷ್ಟರಮಟ್ಟಿಗೆ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಯೋಚನೆ ಮಾಡಿ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಚ್ಚಾ ಮಾಲುಗಳನ್ನು ಉಪಯೋಗಿಸುವುದಕ್ಕೆ ಸರ್ಕಾರದವರು ಕೊಡುವು ದಿಲ್ಲ. ಈಗ ನಾನು ಅದನ್ನು ಸಾಬೀತು ಮಾಡಿದರೆ ಅದನ್ನು ಪರಿಶೀಲನೆ ಮಾಡುವುದಕ್ಕೆ ತಾವು ಸಿದ್ಧರಾಗಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಊಹೆ ಮಾಡಿಕೊಂಡು ಹೇಳುತ್ತಿದ್ದಾರೆ. ಅದು ದುರದೃಷ್ಟದ ಮಾತು. ಮಾನ್ಯ ಸದಸ್ಯರು ಅದನ್ನು ಬರೆದುಕೊಟ್ಟರೆ ಆರೀತಿ ಎಲ್ಲೆಲ್ಲಿ ನಡೆಯುತ್ತಿದೆ ಎಂದುಬನ್ನು ವಿಚಾರ ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಹಳ್ಳಿಗಳಲ್ಲಿ ಕೆರೆಗಳಲ್ಲಿ ಹೂಳು ತೆಗೆಸುವುದಕ್ಕೆ, ರೈತರಿಗೆ ಗೊಬ್ಬರ ಮತ್ತು ಮಣ್ಣನ್ನು ಹೊಲಗಳಿಗೆ ಹೇರುವುದಕ್ಕೆ ವ್ಯವಸಾಯ ಇಲಾಖೆಯವರು ಲಾರಿಯನ್ನು ಕೊಡುತ್ತಿದ್ದರು. 1956ನೆ ಇಸವಿಯಿಂದ ಈಚೆಗೆ ಆ ಪದ್ಧತಿ ನಿಂತುಹೋಗಿದೆ. ಆದ್ದರಿಂದ ಪ್ರತಿ ಡಿಸ್ಟ್ರಿಕ್ಟ್‌ನಲ್ಲಿಯೂ ಸರ್ಕಾರ ದವರು ಲಾರಿ ಮತ್ತು ಟ್ರ್ಯಾಕ್ಟರುಗಳನ್ನು ಇಟ್ಟು ಹಳ್ಳಿಗಳಿಗೆ ರೈತರಿಗೆ ಗೊಬ್ಬರ ಗೋಡು ಇವುಗಳನ್ನು ಹೊಲಕ್ಕೆ ಹೇರುವುದಕ್ಕೆ ಅವರಿಗೆ ಒದಗಿಸಿಕೊಡಬೇಕು. ಈ ದೃಷ್ಟಿಯಿಂದ ಹಿಂದೆ ಇದ್ದಂತಹ ಪದ್ಧತಿಯನ್ನು ಜಾರಿಗೆ ತರಬೇಕು. ಮತ್ತು ನಮ್ಮ ಕಡೆ ತೆಂಗಿನ ಮರಗಳಿಗೆ ದುಂಬಿಗಳು ಬಿದ್ದು ಸಾವಿರಾರು ತೆಂಗಿನ ಮರಗಳು ಸತ್ತು ಹೋಗುತ್ತಿವೆ. ಈಗ ಕೇರಳದಲ್ಲಿ ಮಾಸ್ ಸ್ಪ್ರೇ ಮಾಡುತ್ತಿದ್ದಾರೆ. ಅದೇರೀತಿ ಮೈಸೂರಿನಲ್ಲಿಯೂ ಮಾಸ್‌ಸ್ಪ್ರೇ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಆರೀತಿ ಮಾಡಿದರೆ ನಮ್ಮ ದೇಶದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಉಳಿಸಬಹುದು ಇದರ ಬಗ್ಗೆ ಸರ್ಕಾರದವರು ಏರ್ಪಾಟು ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಸೂಚನೆ ಮಾಡಿದ್ದಾರೆ. ಇದು ಖಂಡಿತ ಯೋಚನೆ ಮಾಡಬೇಕಾದ ವಿಚಾರ. ಮಾನ್ಯ ಸದಸ್ಯರು ಇಲ್ಲಿ ಕೇಳುವುದಕ್ಕಿಂತ ನಮಗೆ ಬಂದು ಹೇಳಿದರೆ ಅದನ್ನು ವಿಚಾರ ಮಾಡಬಹುದು.

ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಮಾನ್ಯ ಅರಣ್ಯ ಶಾಖೆಯ ಮಂತ್ರಿಗಳು ಹೇಳಿದರು ಷೆಡ್ಯೂಲ್ ಕ್ಯಾಸ್ಟಿನವರಿಗೆ ಮತ್ತು ಸ್ಕೂಲುಗಳಿಗೆ ಒಂದು ಸಾವಿರ ರೂಪಾಯಿ ಬೆಲೆ ಬಾಳುವ ಮರವನ್ನು ಉಚಿತವಾಗಿ ಕೊಡುತ್ತೇವೆಂದು ಹೇಳಿ ಒಂದು ಆರ್ಡರನ್ನು ಮಾಡಿದ್ದೇವೆ ಎಂದು ಹೇಳಿದರು. ಆದರೆ ಆ ಮರಗಳನ್ನು ಅವು ಬೆಳೆಯುವ ಪ್ರದೇಶದಿಂದ ತರಬೇಕಾದರೆ ಬಹಳ ದೂರ ಆಗುತ್ತದೆ. ಮತ್ತು ಅದನ್ನು ತರಬೇಕಾದರೆ ಜಾಸ್ತಿ ಖರ್ಚನ್ನೂ ಸಹ ಕೊಡಬೇಕಾಗುತ್ತದೆ. ಆದ್ದರಿಂದ ಬೆಂಗಳೂರಿನಲ್ಲಿಯೇ ಒಂದು ಡಿಪೋ ಮಾಡಿ ಅದರ ಮುಖಾಂತರ ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಅರಣ್ಯ ಇರುವ ಪ್ರದೇಶದಿಂದ ಮರಗಳನ್ನು ಬೆಂಗಳೂರಿಗೆ ಸಾಗಿಸಿ ಇಲ್ಲಿ ಡಿಪೋ ಗಳನ್ನು ತೆರೆದು ಅದರ ಮುಖಾಂತರ ಮರಗಳನ್ನು ಒದಗಿಸಬೇಕೆಂದರೆ ಅದರ ಕ್ವಾಂಟಿಟಿ ಕಡಿಮೆ ಆಗುತ್ತದೆ. ಕ್ವಾಂಟಿಟಿ ಕಡಿಮೆ ಆದರೂ ಚಿಂತೆಯಿಲ್ಲ ಬೆಂಗಳೂರಿಗೇ ತರಿಸಿಕೊಡಿ ಎಂದು ಹೇಳಿದರೆ ಅದನ್ನು ಇಲ್ಲಿಗೇ ತರಿಸಿ ಕೊಡುತ್ತೇವೆ.

Mr. DEPUTY SPEAKER.—The question is :

"That the respective sums not exceeding the amounts mentioned in the Demand Nos. 20, 38 and 51 be granted to Government to defray the charges which will come in course of payment during the financial year for the period ending 31st day of March, 1967."

The motion was adopted.

As directed by the Chair the Motion for Demands for Grants adopted by the House are reproduced below :—

DEMAND *No*. 20.—AGRICULTURE, HORTICULTURE AND FISHERIES.

31. *Agriculture.*

"That a sum not exceeding Rs. 5,65,05,000 be granted to the Government to defray the charges which will come in course of payment during the financial year for the period ending 31st day of March 1967, in respect of 'Agriculture'."

DEMAND NO. 38.—FOREST.

70. *Forest.*

"That a sum not exceeding Rs. 5,96,77,000 be granted to the Government to defray the charges which will come in course of payment during the financial year for the period ending 31st day of March 1967, in respect of 'Forest'."

DEMAND NO. 51.—CAPITAL OUTLAY ON FORESTS.

119. *Capital Outlay on Forests.*

"That a sum not exceeding Rs. 9,00,000, be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Forests'."

DEMAND FOR GRANTS

DEMAND Nos : 2, 7, 8, 22, 33 and 42

SRI M. V. KRISHNAPPA (Minister for Revenue).—Sir, on the recommendation of the Governor of Mysore, I beg to move :

"That a sum not exceeding Rs. 2,31,74,000 be granted to the Government to defray the charges which will come in course of payment during the financial year for the period ending 31st day of March 1967, in respect of 'Land Revenue'."

"That a sum not exceeding Rs. 11,49,000 be granted to the Government to defray the charges which will come in course of payment during the financial year for the period ending 31st day of March 1967, in respect of 'Stamps'."

"That a sum not exceeding Rs. 23,96,000 be granted to the Government to defray the charges which will come in course of payment during the financial year for the period ending 31st day of March 1967, in respect of 'Registration Fees'."

"That a sum not exceeding Rs. 2,95, 67, 000 be granted to the Government to defray the charges which will come in course of payment during the financial year for the period ending 31st day of March 1967, in respect of 'Animal Husbandry'."

"That a sum not exceeding Rs. 33,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Famine Relief'."

"That a sum not exceeding Rs. 36,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'Payment of Compensation to Land holders, etc., on the Abolition of Zamindari System'."

Mr. DEPUTY SPEAKER.—Motion moved:

"That a sum not exceeding Rs. 2,31,74,000 be granted to the Government to defray the charges which will come in course of payment during the financial year for the period ending 31st day of March 1967, in respect of 'Land Revenue'."

"That a sum not exceeding Rs. 11,49,000 be granted to the Government to defray the charges which will come in course of payment during the financial year for the period ending 31st day of March 1967, in respect of 'Stamps'."

"That a sum not exceeding Rs. 23,96,000 be granted to the Government to defray the charges which will come in course of payment during the financial year for the period ending 31st day of March 1967, in respect of 'Registration Fees'."

"That a sum not exceeding Rs. 2,95,67,000 be granted to the Government to defray the charges which will come in course of payment during the financial year for the period ending 31st day of March 1967, in respect of 'Animal Husbandry'."

"That a sum not exceeding Rs. 33,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Famine Relief'."

"That a sum not exceeding Rs. 36,73,000 be granted to the Government to defray the charges which will come in course of payment during the financial year for the period ending 31st day of March 1967, in respect of 'Payment of Compensation to Land holders, etc., on the Abolition of Zamindari System'."

All the Demands are before the House for discussion.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ಈದಿವಸ ನಮ್ಮ ಮಾನ್ಯ ರೆವಿನ್ಯೂ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷಿಸುತ್ತೇನೆ. ರಿಪಬ್ಲಿಕ್ ಆಫ್ ಇಂಡಿಯಾ ಬಂದಮೇಲೆ ಅದರ ಒಂದು ಸಾಂಕೇತಿಕವಾಗಿ ಲ್ಯಾಂಡ್ ರೆವಿನ್ಯೂ ಅನ್ನು ತೆಗೆದುಹಾಕಬೇಕು, ಅದನ್ನು ವಿಮೋಚನೆ ಮಾಡತಕ್ಕ ಒಂದು ಪಾಲಿಸಿಯನ್ನು ಮಾಡಬೇಕು, ಇದು ಸಾಮಾನ್ಯ ಜನತೆಗೆ ಇವೊತ್ತಿನ ದಿವಸ ಸ್ವರಾಜ್ಯ ಬಂದಿರತಕ್ಕ ಒಂದು ದೊಡ್ಡ ಕುರುಹು ಆಗುತ್ತದೆ, ಅದರ ನೆನಪು ಸ್ಥಿರವಾಗಿ ಉಳಿಯುತ್ತದೆ, ಎಂದು ನಾವು ಪದೇ ಪದೇ ಒತ್ತಾಯ ಮಾಡುತ್ತಿದ್ದೇವೆ. ಈಗ ಇರತಕ್ಕ ಭೂಕಂದಾಯದ ಪದ್ಧತಿಯನ್ನು ಸಂಪೂರ್ಣವಾಗಿ ಮಾರ್ಪಾಡು ಮಾಡಿ ಜಮೀನಿನ ಕಂದಾಯವನ್ನು ರದ್ದುಗೊಳಿಸಿ ತನ್ಮೂಲಕ ಬಡವರಿಗೆ ಮತ್ತು ಕಡಿಮೆ ಹಿಡುವಳಿದಾರರಿಗೆ ವಿನಾಯ್ತಿ ಕೊಡಬೇಕು. ಹೆಚ್ಚು ಕೊಡತಕ್ಕಂಥ ಶಕ್ತಿ ಇರತಕ್ಕ ಜನಗಳಿಗೆ ಹೆಚ್ಚು ಹೆಚ್ಚು ಕಂದಾಯವನ್ನು ಹಾಕಿ ವಸೂಲು ಮಾಡಬೇಕು. ಈ ದೃಷ್ಟಿಯಿಂದ ನಮ್ಮ ದೇಶದಲ್ಲಿ ಭೂಕಂದಾಯವನ್ನು ಮಾರ್ಪಾಡು ಮಾಡುವುದು ಅಗತ್ಯ ಇದೆ.

10-30 A.M.

ನಮ್ಮ ಮಾನ್ಯ ರೆವಿನ್ಯೂ ಸಚಿವರು **Land Revenue System in Mysore—1948** ಎನ್ನುವುದರಲ್ಲಿ ಒಂದು ಕಮಿಟಿಯನ್ನು ಮಾಡಿದ್ದೆವು ಎಂದು ಹೇಳಿದ್ದಾರೆ. ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆಂದರೆ, ಜಮೀನುದಾರಿ ಪದ್ಧತಿ ತೆಗೆದು ಕಂದಾಯವನ್ನು ವಜಾ ಮಾಡಬೇಕು. ಅದರಲ್ಲೂ ಕಡಿಮೆ ಹಿಡುವಳಿದಾರರಿಗೆ ವಿನಾಯತಿ ಮಾಡಬೇಕು, ಇದನ್ನು ಅಗ್ರಿಕಲ್‌ಚರ್ ಇನ್‌ಕಂಟ್ಯಾಕ್ಸ್ ರೀತಿಯಲ್ಲೋ ಅಥವಾ ಬೇರಾವ ರೀತಿಯಲ್ಲೋ ತೆರಿಗೆ ಹಾಕಿ ಆ ತೆರಿಗೆಯನ್ನು ವಸೂಲಿ ಮಾಡಬೇಕು ಎಂದು ಸಲಹೆ ಕೊಟ್ಟಿದ್ದಾರೆ. ಇದನ್ನು ಸರಕಾರದವರು ಜಾರಿಗೆ ತರುವುದಕ್ಕೆ ಇನ್ನೂ ಹಿಂದು ಮುಂದು ನೋಡುತ್ತಿದ್ದಾರೆ. ಈಗ ಎಲ್ಲಾ ಕಡಿಮೆ ಹಿಡುವಳಿದಾರರಿಗೆ ವಿನಾಯತಿ ಕೊಡಬೇಕೆಂದರೆ ಒಂದು ಅಥವಾ ಎರಡು ಕೋಟಿಯಷ್ಟು ಉತ್ಪತ್ತಿ ಕಡಿಮೆಯಾಗುವುದನ್ನು ಬೇರೆ ರೀತಿಯಲ್ಲಿ ಸಂಪಾದಿಸಿಕೊಳ್ಳಬಹುದು. ಇದಕ್ಕೆ ತೀವ್ರಗಮನ ಕೊಟ್ಟು ನಮ್ಮ ಮಾನ್ಯ ರೆವಿನ್ಯೂ ಸಚಿವರು ಅಧಿಕಾರದಲ್ಲಿರುವ ಕಾಲದಲ್ಲೇ ಈ ಮಾರ್ಪಾಡನ್ನು ಮಾಡುತ್ತಾರೆಂದು ಭಾವಿಸುತ್ತೇನೆ ಇದೇರೀತಿಯಲ್ಲಿ ಲ್ಯಾಂಡ್ ರೆವಿನ್ಯೂ ಮೇಲೆ ಸೆಸ್ಸುಗಳನ್ನು ಹಾಕುತ್ತಿದ್ದೀರಿ. ಇದೇ ಕಮಿಟಿಯವರು ಇದನ್ನೇತಕ್ಕೆ ಹಾಕಬೇಕು ಎಂದು ಅವರು ಮುಂದೆ ಹೋಗಿ ಹೀಗೆ ಹೇಳಿದ್ದಾರೆ.

> "The levy of surcharge on land revenue has been discontinued as the Act was not extended."

ಇಲ್ಲಿ ಅಗ್ರಿಕಲ್‌ಚರಿಸ್ಟುಗಳು ಸೆಸ್ಸುಗಳನ್ನೇತಕ್ಕೆ ಕೊಡಬೇಕು ? ಸೆಸ್ಸುಗಳನ್ನೆಲ್ಲಾ ಅಬಾಲಿಷ್ ಮಾಡಬೇಕೆಂದು ಈ ಕಮಿಟಿಯವರು ಸಲಹೆಕೊಟ್ಟಿದ್ದಾರೆ. ಇವುಗಳೆಲ್ಲವನ್ನೂ ಸೋಷಿಯಲ್ ಸರ್ವಿಸ್‌ಗಳಂತೆ ವಸೂಲು ಮಾಡಬೇಕೆಂದೂ ಸಲಹೆ ಮಾಡಿದ್ದಾರೆ. ಇನ್ನು ಇದರ ಮೇಲೆ ಈಚೇಗೆ ಸರ್ ಚಾರ್ಜು ಎಂದು ಬೇರೆ ಹಾಕಿದ್ದಾರೆ. ಜಮೀನು ಕಂದಾಯವಲ್ಲದೆ ಪದೇ ಪದೇ ಸರ್‌ಚಾರ್ಜನ್ನು ಹಾಕಬೇಡಿ ಎಂದು ಎಷ್ಟೋ ವೇಳೆ ಹೇಳಿದರೂ ಹಾಕುತ್ತಿದ್ದಾರೆ. ತಾವು ಬಡ್ಜೆಟ್ ಮೆಮೋರ್‍ಯಾಂಡಂ ಪುಟ 12ರಲ್ಲಿ ನೋಡಬಹುದು. ಸರ್‌ಚಾರ್ಜನ್ನು ಕೇವಲ ಒಂದು ವರ್ಷಕ್ಕೋಸ್ಕರ ಎಂದು ಹೇಳಿಕೊಂಡು ಅದನ್ನು ಮುಂದಕ್ಕೆಹಾಗೆ ವರ್ಷ ವರ್ಷವೂ ಪಾಸ್ ಮಾಡುತ್ತಾ ತರುತ್ತಾರೆ. ಇದನ್ನು ತರಬೇಡಿ ಇದಕ್ಕೋಸರ ದೇಶದಲ್ಲಿ ಮುಂದೆ ಗೊಂದಲಗಳು ಬರಬಹುದು. ಈ ಚಾರ್ಜುಗಳಿಗೆ ಬದಲಾಗಿ ಇನ್ನಷ್ಟು ಅಸೆಸ್‌ಮೆಂಟ್ ಹಾಕಿದರೂ ಅದರಿಂದ ಇನ್ನಷ್ಟು ಅನುಕೂಲವಾಗುತ್ತದೆ. ರೈತರ ದೃಷ್ಟಿಯಿಂದ ಸರ್‌ಚಾರ್ಜನ್ನು ಅಬಾಲಿಷ್ ಮಾಡಬೇಕು. ಇದು ಪ್ರೆಸ್ಟೀಜ್ ಪ್ರಶ್ನೆಯಾಗಿ ಉಳಿಯಬೇಕು ಎನ್ನುವಂತೆ ಇದ್ದರೆ ಇದಕ್ಕೆ ಬದಲು **Social Service Tax** ಹಾಕಬಹುದು. ಇದನ್ನು ನಿಜವಾಗಿ ರೈತನ ಮೇಲೆ ಹಾಕಬೇಕೆಂದಿದ್ದರೆ, ಹಾಗೆ ಮಾಡದೆ ಎಲ್ಲರಿಂದಲೂ ವಸೂಲು ಮಾಡಲು ತಕ್ಕ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು **Demand (9) Sale of Revenue Lands** ಬಗ್ಗೆ ಇಲ್ಲಿ ಹೇಳಬೇಕಾಗಿದೆ. ಜಮೀನನು ಕೊಡುವ ಪದ್ಧತಿ ಹಿಂದೆ ಯಾವುದೋ ಕಾಲದಲ್ಲಿರುವ ಲ್ಯಾಂಡ್ ರೆವಿನ್ಯೂ ರೂಲ್ಸಿನಂತೆ ಕೊಡುತ್ತಿದ್ದಾರೆ ಈಗ ಸರಕಾರದ ನೀತಿ ಏನೆಂದರೆ, **Land to the Tiller** ಎನ್ನುವುದು ಶೇಕಡ 55ರಷ್ಟು ಜನ ವ್ಯವಸಾಯ ಮಾಡುವವರೇ ಆಗಿದ್ದರೂ ಅವರಿಗೆ ಭೂಮಿ ಸಿಗುತ್ತಿಲ್ಲ. ಈಗ ಫಾರೆಸ್ಟು ಲ್ಯಾಂಡುಗಳನ್ನು ಹಾಗೂ ರೆವಿನ್ಯೂ ಲ್ಯಾಂಡುಗಳನ್ನು ಪಟ್ಟಣಗಳಲ್ಲಿರುವವರು ದರಖಾಸ್ತಿನಮೇಲೆ ಭೂಮಿ ತೆಗೆದುಕೊಂಡು ಬೇರೆ ಬೇರೆ ಜನರ ಕೈಲಿ ಸಾಗುವಳಿ ಮಾಡಿಸುತ್ತಿದ್ದಾರೆ. ಇದರಿಂದ ದೇಶದ ಉತ್ಪತ್ತಿ ಹೆಚ್ಚಾಗುತ್ತದೆಯೆ ? **Tiller of the Soil** ಎಂದು ಹೇಳಿದರೂ ಭೂಮಿ ರೈತನಿಗೆ ಸಿಗುತ್ತಿಲ್ಲ. ಆದುದರಿಂದ ರೆವಿನ್ಯೂ ಅಧಿಕಾರಿಗಳು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ತಾಲ್ಲೂಕು ಲೆವಲ್‌ಗಳಲ್ಲಿ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಮಾಡಬೇಕು. ಇಲ್ಲದೇಇದ್ದರೆ ಸರಕಾರದ ಉದ್ದೇಶ ಸಫಲಗೊಳ್ಳುವುದಿಲ್ಲ ಎಂದು ಅವರ ಗಮನಕ್ಕೆ ತರಲಿಚ್ಛಿಸುತ್ತೇನೆ. **Sale of Revenue lands** ನಲ್ಲಿ ಮಧ್ಯವರ್ತಿ ಜನರು ಬಹಳ ಬೆಲೆ ಬಾಳುವ ಜಮೀನುಗಳನ್ನು ಬಹಳ ಕಡಿಮೆ ಬೆಲೆಗೆ ಪಡೆದಿದ್ದಾರೆ. ಇದರಿಂದ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ಈ ಜಮೀನನ್ನು ಯಾರು ಹೊಂದಿದ್ದರೋ ಅವರಿಗೆ ಶೇಕಡಾ 50ರಷ್ಟು ಬೆಲೆಯಲ್ಲಿ ಕೊಡಲು ತಕ್ಕ ಪ್ರಾವಿಷನ್ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ರೆವಿನ್ಯೂ ಒಳಗೆ ಉತ್ಪತ್ತಿ ಬಾಬಿನಲ್ಲಿ ವಾಟರು ಟ್ಯಾಕ್ಸು, ಕಂಟ್ರಿಬ್ಯೂಷನ್, ಬೆಟರ್‌ಮೆಂಟು ಲಿವಿ ಇತ್ಯಾದಿಗಳನ್ನು ಬಡ ಜನರ ಮೇಲೆ ಹೊರಿಸಲು ತರುತ್ತಿದ್ದಾರೆ, ಇದನ್ನು ಹೊರಲು ಬಡಜನರಿಗೆ ಆಗುವುದಿಲ್ಲ. ಆದುದರಿಂದ ಇದನ್ನು ಮಾಫೀ ಮಾಡಬೇಕೆಂದು ಸೂಚಿಸುತ್ತೇನೆ. ಇದನ್ನು ಬೇರೆ ಯಾವ ತರದಲ್ಲಾದರೂ ವಸೂಲು ಮಾಡಬಹುದು. ದೊಡ್ಡ ಕಟ್ಟೆಗಳನ್ನು ಕಟ್ಟಿ ಪ್ರಾಜೆಕ್ಟುಗಳು ಆಗುತ್ತಿರುವ ಪ್ರದೇಶದಲ್ಲಿ ಬಡ್ಡಿ ತೆರುತ್ತಿರುವ ಜನ ಅಲ್ಲಿ ಈಗ ಖುಷ್ಕಿ ಬೆಳೆಗೆ ಬದಲು ತರಿ ಬೆಳೆ ಮಾಡುತ್ತಿದ್ದಾರೆ. ಇಂತಹವರಮೇಲೆ ಕಂದಾಯ ಹೊರಿಸಿದರೆ ಅದು ಅಕ್ಷಮ್ಯ ಅಪರಾಧವಾಗುವುದಿಲ್ಲಾ. ಇವರಿಂದ ವಾಟರು ಟ್ಯಾಕ್ಸನ್ನೂ ವಸೂಲಿ ಮಾಡಬೇಡಿ. ವಾಟರ್ ಟ್ಯಾಕ್ಸ್ ಲೆವಿಯನ್ನು ಸರಿಯಾಗಿ ಸೈಂಟಿಫಿಕ್ ಸಿಸ್ಟಂ ಅನುಸರಿಸಿ ಕೋಟಿಗಟ್ಟಲೆ ಲಾಭ ಸಂಪಾದಿಸುತ್ತಿರುವ ಲಕ್ಷಾಂತರ ಜನ ಇದ್ದಾರೆ. ಅವರಿಂದ ವಸೂಲಿ ಮಾಡಲು ತೆರಿಗೆಗಳನ್ನು ಹಾಕಬಹುದು,

(ಶ್ರೀ ಎಚ್. ಆರ್. ಕೇಶವ ಮೂರ್ತಿ)

ಇದೇರೀತಿ ಬೆಟರ್‌ಮೆಂಟ್ ಹಾಗೂ ಕಾಂಟ್ರಿಬ್ಯೂಷನ್ ಲೆವಿ ಬಿಲ್ಲು ತಂದು ಪಾಸುಮಾಡಿದಿರಿ. ಇದರಿಂದ ಎಷ್ಟು ವಸೂಲಾಗಿದೆ ಎನ್ನುವುದೂ ನಮಗೆ ಕಾಣಿಸುತ್ತಿಲ್ಲ. ಈಗ ಟ್ಯಾಕ್ಸ್ ಇವೇಷನ್ ಜಾಸ್ತಿಯಾಗುತ್ತಿದೆ. ಇದಕ್ಕೆ ಅವಕಾಶವಾಗದಂತೆ ರೂಲ್ಸ್‌ಗಳನ್ನು ರಿಜಿಡ್ ಆಗಿ ಮಾಡಿ ಅಧಿಕಾರಿಗಳು ವಸೂಲಿ ಮಾಡಿದರೆ ಹೆಚ್ಚು ಹಣ ಸರಕಾರಕ್ಕೆ ಬರುತ್ತದೆ. ಈಗ ಸರಕಾರಕ್ಕೆ ಬರುವ ಕೋಟಿಗಟ್ಟಲೆ ಹಣ ಸರಿಯಾದ ರೂಲ್ಸ್‌ಗಳನ್ನು ಅನುಸರಿಸದೇ ಇರುವುದರಿಂದ ನಿಂತುಹೋಗಿದೆ. ಇದನ್ನು ಸರಿಪಡಿಸಬೇಕು. ಒಡವರ ಮೇಲೆ ತೆರಿಗೆ ಹೊರೆ ಹೇರುವುದನ್ನು ನಿಲ್ಲಿಸಿ ಗ್ರಾಮಾಂತರಗಳಲ್ಲಿ ಜನ ಬಹಳ ಕಷ್ಟಪಡುತ್ತಿದ್ದಾರೆ. ಸರಕಾರಕ್ಕೆ ಅವರಿಂದ ಲಕ್ಷಾಂತರ ರೂಪಾಯಿಗಳಷ್ಟು ಉತ್ಪತ್ತಿ ಬರುವಂತೆ ಸರಕಾರ ಸಹಾಯ ಮಾಡದೆ ಇರುವುದು ಯಾವ ನ್ಯಾಯ ? ಇದು ನಿಮ್ಮ ಸೋಷಿಯಲಿಸಂ ತತ್ವಕ್ಕೆ ತದ್ವಿರುದ್ಧವಲ್ಲವೇ ? ಇದನ್ನು ತಾವು ಆಲೋಚನೆ ಮಾಡಿ **Tax Evasion** ಆಗುತ್ತಿರುವುದನ್ನು ತಡೆಯಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

Expenditure Head ನಲ್ಲಿ **Herlditary Inams Abolition** ಆಕ್ಟ್ ಬಗ್ಗೆ ಸುಪ್ರೀಂ ಕೋರ್ಟಿಗೆ ರಿಟ್ ಹೋಗಿದ್ದರು ಎಂದು ಇದ್ದುದು ಈಗ ನಿವೃತ್ತಿಯಾಗಿದೆ. ಇಲ್ಲಿಂದ ಅನುವಂಶೀಕರ ಬಗ್ಗೆ ಏಕೆ ಇತ್ಯರ್ಥ ಮಾಡಬಾರದು. ಇವರಲ್ಲಿ ಕೆಲವರನ್ನು ಮನೆಗೆ ಕಳುಹಿಸುವುದಾದರೆ ಅವರಿಗೆ ಸೂಕ್ತವಾದ ಕಾಂಪೆನ್‌ಸೇಷನ್ ಕೊಡಬೇಕು. ಈ ವಿಲೇಜು ಅಕೌಂಟೆಂಟರುಗಳಾಗಿ ಸುಮಾರು 20—30 ವರ್ಷಗಳಿಂದಲೂ ಕೆಲಸಮಾಡಿಕೊಂಡು ಇರುವವರನ್ನೂ ಕೆಲಸದಿಂದ ತೆಗೆದುಹಾಕಿದರೆ ಅವರು ಸಂಸಾರಸ್ಥರು ಮಕ್ಕಳು ಮರಿಗಳನ್ನು ಕಾಪಾಡಿಕೊಂಡು ಜೀವನಮಾಡುತ್ತಿದ್ದವರು. ಇವರನ್ನು ಈಗ ಮನೆಗೆ ಕಳುಹಿಸಿದರೆ ಅವರಿಗೆ ಮುಂದೇನುಗತಿ ? ಇದರ ಬಗ್ಗೆ ವಿಚಾರ ಮಾಡಬೇಕು. ಗೋಲ್ಡ್‌ಸ್ಮಿತ್ತುಗಳನ್ನು ಮನೆಗೆ ಕಳುಹಿಸುವಾಗ ಅವರಿಗೆ ಎಲ್ಲ ಸೌಕರ್ಯಗಳನ್ನೂ ಮಾಡಿಸಿಕೊಟ್ಟಿರಿ. ಅದೇ ರೀತಿ ಅಬಾಲಿಷ್ ಆಗುವ ವಿಲೇಜು ಅಕೌಂಟೆಂಟರುಗಳಿಗೂ ಸೂಕ್ತವಾದ ಸಹಾಯಗಳನ್ನು ಕೊಡಬೇಕು. 20–30 ವರ್ಷಗಳಿಂದ ಕೆಲಸಮಾಡಿದಂತಹವರು ಇವರನ್ನು ಹಾಗೆ ಕಳುಹಿಸುವುದು ನ್ಯಾಯವಲ್ಲ. ಅವರಿಗೆ ಸೂಕ್ತವಾದ ಪರಿಹಾರ ಕೊಡುವುದು ಅಗತ್ಯ ಎಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ. ಅಲ್ಲದೆ ಇಲ್ಲಿ ಯಾರು ಯಾರನ್ನು ಮನೆಗೆ ಕಳುಹಿಸದೆಬೇಕೆಂದು ಇದ್ದಾರೋ ಅವರಿಗೆಲ್ಲ ಎಂದರೆ, ಪಟೇಲ್, ತೋಟಿ, ತಳವಾರರಿಗೆ ಅವರ ಅವಧಿಗೆ ತಕ್ಕಂತೆ, 5 ಎಕರೆ ಅಥವಾ ಹತ್ತು ಎಕರೆಗಳಷ್ಟು ಭೂಮಿಯನ್ನು ಅವರು ಜೀವನ ಮಾಡಲು ಕೊಡಬೇಕೆಂದು ತಮಗೆ ನಾನು ಇಲ್ಲಿ ಸಲಹೆ ಮಾಡುತ್ತೇನೆ.

ಖಂಡಿತವಾಗಿಯೂ ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು ಗಮನ ಕೊಟ್ಟು ಜಮೀನಿನ ರೂಪದಲ್ಲಾದರೂ ಪರಿಹಾರ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಸ್ಟ್ಯಾಂಪ್ಸ್ ಬಾಬಿನಲ್ಲಿ 339 ಲಕ್ಷ ರೂಪಾಯಿ ಆದಾಯ ಇದೆ. ಸ್ಟ್ಯಾಂಪ್ಸ್ ಮಾರುವುದಕ್ಕೆ ಇವತ್ತಿನ ದಿವಸ 8 ಲಕ್ಷ ರೂಪಾಯಿಗಳ ಕಮಿಷನ್ ಕೊಡುತ್ತಾ ಇದ್ದೀರಿ. ಸಾಮಾನ್ಯವಾಗಿ ಆರುಕಾಲು ಪರ್ಸೆಂಟ್ ಕಮಿಷನ್ ಕೊಡಬೇಕು. ಇದರಿಂದ ಏನಾಗಿದೆ ಎಂದರೆ, ಮನಸ್ಸಿಗೆ ಬಂದಹಾಗೆ ಸ್ಟ್ಯಾಂಪುಗಳನ್ನು ಮಾರುತ್ತಾರೆ. 59 ಲಕ್ಷ ರೂಪಾಯಿಗಳಷ್ಟು ರೀಫಂಡ್ ಆಗಿದೆ. ಇದನ್ನು ತಪ್ಪಿಸುವುದಕ್ಕೆ ಏಜನ್ಸಿ ಮುಖಾಂತರ ಮಾರುವುದನ್ನು ತಪ್ಪಿಸಿ ಪೋಸ್ಟ್ ಆಫೀಸಿನವರು ಮಾರುವ ಹಾಗೆ ಟ್ರೆಜರಿಯಲ್ಲಿ ಒಬ್ಬ ಕ್ಲಾರ್ಕನ್ನು ಇಟ್ಟು ಅವರ ಮುಖಾಂತರ ಮಾರಿಸಿ. ಇದರಿಂದ ಸರ್ಕಾರಕ್ಕೂ ಹೆಚ್ಚಿನ ಆದಾಯ ಬರುತ್ತದೆ ಎಂದು ಸಲಹೆ ಮಾಡುತ್ತೇನೆ.

ಜ್ಯುಡೀಷಿಯಲ್ ಸ್ಟ್ಯಾಂಪ್ಸ್. ಇದರಲ್ಲೂ ಕೂಡ ರೀಫಂಡ್ ಬಹಳ ಜಾಸ್ತಿಯಾಗಿದೆ. ಇಷ್ಟು ಏಕೆ ಆಗಬೇಕು ? ಇದಕ್ಕೆ ಹೆಚ್ಚು ಅವಕಾಶ ಕೊಡಕೂಡದು ಎಂದು ಸಲಹೆ ಮಾಡುತ್ತೇನೆ. ಸಾಮಾನ್ಯವಾಗಿ ಒಂದು ಸೇಲ್ ಡೀಡ್ ಮಾಡಬೇಕಾದರೆ ಒಂದು ಸಾವಿರ ಬೆಲೆ ಉಳ್ಳ ಆಸ್ತಿಗೆ 75 ರೂಪಾಯಿ ಸ್ಟ್ಯಾಂಪ್ ತೆಗೆದುಕೊಳ್ಳಬೇಕೆಂದು ನಿಬಂಧನೆ ಇದೆ. ಬೆಲೆಯನ್ನು ಕಡಿಮೆ ಹಾಕಿ ಕಡಿಮೆ ಸ್ಟ್ಯಾಂಪ್ ತೆಗೆದುಕೊಳ್ಳುತ್ತಾರೆ. ಈರೀತಿ ಸರಿಯಾದ ಸ್ಟ್ಯಾಂಪ್ ವ್ಯಾಲ್ಯು ಕೊಡುತ್ತಾ ಇಲ್ಲ. ರಿಜಿಸ್ಟ್ರೇಷನ್ ಫೀಜು ಕೊಡುತ್ತಾ ಇಲ್ಲ. ಇಂತಹ **Exploitation class** ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ ? ಯಾವುದೂ ಕಾಣುತ್ತಾ ಇಲ್ಲ. ಸರ್ಕಾರದ ಆದಾಯ ಕಡಿಮೆಯಾಗುತ್ತಾ ಇದೆ. ಇದಕ್ಕೆ ಸೂಕ್ತ ಗಮನ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಕೋರ್ಟ್ ಫೀ ಸ್ಟ್ಯಾಂಪ್ ರೀಫಂಡ್ ವಿಷಯದಲ್ಲಿ ಇನ್ನು ಒಂದೆರಡು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ಇವತ್ತು ಏನಾಗಿದೆ ತಿಳಿವಳಿಕೆ ಇಲ್ಲದ ಪಾರ್ಟಿಗಳು ಲಾಯರುಗಳ ಹತ್ತಿರ ಹೋದಾಗ ಅವರಿಂದ ಹಣ ವಸೂಲು ಮಾಡಿಕೊಂಡು ಇರುತ್ತಾರೆ. ರೀಫಂಡ್ ಕ್ಲೈಮ್ ಮಾಡುವಾಗ ಈ ಲಾಯರುಗಳು ಅದನು ತಾವೇ ಉಪಯೋಗಿಸಿಕೊಂಡುಬಿಡುತ್ತಾರೆ. ಅದು ಸರ್ಕಾರಕ್ಕೂ ಬರುವುದಿಲ್ಲ. ಪಾರ್ಟಿಗೂ ಬರುವುದಿಲ್ಲ. ಆದ್ದರಿಂದ ಈ ಹಣ ಮಧ್ಯವರ್ತಿ ಜನಗಳಿಗೆ ಹೋಗುವುದನ್ನು ತಪ್ಪಿಸುವುದಕ್ಕೆ ರೀಫಂಡ್ ಮಾಡುವುದಕ್ಕೇ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ.

Mr. DEPUTYS pEAKER.—Does the Hon'ble Member want, some restrictions to be imposed ?

Sri H. R. KESHAVAMURTHY.—There should be some restrictions so that the party may get the amount.

Mr. DEPUTY SPEAKER.—It is coming to the party now.

Sri H. R. KESHAVAMURTHY.—It is being manipulated by the intelligent class.

ರಿಜಿಸ್ಟ್ರೇಷನ್ ವಿಷಯದಲ್ಲಿ ಒಂದು ಮಾತು. ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ಬಹಳ ತೊಂದರೆಯಾಗಿದೆ. ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳುವುದು ಬಹಳ ಜಾಸ್ತಿಯಾಗಿದೆ. ಸೊಸೈಟಿಯವರು ಕೇಳುತ್ತಾರೆ, ಬ್ಯಾಂಕಿನವರು ಕೇಳುತ್ತಾರೆ, ಹೀಗಾಗಿ ಎನ್‌ಕಂಬರೆನ್ಸ್ ಸರ್ಟಿಫಿಕೇಟುಗಳನ್ನು ಕೊಡಲು ಕಾಪಿ ಮಾಡುವಾಗ ಆ ರಿಜಿಸ್ಟರನ್ನು ಹ್ಯಾಂಡಲ್ ಮಾಡುವುದು ಜಾಸ್ತಿಯಾಗಿ ಅದರ ಹಾಳೆಗಳೇ ಕಿತ್ತುಹೋಗಿವೆ. ಹರಿದುಹೋಗಿವೆ. ಆದ್ದರಿಂದ ಜನರಲ್ ರಿಜಿಸ್ಟರ್‌ಗೆ ಬದಲಾಗಿ ಪ್ರತಿಯೊಂದು ಹಳ್ಳಿಗೂ ಕೂಡ ಒಂದೊಂದು ರಿಜಿಸ್ಟರ್ ಇಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಅನಿಮಲ್ ಹಸ್ಬೆಂಡರಿ ವಿಷಯದಲ್ಲಿ ಒಂದು ಮಾತು. ಅಮೃತಮಹಲ್ ಡಿಪಾರ್ಟ್‌ಮೆಂಟು ಇದೆ. ಅವರು ಹೋರಿಗಳನ್ನು ಸಾಕುತ್ತಾರೆ. ಇದು ಅರಮನೆಗೆ ಸಂಬಂಧಪಟ್ಟಿತ್ತು. ಅರಮನೆಯೇ ಇಲ್ಲದೇ ಇರುವಾಗ ಇದು ಏಕೆ ಇರಬೇಕೆಂದು ಕೇಳುತ್ತೇನೆ. ಪೂರ್ವದಲ್ಲಿ ಈ ಅಮೃತಮಹಲ್ ಕಾವಲುಗಳನ್ನು ಮಾಡಿದ್ದರು. ರಷ್ಯಾದಲ್ಲಿ ಏನು ಮಾಡಿದ್ದಾರೆ ಎಂದರೆ :—

> "In tsarist Russia, for example, migratory grazing was typical of livestook production in semi-desert areas. Cattle was driven from pasturage to pasturage, no reserve fodder being stored and so stalls built. In the severe conditions prevailing in these areas this often resulted in a great loss of cattle. After the Revolution the migratory system was abandned. Animal farms were built on the huge grazing areas. The distant pasturing system was introduced, the cattle grazing in pastures at some distance from the farm, while adjacent pastures provide a stock of todder for the winter season. Sheds and other structures are built to shelter the cattle and store the fodder. The pastures are provided with watering places, sanitation facilities and veterinary services."

ಮಾನ್ಯ ಮಂತ್ರಿಗಳು ಈ ಅಮೃತ ಮಹಲ್ ಕಾವಲುಗಳನ್ನು ಸಂಪೂರ್ಣವಾಗಿ ನಿಷೇಧಮಾಡಿದರೆ ನಮ್ಮ ದೇಶದಲ್ಲಿ ಹೆಚ್ಚು ಲೈವ್ ಸ್ಟಾಕ್‌ಗೆ ಅವಕಾಶವಾಗುತ್ತದೆ ಒಳ್ಳೆಯ ಬ್ರೀಡ್ಸ್‌ನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಅಮೃತ ಮಹಲ್ ಕಾವಲು ಇರುವುದರಿಂದ ಅನೇಕರಿಗೆ ಜಮೀನು ಸಿಕ್ಕುವುದಕ್ಕೆ ತೊಂದರೆಯಾಗಿದೆ. ಬೇಕಾದಷ್ಟು ಅಂತ ಜನರು ಇದ್ದಾರೆ ಅವರಿಗೆ ಜಮೀನು ಕೊಟ್ಟರೆ ಅದರಲ್ಲಿ ಅವರು ವ್ಯವಸಾಯವನ್ನಾದರೂ ಮಾಡಬಹುದು ಆಹಾರವನ್ನು ಹೆಚ್ಚಾಗಿ ಬೆಳೆಯಬಹುದು ಎಂದು ಸಲಹೆ ಮಾಡುತ್ತೇನೆ.

ಅಮೃತ ಮಹಲ್ ಕಾವಲಿನಲ್ಲಿ ದನಗಳನ್ನು ಮಾತ್ರ ನೋಡುತ್ತಾ ಇದ್ದೇವೆ. ನಮ್ಮ ದೇಶದಲ್ಲಿ ಷೀಪ್ ಬ್ರೀಡಿಂಗ್‌ಗೆ ಹೆಚ್ಚು ಅವಕಾಶ ಕೊಡುತ್ತಾ ಇಲ್ಲ ರಷ್ಯಾದಲ್ಲಿ :—

> The mechanised sheep-breeding team on the Yesensaisk Sovkhoz in Kazakhstan consists of six workers, including two tractor-operators. The team tends 2,000 head of sheep. It cultivates 320 hectares of forage crops to feed the sheep in winter."

ಆದ್ದರಿಂದ ಕುರಿಗಳನ್ನು ಸಾಕುವುದಕ್ಕೆ ಹೆಚ್ಚು ಗಮನ ಕೊಡಬೇಕು ಮತ್ತು ಅವುಗಳಿಂದ ಹೆಚು ತುಪ್ಪಟ ಉಪಯೋಗ ಮಾಡಿಕೊಳ್ಳುವ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಸಲಹೆ ಮಾಡುತ್ತೇನೆ.

(H. R. KESHAVAMURTHY)

ಇನ್ನು ಪೌಲ್ಟ್ರಿ ವಿಚಾರವನ್ನು ನೋಡಿದರೆ ಮುಂದುವರೆದ ರಾಷ್ಟ್ರದಲ್ಲಿ ಬೇಕಾದಷ್ಟು ಮೊಟ್ಟೆ, ಕೋಳಿ ಮುಂತಾದುವುಗಳನ್ನು ಸಾಮಾನ್ಯವಾಗಿ ಉತ್ಪತ್ತಿಮಾಡುತ್ತಿದ್ದಾರೆ. ನಮ್ಮಲ್ಲೂ ಕೂಡ ಸಾಕಾದಷ್ಟು ಸಂಶೋಧನೆ ಮಾಡಿ ಒಳ್ಳೆಯ ಕೋಳಿ ತಳಿಯನ್ನು ಬೆಳೆಸಬೇಕು. ಹಾಗೆಯೇ ನಮ್ಮಲ್ಲಿ ಪಿಗ್ಗರಿ ವಿಚಾರಕ್ಕೆ ಹೆಚ್ಚು ಗಮನ ಕೊಡುತ್ತಿಲ್ಲ, ಯುದ್ಧದ ಸಮಯದಲ್ಲಿ ಒಳ್ಳೆಯ ಹಂದಿಗಳನ್ನು ನೋಡುತ್ತಿದ್ದೆವು, ನಾವು ಶಾಖಾಹಾರಿಗಳಾದರೂ ಕೂಡ ಅವನ್ನು ನೋಡಿದರೆ ನಮ್ಮ ಬಾಯಲ್ಲೂ ಕೂಡ ನೀರೂರುತ್ತಿತ್ತು. ಈಗಲೂ ಕೂಡ ಅಂತಹ ಒಳ್ಳೆಯ ಹಂದಿಗಳನ್ನು ಬೆಳೆಸಲು ಮಾನ್ಯ ಕೃಷ್ಣಪ್ಪನವರು ವ್ಯವಸ್ಥೆ ಮಾಡಬೇಕು.

ಕ್ಷಾಮ ಪರಿಹಾರದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. 1891ನೇ ಇಸವಿ ಫ್ಯಾಮಿನ್ ಕೋಡಿನ ಪ್ರಕಾರ ಈಗ ಪರಿಹಾರ ನೀಡುತ್ತಿದ್ದಾರೆ. ಈ ಸಂಬಂಧವಾದ ಕೆಲಸವನ್ನು ಲೋಕೋಪಯೋಗಿ ಇಲಾಖೆ ಮೂಲಕ ಸ್ವಲ್ಪ ಮತ್ತು ರೆವೆನ್ಯೂ ಇಲಾಖೆ ಮೂಲಕ ಸ್ವಲ್ಪ ಮಾಡುತ್ತಿದ್ದಾರೆ. ರೆವೆನ್ಯೂ ಇಲಾಖೆ ಏಜೆನ್ಸಿ ಮೂಲಕ ಕ್ಷಾಮ ಪರಿಹಾರದ ಕೆಲಸವನ್ನೇಕೆ ಮಾಡಬೇಕು ? ರೆವೆನ್ಯೂ ಇಲಾಖೆಯ ತಾಸಿಲ್ದಾರರು, ರೆವೆನ್ಯೂ ಇನ್‌ಸ್ಪೆಕ್ಟರು ಮುಂತಾದವರು ಅವರಿಗೆ ಟಿ. ಎ. ವಗೈರೆ ಏನೂ ಸಿಕ್ಕುವುದಿಲ್ಲವೆಂದು ಈ ಕೆಲಸ ಮಾಡುವು ದಿಲ್ಲ. ಆದುದರಿಂದ ಕೊಟ್ಟ ಹಣ ರೆವೆನ್ಯೂ ಇಲಾಖೆಯಲ್ಲಿ ಖರ್ಚಾಗುವುದಿಲ್ಲ. ಅಲ್ಲದೆ ಹೆಣ್ಣಾಳಿಗೆ ದಿನಕ್ಕೆ ಒಂದು ರೂಪಾಯಿ ಗಂಡಾಳಿಗೆ ಒಂದೂವರೆ ರೂಪಾಯಿ ಕೂಲಿ ಕೊಟ್ಟರೆ ಕೆಲಸಮಾಡಲು ಸಾಧ್ಯವಿಲ್ಲ. ಆದುದ ರಿಂದ ಸರಕಾರ ಕೊಡುವ ಈ ಬಾಬಿನ ಹಣವನ್ನು ಪೂರ್ಣವಾಗಿ ಲೋಕೋಪಯೋಗಿ ಇಲಾಖೆಗೇ ಕೊಟ್ಟು ಆ ಇಲಾಖೆ ಮೂಲಕವೇ ಕೆಲಸಮಾಡಿಸಬೇಕು. ಹೆಚ್ಚು ಅಭಾವವಿರುವ ಪ್ರದೇಶಗಳಿಗೆ ಹೆಚ್ಚಾಗಿ ಹಣ ಕೊಡದೆ ಮನಸ್ಸಿಗೆ ಬಂದಹಾಗೆ ಕೊಡುತ್ತಿದ್ದಾರೆ. ಯಾರ್ಡಿ ಕಮಿಷನ್ನಿನವರೂ ಕೂಡ ನಮ್ಮ ಜಿಲ್ಲೆ ನೋಡದೆ ಬಿಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಹೆಚು ಅಭಾವವಿರುವುದರಿಂದ ಅಲ್ಲಿಗೆ ಹೆಚ್ಚು ಕೊಡಬೇಕು. ಅಲ್ಲಿ ಜನರಿಗೆ ಹೊಟ್ಟೆಗಿಲ್ಲದೆ ಕೆಲವರು ಸಾಯುತ್ತಿದ್ದಾರೆ, ಹುಣಿಸೆ ಬೀಜ ಹುರಿದು ತಿನ್ನುತ್ತಿದ್ದಾರೆ. ಇದನ್ನು ತಪ್ಪಿಸಲು ನಮ್ಮ ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ತಾಲ್ಲೂಕಿಗೆ ಹೆಚ್ಚಿಗೆ ಹಣ ಒದಗಿಸಿ ಪರಿಹಾರ ಕಾಮಗಾರಿಗಳನ್ನು ನಡೆಸಬೇಕು.

ಜಮೀನುದಾರಿ ಮತ್ತು ಇನಾಂ ಪದ್ಧತಿಯನ್ನು ವಜಾಮಾಡುತ್ತಿದ್ದಾರೆ. 18 ವರ್ಷಗಳಿಂದ ಈ ಕೆಲಸ ವಾಗುತ್ತಿದೆ. ಇಷ್ಟು ದಿವಸ ಬೇಕೇ ಈ ಕೆಲಸವಾಗುವುದಕ್ಕೆ ? ಚೈನಾದಲ್ಲಿ ಭೂ ಸುಧಾರಣೆ ಜಾರಿಗೆ ಬಂದಾಗ ಮತ್ತು ಇನಾಮುಗಳನ್ನು ರದ್ದುಮಾಡುವಾಗ ಒಂದೇ ಸೀಜನ್‌ನಲ್ಲಿ ಆ ಕೆಲಸ ಮಾಡಿಬಿಟ್ಟರು, ಅದಕ್ಕೆ ಸರಿಯಾದ ಸಿಬ್ಬಂದಿ ಇಟ್ಟು ಅವರಿಗೆ ಶಿಕ್ಷಣ ಕೊಟ್ಟು 3 ತಿಂಗಳಲ್ಲಿ ಕೆಲಸಮಾಡಿದರು. ಇಲ್ಲಿ ಮಾಡಲು ಇನ್ನೂ ಎಷ್ಟು ವರ್ಷ ಬೇಕು ? ಜಾಗ್ರತೆ ಇದನ್ನು ಮುಗಿಸಬೇಕು.

ರೆವೆನ್ಯೂ ಇಲಾಖೆಯಲ್ಲಿ ಇನ್ನೂ ರೆಡ್‌ಟೇಪಿಸಂ ಬಹಳವಾಗಿದೆ. ಕೆಲವು ರಿಕಾರ್ಡುಗಳು ಹೋದರೆ ಗುಮಾಸ್ತೆಯ ಟೇಬಲ್ಲಿನಿಂದ ವಾಪಸು ಬರುವುದೇ ಇಲ್ಲ. ಉದಾಹರಣೆಗೆ ಅಕ್ವಿಜಿಷನ್, ದರಖಾಸ್ತು, ಪೋಡಿ ರಿಕಾರ್ಡು ಮುಂತಾದುವು ಎಷ್ಟೋ ಇವೆ. ಮಾನ್ಯ ರೆವೆನ್ಯೂ ಸಚಿವರು ಅಂಕಿಅಂಶ ತರಿಸಿ ಅವು ಎಷ್ಟು ದಿವಸಗಳಿಂದ ಪೆಂಡಿಂಗ್ ಇವೆ ಎಂಬುದನ್ನು ನೋಡಬಹುದು. ಎರಡು ಮೂರು ತಲೆಗಳಿಂದ ಫೈಸಲಾಗ ದಿರುವ ರಿಕಾರ್ಡುಗಳು ಕೂಡ ಎಷ್ಟೋ ಇವೆ. ಇದಕ್ಕೆ ಅವಕಾಶವಿಲ್ಲದಂತೆ ಒಂದು ಪರಿಮಿತಿ ಗೊತ್ತುಮಾಡಿ ಆದಷ್ಟು ಜಾಗ್ರತೆ ರಿಕಾರ್ಡು ಫೈಸಲಾಗುವಂತೆ ವ್ಯವಸ್ಥೆಮಾಡಬೇಕು. ರೆವೆನ್ಯೂ ಇಲಾಖೆಯಲ್ಲಿ ರೆಡ್‌ಟೇಪಿಜಂ ಹೆಚ್ಚಾಗಿದೆ, ತಿಳಿವಳಿಕೆ ಇಲ್ಲದವರು ಯಾವ ಕೆಲಸಕಾರ್ಯವನ್ನು ಮಾಡಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಮಧ್ಯ ವರ್ತಿ ಜನರ ಜೊತೆಯಲ್ಲಿ ಹೋದರೆ ಕೆಲಸವಾಗಬಹುದೇ ಹೊರತು ರೈತ ತಾನೇ ಹೋಗಿ ಕೆಲಸ ಮಾಡಿಸಿ ಕೊಳ್ಳಲು ಸಾಧ್ಯವಿಲ್ಲ. ಇದು ಮಂತ್ರಿಗಳಿಗೂ ಗೊತ್ತಿದೆ. ಆದುದರಿಂದ ಯಾವುದಾದರೂ ಉಪಾಯಮಾಡಿ ರೆಡ್‌ಟೇಪಿಜಂಗೆ ಅವಕಾಶವಿಲ್ಲದಂತೆ ಮಾಡಬೇಕು.

ಈಗ ತಕಾವಿ ಸಾಲ, ಜಮೀನು ಅಭಿವೃದ್ಧಿ ಸಾಲ ಕೊಡುತ್ತಾರೆ. ಆದರೆ ತಕಾವಿ ಸಾಲ ಬಡವರಿಗೆ ಸಿಕ್ಕುತ್ತಿಲ್ಲ, ಸಾಮಾನ್ಯ ರೈತನಿಗೆ, tiller of the soil ಗೆ ಸಿಕ್ಕುತ್ತಿಲ್ಲ. ಅಂಕಿಅಂಶ ನೋಡಿದರೆ ಬಡವರಿಗೆಷ್ಟು ಸಿಕ್ಕುತ್ತಿದೆ ಎಂಬುದು ಗೊತ್ತಾಗುತ್ತದೆ.

ಫ್ಲಡ್ ರಿಲೀಫ್‌ಗೆ ಬೇಕಾದಷ್ಟು ಸಾಲ ವಗೈರೆ ಸಹಾಯ ಕೇಂದ್ರ ಸರಕಾರದಿಂದ ಪಡೆದರೂ ನಮ್ಮ ದೇಶದಲ್ಲಿ ಅದು ಸರಿಯಾಗಿ ಹಂಚಿಕೆಯಾಗುತ್ತಿಲ್ಲ, ಗ್ರಾಂಟು ಕೊಟ್ಟರೂ ಅದು ಲ್ಯಾಪ್ಸ್ ಆಗುತ್ತಿದೆ. ಹಾಸನ ಡಿವಿಜನ್ನಿಗೆ ಹೋದ ವರ್ಷ ಕೊಟ್ಟ ಎರಡು ಸಾವಿರ ರೂಪಾಯಿಗಳಲ್ಲಿ ಒಂದು ಪೈಸಾ ಕೂಡ ಖರ್ಚಾಗದೆ ಲ್ಯಾಪ್ಸ್ ಆಗುತ್ತಿದೆ. ಇದೇ ರೀತಿ ಫ್ಲಡ್ ಪ್ರೊಟೆಕ್ಷನ್ ವಿಚಾರದಲ್ಲೂ ಆಗುತ್ತಿದೆ. ಇದರ ಕೆಲಸಮಾಡಲು ಜನರಿಗೆ ಸಾಲ ಕೊಡಬೇಕು. ಜಮೀನು ಕೊರೆದು ಹಾಳಾಗುತ್ತಾ ಇದೆ, ಅದನ್ನು ತಡೆಗಟ್ಟಲು ಕೇಂದ್ರ ಸರಕಾರ ದಿಂದ ಬಡ್ಡಿ ಇಲ್ಲದೆ ಅಥವಾ ಕಡಮೆ ಬಡ್ಡಿಯಲ್ಲಿ ಹಣ ಪಡೆದು ರೈತರಿಗೆ ಕೊಡಬೇಕು.

ಡಿಸ್ಟ್ರಿಕ್ಟ್ ಆಫೀಸು ನೌಕರರಿಗೆ ಕೆಲವು ಕಡೆ ತೊಂದರೆ ಇದೆ. ಹೊಸ ಮೈಸೂರು ಮತ್ತು ಹಳೇ ಮೈಸೂರು ಭಾಗಗಳಲ್ಲಿ ಒಬ್ಬ ನೌಕರನು ಎಷ್ಟು ಪೇಪರುಗಳನ್ನು ಡಿಸ್‌ಪೋಸ್ ಮಾಡುತ್ತಾರೆಂಬುದನ್ನು ನೋಡಬೇಕು. ಹಳೆಯ ಮೈಸೂರಿನ ನೌಕರರಿಗೆ ಕೆಲಸ ಜಾಸ್ತಿ, ಹೊಸ ಮೈಸೂರಿನಲ್ಲಿ ಕೆಲಸ ಕಡಮೆ. ಹೊಸ ಮೈಸೂರು ಪ್ರದೇಶದಲ್ಲಿ ಹೆಚ್ಚು ನೌಕರರಿದ್ದಾರೆ. ಇದನ್ನು ಗಮನಿಸಿ ಎಲ್ಲರಿಗೂ ಕೆಲಸ ಸಮವಾಗಿರುವಂತೆ ನೌಕರರನ್ನು ನೇಮಿಸಬೇಕು.

ಸಬ್ ಡಿವಿಜನ್ ಆಫೀಸು ಬರೀ ಟಪ್ಪಾಲು ಆಫೀಸಿನಂತಿದೆ, ಇದು ಅನ್ಯಾಯ, ಸಾಧ್ಯವಾದ ಮಟ್ಟಿಗೆ ಇದನ್ನು ವಜಾಮಾಡುವುದು ಒಳ್ಳೆಯದು. ಇದರಿಂದೇನೂ ಪ್ರಯೋಜನವಾಗುವುದಿಲ್ಲ. ಡಿಸ್ಟ್ರಿಕ್ಟ್ ಆಫೀಸು ಮತ್ತು ತಾಲ್ಲೂಕು ಆಫೀಸು ಇವೆರಡಿದ್ದರೆ ಸಾಕು. ಒಂದುವೇಳೆ ಸಬ್ ಡಿವಿಜನ್ ಆಫೀಸನ್ನು ಮುಂದುವರೆಸುವುದಾದರೆ ಅದು ಚುರುಕಿನಿಂದ ಕೆಲಸಮಾಡುವುದಕ್ಕೆ ಏರ್ಪಾಡುಮಾಡಬೇಕು.

ಹಿಂದೆ ಆಕಾರಬಂದು ದುರಸ್ತುಮಾಡಿ ನಕಾಸೆ ದುರಸ್ತುಮಾಡಿ ಜಮೀನಿಗೆ ಕಂದಾಯ ಹಾಕಿ ಪಟಿ ಕೊಡುತ್ತಿದ್ದರು. ಪೋಡಿಮಾಡಿ ಲೆಕ್ಕ ತೋರಿಸುತ್ತಿದ್ದರು. ಈಗ ಒಂದು ತಾಲ್ಲೂಕು ಆಫೀಸಿನ ಇಂಡೆಕ್ಸ್ ರಿಜಿಸ್ಟರು ನೋಡಬಹುದು, ಸಬ್ ರಿಜಿಸ್ಟ್ರಾರರ ಆಫೀಸಿನಲ್ಲಿ ಪೋಡಿ ಎಷ್ಟಾಗಿದೆ ಎಂದು ನೋಡಬಹುದು. ಎಷ್ಟು ಮ್ಯುಟೇಷನ್ ಆಗಬೇಕಾಗಿತ್ತೋ ಅಷ್ಟು ಆಗಿದೆಯೇ ಎಂದು ನೋಡಬೇಕು. ಜಮೀನು ಕೊಂಡು ಹತ್ತಾರು ವರ್ಷಗಳಾದರೂ ದಾಖಲೆ ಇರುವುದಿಲ್ಲ; ಜಮೀನು ಪೋಡು ಮಾಡಿರುವುದಿಲ್ಲ, ಮ್ಯಾಪಿನಲ್ಲಿ ಗುರುತುಮಾಡಿರುವುದಿಲ್ಲ. ಪೋಡಾದ ಜಮೀನನ್ನು ನಕಾಸೆಯಲ್ಲಿ ಗುರುತುಮಾಡಬೇಕೆಂದು ಹೇಳಿದರೂ ಮಾಡಿರುವುದಿಲ್ಲ. ಹೀಗಾಗಿ ರೈತರಿಗೆ ಎಷ್ಟು ಜಮೀನಿದೆ, ಕಂದಾಯ ಎಷ್ಟು ಕೊಡಬೇಕು ಎಂದು ಗೊತ್ತಾಗುವಂತೆ ಪಟ್ಟಿ ಕೂಡ ಕೊಡುತ್ತಿಲ್ಲ. ಇದರಿಂದ ಬಹಳ ಕಾಂಪ್ಲಿಕೇಷನ್ ಆಗಿದೆ. ಸಾಲ ತೆಗೆದುಕೊಳ್ಳಬೇಕಾದರೆ ಎಷ್ಟೋ ಜನರನ್ನು ಆಶ್ರಯಮಾಡಬೇಕಾಗಿದೆ. ಇದು ಸರಿಯಲ್ಲ. ಇದನ್ನು ತಪ್ಪಿಸುವುದಕ್ಕೆ ಆದಷ್ಟು ಜಾಗ್ರತೆ ಮ್ಯುಟೇಷನ್ ಸ್ಲಿಪ್ಸ್ ವಿಲೇಮಾಡಬೇಕು. ಪುಸ್ತಕಗಳಲ್ಲಿ ಪೋಡಿ ಗುರುತುಮಾಡಬೇಕು. ರೈತರು ಕೇಳಿದಾಗ ಕಾಪಿ ಕೊಡಬೇಕು. ಇದಕ್ಕೆ ಅವಕಾಶಮಾಡಿದರೆ ಎಷ್ಟು ಜಮೀನು ಇದೆ, ಕಂದಾಯ ಎಷ್ಟು ಎಂಬ ಅಭಿಪ್ರಾಯ ಬರುತ್ತದೆ. ಒಟ್ಟಿನಲ್ಲಿ ಕಂದಾಯದ ಹೊರೆ ಬಡ ರೈತರಿಗೆ ಜಾಸ್ತಿಯಾಗಿದೆ, ಅದನ್ನು ತಪ್ಪಿಸಿ ಅನುಕೂಲಸ್ಥರಿಗೆ ಹಾಕಬೇಕು, ಬಡವರನ್ನು ಎಕ್ಸ್‌ಪ್ಲಾಯಿಟ್ ಮಾಡಿ ಹಣ ಸಂಪಾದನೆ ಮಾಡುವವರಿಗೆ ಜಾಸ್ತಿ ಹಾಕಬಹುದು, ಬಡವರಿಗೆ ಹೆಚ್ಚು ಹಾಕಬಾರದು, ಕಂದಾಯವನ್ನು ಸಂಪೂರ್ಣವಾಗಿ ಮಾಫಿಮಾಡಬೇಕು, ಸರ್‌ಛಾರ್ಜ್ ಹಾಕಬಾರದು ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

11-00 A.M.

Mr. DEPUTY SPEAKER.—How much time the Hon'ble Minister for Revenue would require for reply?

Sri M. V. KRISHNAPPA.—I require about half-an-hour.

Mr. DEPUTY SPEAKER.—We can sit till 12 NOON and meet again at 3 P.M.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಕಂದಾಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕಂಥ ಡಿಮ್ಯಾಂಡ್ ನಂಬರ್ 2, 7, 8, 22, 33, 42 ಈ ಡಿಮಾಂಡುಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ದಿನ ನಮ್ಮ ರಾಜ್ಯದಲ್ಲಿ ರೆವೆನ್ಯೂ ಇಲಾಖೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಾ ಇದೆ ಎಂಬುದಕ್ಕೆ ನನ್ನ ಅಭಿಪ್ರಾಯ ವ್ಯಕ್ತಪಡಿಸಬೇಕು ಎಂದು ಅಂದುಕೊಂಡಿದ್ದೇನೆ. ಈ ರೆವೆನ್ಯೂ ಇಲಾಖೆ ಬಹು ಪುರಾತನವಾದುದು. ಬಹುಶಃ ನಮ್ಮ ದೇಶದಲ್ಲಿ ಸರಕಾರ ರಚನೆಯಾದ ದಿವಸ ಮೊಟ್ಟ ಮೊದಲನೇ ಇಲಾಖೆ ರಚನೆಯಾದುದು ಈ ರೆವೆನ್ಯೂ ಇಲಾಖೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಅಷ್ಟು ಪುರಾತನವಾದುದು ಆಗಿದೆ. ಈ ಒಂದು ಇಲಾಖೆಯು ರಾಜ್ಯದ ಎಲ್ಲ ಇಲಾಖೆಗಳ ಕೆಲಸಕಾರ್ಯ ನಡೆಸತಕ್ಕಂಥ ಜವಾಬ್ದಾರಿ ಪಡೆದದ್ದು ಎಂಬುದನ್ನು ನಾನು ಚರಿತ್ರೆಯಲ್ಲಿ ಓದಿದ್ದೇನೆ. ಆದರೆ ಇವತ್ತಿನ ದಿವಸ ದೇಶದಲ್ಲಿ ಪರಿಸ್ಥಿತಿ ಬದಲಾವಣೆಯಾಗಿದೆ. ಈ ಇಲಾಖೆಯ ರೂಪ ರೇಷೆ ಬದಲಾವಣೆ ಮಾಡಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅನೂಚಾನವಾಗಿ ಬಂದಿರತಕ್ಕ ಆನುವಂಶಿಕ ಹಕ್ಕು ತೆಗೆಯಬೇಕು ಎಂಬ ಕಾನೂನು ತಂದಿದ್ದರೂ ಕೂಡ ಅದಕ್ಕೆ ಕೋರ್ಟಿನಿಂದ ತಡೆ ಬಂದಿದೆ. ಇಂಥ ಹಕ್ಕನ್ನು ತೆಗೆಯತಕ್ಕಂಥಾದ್ದು ಸರಿ ಎಂಬ ತೀರ್ಮಾನ ಈಗ ಕೋರ್ಟಿನಲ್ಲಿ ಕೊಟ್ಟಿದ್ದಾರೆ. ಇದಕ್ಕಾಗಿ ಸರಕಾರ ಒಂದು ಕಾರ್ಯಕ್ರಮ ನಿರ್ದಿಷ್ಟ

†Indicates that the speeches or remarks have not been revised by the member concerned.

(ಶ್ರೀ ಎಂ. ಸಿ. ಬಸಪ್ಪ)

ವಾಗಿ ಹಾಕಿಕೊಳ್ಳಬೇಕಾದುದು ಅತ್ಯಗತ್ಯ ಎಂದು ನಾನು ಅಂದುಕೊಂಡಿದ್ದೇನೆ. ಇಂದು ಒಂದು ಗ್ರಾಮದ ಆಡಳಿತ ನೋಡಿದರೆ ಪುರಾತನ ಇಲಾಖೆಯಲ್ಲಿ ಪುರಾತನ ಮಾರ್ಗವನ್ನೇ ಇವತ್ತಿನ ದಿವಸ ಕೂಡ ಅನುಸರಿಸುತ್ತಿದ್ದಾರೆ.

SRI V. M. DEO (Gubbi).—Sir, there is no quorum.

(The bell was rung and there was quorum).

ಶ್ರೀ ಎಂ. ಸಿ. ಬಸಪ್ಪ.—ಸ್ವಾಮಿ, ಈ ದಿನ ಈ ಇಲಾಖೆಯಲ್ಲಿ ಮಹತ್ತರವಾದ ಬದಲಾವಣೆಯಾಗಬೇಕಾದುದು ಅತ್ಯಗತ್ಯವಾಗಿದೆ. ಗ್ರಾಮ ಮಟ್ಟದಲ್ಲಿ ಶಾನುಭೋಗ ಪಟೇಲ್ ಏನು ಕೆಲಸ ಮಾಡುತ್ತಾರೆ ಎಂಬುದನ್ನು ಈಗಾಗಲೇ ಶ್ರೀಮಾನ್ ಕೇಶವಮೂರ್ತಿಯವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಗ್ರಾಮಗಳಲ್ಲಿ ಅಗತ್ಯವಾಗಿ ಇಡಬೇಕಾದಂಥ ರಿಕಾರ್ಡು ಬಗ್ಗೆ ಹೆಚ್ಚಿನ ಜಾಗರೂಕತೆ ವಹಿಸಿಲ್ಲ. ಅವರನ್ನು ನಿವೃತ್ತಿಗೊಳಿಸಲಾಗುತ್ತದೆ ಮತ್ತು ತರಬೇತಿ ಪಡೆದಂಥ ಅಧಿಕಾರಿಗಳು ಜವಾಬ್ದಾರಿ ಹೊರುತ್ತಾರೆ ಮುಂದೆ ಸರಿ ಹೋಗುತ್ತದೆ ಎಂದು ಸರಕಾರ ಸಮಾಧಾನ ಕೊಡುತ್ತದೆ. ಇದು ಸಮಾಧಾನವಾಗಿಯೇ ಉಳಿಯಬಾರದು, ಇದು ಕಾರ್ಯರೂಪದಲ್ಲಿ ಬರಬೇಕು ಎಂದು ಹೇಳುತ್ತೇನೆ. ಗ್ರಾಮ ರಿಕಾರ್ಡನಲ್ಲಿ ಮುಖ್ಯ ಅಂಶ ಅಂದರೆ, ಜಮೀನಿನ ಬಗ್ಗೆ ಹದ್ದುಬಸ್ತು ಬೌಂಡರಿ ರಿಕಾರ್ಡು ಸರಿಯಾಗಿ ಇಡತಕ್ಕ ಜವಾಬ್ದಾರಿ ಇದೆ. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇನ್ನು ರೆವೆನ್ಯೂ ಇನ್‌ಸ್ಪೆಕ್ಟರ್ ಮತ್ತು ತಹಶೀಲದಾರ ಇವರಲ್ಲಿ ಕೂಡ ನಿರುತ್ಸಾಹ ಕಂಡುಬರುತ್ತದೆ. ಅವರು ಜವಾಬ್ದಾರಿಯಿಂದ ತಮ್ಮ ಕೆಲಸ ನಿರ್ವಹಿಸುತ್ತಿಲ್ಲ. ಸರಿಯಾದ ರೀತಿಯಲ್ಲಿ ಆಡಳಿತ ನಡೆಸಿದಂತಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತೇನೆ. ಯಾವುದಾದರೂ ಒಬ್ಬ ರೈತನಿಗೆ ಏನಾದರೂ ಕೆಲಸವಾಗಬೇಕಾದರೆ ಅವನು ರೆವೆನ್ಯೂ ಇನ್‌ಸ್ಪೆಕ್ಟರನನ್ನು ಹುಡುಕುವುದೇ ಒಂದು ಸಮಸ್ಯೆಯಾಗಿದೆ. ರೆವೆನ್ಯೂ ಇನ್‌ಸ್ಪೆಕ್ಟರನಿಗೆ ಆಫೀಸು ಇಲ್ಲ. ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಸಹ ಇರುವುದಿಲ್ಲ ; ಎಲ್ಲಿಯೋ ಪಟ್ಟಣದಲ್ಲಿ ಇರುತ್ತಾನೆ. ಅವನ ಆಫೀಸು ಅಂದರೆ ಅವನ ಸೈಕಲ್ಲಿಗೆ ಇರತಕ್ಕ ಕೈಚೀಲ. ಅದರಲ್ಲಿ ಎಲ್ಲ ಕಾಗದಗಳನ್ನೂ ಇಟ್ಟಿರುತ್ತಾನೆ. ರೈತನಿಗೆ ಏನಾದರೂ ರಿಕಾರ್ಡು ಬೇಕಾದರೆ ದಾರಿಯಲ್ಲೇ ನಿಂತುಕೊಂಡು ಬರೆದುಕೊಟ್ಟು ಬಿಡುತ್ತಾನೆ. ಇದು ಸರಿಯಲ್ಲ. ರೆವೆನ್ಯೂ ಇನ್‌ಸ್ಪೆಕ್ಟರಿಗೆ ಒಂದು ಆಫೀಸು ಕೊಡತಕ್ಕಂಥ ಏರ್ಪಾಡು ಮಾಡಬೇಕು. ರೈತನಿಗೆ ಬೇಕಾಗುವ ರಿಕಾರ್ಡು ದೊರೆಯತಕ್ಕ ವ್ಯವಸ್ಥೆ ಮಾಡಬೇಕು. ರೆವೆನ್ಯೂ ಆಡ್ಮಿನಿಸ್ಟ್ರೇಷನ್ ಇವತ್ತಿನ ದಿವಸ ಚೆನ್ನಾಗಿಲ್ಲ. ಇದಕ್ಕಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ತಹಶೀಲದಾರರಿಗೆ ಹಿಂದಕ್ಕೆ ದೊಡ್ಡ ಪ್ರಮಾಣದಲ್ಲಿ ಮರ್ಯಾದೆ ಇತ್ತು. ಇಂದು ಅದು ಹೋಗಿದೆ ಎಂಬ ಭಾವನೆ ತಪ್ಪು. ಅವರ ಕರ್ತವ್ಯದಲ್ಲಿ ಮಾತ್ರ ಬದಲಾವಣೆಯಾಗಿದೆ. ಅಭಿವೃದ್ಧಿ ಕಾರ್ಯ ಮಾಡುವುದಕ್ಕೋಸ್ಕರ ಒಂದು ಇಲಾಖೆಯಾಗಿದೆ ಅಂದಮಾತ್ರಕ್ಕೇ ಹಾಗೆ ಹೇಳುವುದು ಸರಿಯಲ್ಲ. ಹಿಂದೆ ಯಾವ ರೀತಿ ಹಳ್ಳಿಗಳಿಗೆ ಹೋಗುತ್ತಿದ್ದರೋ ಸಂಪರ್ಕ ಇಟ್ಟುಕೊಂಡಿದ್ದರೋ ಆ ರೀತಿ ಇಟ್ಟುಕೊಳ್ಳಲಿ. ತಪ್ಪು ಭಾವನೆ ಅಧಿಕಾರಿಗಳಲ್ಲಿ ಇರಬಾರದು ಹಿಂದೆ ಇದ್ದ ವೈಭವ ಇಂದೂ ಕೂಡ ಇಟ್ಟುಕೊಳ್ಳಲಿ. ಆದರೆ ಕರ್ತವ್ಯ ನಿರ್ವಹಿಸುವುದರಕಡೆಗೆ ಗಮನಕೊಡುವ ಮನೋಭಾವನೆ ಇರಬೇಕು. ಯಾವ ಜವಾಬ್ದಾರಿ ಕೆಲಸ ಕೊಟ್ಟರೂ ಹೃತ್ಪೂರ್ವಕವಾಗಿ ಸಂತೋಷದಿಂದ ಜವಾಬ್ದಾರಿ ನಿರ್ವಹಿಸತಕ್ಕ ಮನೋಭಾವ ತಾಳತಕ್ಕಂಥಾದ್ದು ಆವಶ್ಯಕ ಎಂದು ಹೇಳಬಯಸುತ್ತೇನೆ.

ರೈತನಿಗೆ ಮುಖ್ಯವಾಗಿ ಬೇಕಾದುದು ರಿಕಾರ್ಡ್ ಆಫ್ ರೈಟ್ಸ್. ಇದರ ಬಗ್ಗೆ ಈ ಸಭೆಯಲ್ಲಿ ಬೇಕಾದಷ್ಟು ಚರ್ಚೆಯಾಗಿದೆ. ಒಂದೊಂದು ತಾಲ್ಲೂಕಿನಲ್ಲಿ ಸಾವಿರಗಟ್ಟಲೆ ಪೆಂಡಿಂಗ್ ಕೇಸಸ್ ಇವೆ. ಈ ಇಲಾಖೆಯಲ್ಲಿ ಅಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡುತ್ತಿಲ್ಲ. ರಿಕಾರ್ಡ್ ಆಫ್ ರೈಟ್ಸ್ ಆರ್. ಆರ್. 5 ಆವಶ್ಯಕವಾಗಿ ಬೇಕಾಗಿದೆ ಎಂದು ಒಬ್ಬ ರೈತ ಅರ್ಜಿ ಕೊಟ್ಟರೆ ಖಂಡಿತವಾಗಿ ನಾಲ್ಕೈದು ತಲೆಮಾರು ಹಿಂದಿನ ಅಂದರೆ, ಅವನ ತಾತನ ಮುತ್ತಾತನ ಹೆಸರಿನಲ್ಲಿ ಆರ್. ಆರ್. 5 ಮತ್ತು ಆರ್. ಆರ್. 6 ಸಿಕ್ಕುತ್ತದೆ. ಅವನ ಹೆಸರಿನಲ್ಲಿ ಖಾತೆ ಇರುವುದಿಲ್ಲ. ಇದಕ್ಕೆ ಬಹುಶಃ ಅವರು ಹೇಳುವುದು ನಮ್ಮ ಜವಾಬ್ದಾರಿ ಏನೂ ಇಲ್ಲ, ಎಲ್ಲಾ ಅವನದ್ದೇ ಎಂದು. ರೆಕಾರ್ಡ್ ಆಫ್ ರೈಟ್ಸ್ ಎಂದು ಏನು ಇದೆ ಅದನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವುದು ಸರ್ಕಾರದವರಮೇಲೆ ಇದೆ. ಸಂಬಂಧಪಟ್ಟವರು ತಮ್ಮ ಜವಾಬ್ದಾರಿಯೆಂದು ತಿಳಿದುಕೊಂಡು ಮಾಡಬೇಕೇ ಹೊರತು, ಅವಿದ್ಯಾವಂತನಾದ, ತಿಳಿವಳಿಕೆ ಇಲ್ಲದ ರೈತನಮೇಲೆ ಜವಾಬ್ದಾರಿ ಹಾಕುವುದು ಸಾಧುವಲ್ಲವೆಂದು ತಿಳಿಸಬಯಸುತ್ತೇನೆ.

ನಮ್ಮ ಸಬ್‌ಡಿವಿಷನ್ ಆಫೀಸರ್‌ಗಳ ವಿಚಾರದಲ್ಲಿ ಮಾತನಾಡಬೇಕಾದರೆ, ಇವರಲ್ಲಿ ಕೆಲವು ಮಹನೀಯರುಗಳು ಟಪಾಲ್ ಆಫೀಸ್ ಇದ್ದ ಹಾಗೆ ಇದ್ದಾರೆ. ಇವರುಗಳಿಗೆ ಹೆಚ್ಚಿನ ಜವಾಬ್ದಾರಿ ಇಲ್ಲ. ಇವರ ಕೆಲಸವೆಂದರೆ ಜಿಲ್ಲಾ ಕಚೇರಿಗೂ ತಾಲ್ಲೋಕ್ ಕಚೇರಿಗೂ ಕಾಗದಗಳನ್ನು ಫರ್‌ವಾರ್ಡ್ ಮತ್ತು ಸಬ್‌ಮಿಟ್

ಮಾಡುವ ಒಂದೇ ಕೆಲಸವೆಂದು ತಿಳಿದುಕೊಂಡಿದ್ದಾರೆ. ಇವರುಗಳು ಸಹ ತಮ್ಮ ಜವಾಬ್ದಾರಿಯನ್ನು ಹೆಚ್ಚಿನ ರೀತಿಯಲ್ಲಿ ನಿರ್ವಹಿಸುತ್ತಿಲ್ಲ. ನಮ್ಮ ಲ್ಯಾಂಡ್ ಅಕ್ವಿಷಿಷನ್ ಬಗ್ಗೆ ಹೇಳಬೇಕಾದರೆ, ನಮ್ಮ ಸೆಂಟ್ರಲ್ ಆಕ್ಟ್ ಏನಿದೆ, ಅದರ ಪ್ರಕಾರ ಲ್ಯಾಂಡ್ ಅಕ್ವಿಷಿಷನ್ ಕೆಲಸ ಮಾಡತಕ್ಕಂಥವರು ನಮ್ಮ ಅಸಿಸ್ಟೆಂಟ್ ಕಮೀಷನರ್‌ಗಳು. ಇವರು ಲ್ಯಾಂಡ್ ಅಕ್ವಿಷಿಷನ್ ಆಕ್ಟ್ ಪ್ರಕಾರ ಕೇಸುಗಳನ್ನು ಎಷ್ಟು ಬೇಗ ಡಿಸ್‌ಪೋಸ್ ಮಾಡಿದ್ದಾರೆ ಎಂದು ಕೇಳುವ ಪಕ್ಷದಲ್ಲಿ 8 ವರ್ಷ, 10 ವರ್ಷ, 15 ವರ್ಷಗಳಿಂದ ನಡೆಯುತ್ತಿರುವ ರೆಕಾರ್ಡ್ಸ್‌ಗಳು ಒಂದಲ್ಲ, ನೂರು ಅಲ್ಲ, ಸಾವಿರಗಟ್ಟಲೆ ಇವೆ. ಅದಕ್ಕೆ ಕಾರಣವನ್ನು ಸಂಬಂಧಪಟ್ಟವರು ಏನು ಹೇಳುತ್ತಾರೆಂದರೆ, ಲ್ಯಾಂಡ್ ಅಕ್ವಿಷಿಷನ್ ಆಕ್ಟ್ ಏನಿದೆ, ಇದು ಸೆಂಟ್ರಲ್ ಆಕ್ಟ್, ಆದ್ದರಿಂದ ಬಹಳ ನಿಧಾನವಾಗಿ ಕ್ರಮಗಳನ್ನು ಕೈಗೊಳ ಬೇಕಾಗಿದೆ ಎಂದು. ಇದೇ ಕಾರಣದಿಂದ ಒಂದು ಹೆಚ್ಚಿನ ಕಾಲವನ್ನು ತೆಗೆದುಕೊಳ್ಳುತ್ತಿದ್ದಾರೆ. ಅದು ಸರಿ ಯಾದ ಭಾವನೆಯಲ್ಲ ಎಂದು ನನ್ನ ಅಭಿಪ್ರಾಯವಾಗಿದೆ. ಬಹುಶಃ ನಾವು ಅನೇಕ ನಡೆವಳಿಕೆಗಳನ್ನು ನಮ್ಮ ಸಂಸ್ಥಾನದಲ್ಲಿ ಸೆಂಟ್ರಲ್ ಆಕ್ಟ್‌ಗಳ ಪ್ರಕಾರವೇ ನಡೆಸುತ್ತೇವೆ.

ಜುಡಿಷಿಯಲ್ ಇಲಾಖೆಯನ್ನು ತೆಗೆದುಕೊಂಡರೆ, ಸಿ. ಆರ್. ಪಿ. ಸಿ. ಮತ್ತು ಸಿ. ಪಿ. ಸಿ. ಇವುಗಳ ಸೆಂಟ್ರಲ್ ಆಕ್ಟ್‌ಗಳು. ಒಂದು ಕೋರ್ಟಿನ ಪ್ರೊಸಿಡಿಂಗ್ಸ್ ತೆಗೆದುಕೊಳ್ಳುವ ಪಕ್ಷದಲ್ಲಿ ನಿರ್ಧಿಷ್ಟವಾದ ಒಂದು ನಿಯಮವನ್ನು ಅವರು ಹಾಕಿಕೊಂಡಿರುತ್ತಾರೆ. ಒಂದು ಕೇಸ್ ವಿಚಾರಣೆಯಾಗಿ ಅದರ ಬಗ್ಗೆ ತೀರ್ಪನ್ನು ಒಂದು ವರ್ಷದಲ್ಲಿ ಕೊಡಬೇಕು ಎಂದು ಒಂದು ನಿಯಮವಿರುತ್ತದೆ. ಅದಕ್ಕಿಂತ ಹೆಚ್ಚು ಕಾಲಾವಕಾಶವನು ತೆಗೆದುಕೊಂಡರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗೆ ಏತಕ್ಕೆ ಹೆಚ್ಚಿನ ಕಾಲಾವಧಿ ಬೇಕಾಗುತ್ತದೆ ಎಂದು ಎಕ್ಸ್‌ಪ ನೇಷನ್ ಕೊಡಬೇಕಾಗುತ್ತದೆ. ಅವರು ಅವರ ಇಲಾಖೆಯಲ್ಲಿ ಒಂದು ಕಾಲದ ಪರಿಮಿತಿಯನ್ನು ಇಟ್ಟು ಕೊಂಡಿರುತ್ತಾರೆ. ನಮ್ಮ ಅಧಿಕಾರಿಗಳು ಸೆಂಟ್ರಲ್ ಆಕ್ಟ್‌ನ ಒಂದು ಅಡಚಣೆಯಿರುವುದರಿಂದ, ಕೇಸ್‌ಗಳನ್ನು ಬೇಗ ಡಿಸ್‌ಪೋಸ್ ಮಾಡುವುದಕ್ಕಾಗುವುದಿಲ್ಲವೆಂಬ ಒಂದು ವಾದವನ್ನು ಹೇಳಿ ಒಂದೊಂದು ಅಕ್ವಿಷಿಷನ್ ಆಕ್ಟ್‌ಗಳ ಬಗ್ಗೆ 10—15—20 ವರ್ಷಗಳ ಕಾಲದವರೆಗೆ ತಳ್ಳುತ್ತಾ ಇರುತ್ತಾರೆ. ಈ ರೀತಿಯಾದರೆ ಎಷ್ಟು ಜನರಿಗೆ, ಎಷ್ಟು ಪಾರ್ಟಿಗಳಿಗೆ ಅನ್ಯಾಯವಾಗುತ್ತದೆ, ಮತ್ತು ದೇಶಕ್ಕೆ ದ್ರೋಹ ಮಾಡಿದಹಾಗೆ ಆಗುತ್ತದೆ. ನಾವು ನಮ್ಮ ಕರ್ತವ್ಯವನ್ನು, ಜನರ ಮನವಿಯನ್ನು ಪರಿಪಾಲನೆ ಮಾಡಬೇಕು ಎಂಬ ಬಗ್ಗೆ ಅಧಿಕಾರಿಗಳಲ್ಲಿ ಕಂಡುಬರುವುದಿಲ್ಲ. ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಹಿಂದೆ ಒಂದು ಸಾರಿ ಇದೇ ಸಭೆಯಲ್ಲಿ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ಕ್ಯಾಲೆಂಡರ್ ಆಫ್ ಇವೆಂಟ್ಸ್ ಇನ್‌ಸಿಸ್ಟ್ ಮಾಡಬೇಕು ; ಲ್ಯಾಂಡ್ ಅಕ್ವಿಷಿಷನ್ ಆಕ್ಟ್ ಪ್ರಕಾರ ಬಿಲ್ಡ್ ಮಾಡುವುದಕ್ಕೆ ಒಂದು ವರ್ಷದಲ್ಲಿ ಸಾಧ್ಯವಿಲ್ಲವೆಂದು ಹೇಳಿದಿರಿ. ನಮ್ಮ ಅಧಿಕಾರಿಗಳಿಗೆ ಒಂದು ವರ್ಷವಲ್ಲದಿದ್ದರೆ ಎರಡು ವರ್ಷ ಕೊಡಿ, ಮೂರು ವರ್ಷ ಕೊಡಿ, ಆದರೆ 10—15 ವರ್ಷ ತೆಗೆದುಕೊಂಡರೆ ಇದರಲ್ಲಿ ಏನಾದರೂ ಅರ್ಥವಿದೆಯೇ ಎಂದು ಯೋಚನೆ ಮಾಡಬೇಕಾಗುತ್ತದೆ. ಇನ್ನು ಮೇಲ್ಮಟ್ಟದವರು ಈ ವಿಚಾರದಲ್ಲಿ ಒಂದು ಕಾಲದ ಮಿತಿಯನ್ನು ಇಟ್ಟು, ಅದಕ್ಕಿಂತ ಹೆಚ್ಚು ಕಾಲವನ್ನು ತೆಗೆದುಕೊಳ್ಳುವವರಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಒಂದು ರೂಲ್ಸ್ ಮಾಡಿದರೆ ಒಳ್ಳೆಯದು ಎಂದು ತಿಳಿಸುತ್ತೇನೆ.

ಇನ್ನು ಫ್ಯಾಮಿನ್ ರಿಲೀಫ್ ವರ್ಕ್ಸ್ ವಿಚಾರದಲ್ಲಿ ಎಲ್ಲೆಲ್ಲಿ ಮಳೆಯ ಅಭಾವದಿಂದ, ನಾನಾ ಸನ್ನಿವೇಶಗಳಿಂದ ಜನರು ಬರಗಾಲಕ್ಕೆ ತುತ್ತಾಗಿದ್ದಾರೋ ಅವರಿಗೆ ಅನುಕೂಲಮಾಡಿಕೊಡಬೇಕು ಎಂದು ಅಲ್ಲಲ್ಲಿ ಕಾಮಗಾರಿಗಳನ್ನು ಪ್ರಾರಂಭ ಮಾಡುವುದರ ಮೂಲಕ, ಕೆಲಸ ಇಲ್ಲದೆ ಇರುವ ಜನರಿಗೆ ಕೆಲಸ ಕೊಡಬೇಕು ಎಲ್ಲಿ ದನಕರುಗಳಿಗೆ ಫಾಡರ್, ಹುಲ್ಲು ಇಲ್ಲವೋ ಅಂಥಹ ಪ್ರದೇಶಗಳಿಗೆ ಹುಲ್ಲನ್ನು ಒದಗಿಸುವ ಒಂದು ಜವಾಬ್ದಾರಿಯನ್ನು ತೆಗೆದು ಕೊಳ್ಳಬೇಕು ಎಂದು ಒಂದು ಆಕ್ಟ್ ಪಾಸ್ ಮಾಡಿ, ಈ ಸಾಲಿನ ಬಡ್ಜೆಟ್‌ನಲ್ಲಿ ಒಂದು ಅವಕಾಶವನ್ನು ಮಾಡಿದ್ದೀರಿ ಬಹುಶಃ ಅದರಲ್ಲಿ ಕಾಣುವ ಒಂದು ತೊಡಕು ಎಂದರೆ, ಈ ಕಾಮಗಾರಿಯ ಜವಾಬ್ದಾರಿಯನ್ನು ಸರ್ಕಾರದವರು. ಎರಡು ಇಲಾಖೆಯವರಿಗೆ ಕೊಟ್ಟಿದ್ದಾರೆ. ರೆವಿನ್ಯೂ ಇಲಾಖೆಯವರು 64ನೇ ಹೆಡ್ ಪ್ರಕಾರ ಹಣವನ್ನು ತೆಗೆದು ಬಿ. ಡಿ. ಓ. ಗಳಿಗೆ ಕೊಡತಕ್ಕದ್ದು. ಪೇಮೆಂಟ್ ಮಾಡುವ ಜವಾಬ್ದಾರಿ, ಡೆವಲಪ್‌ಮೆಂಟ್ ಇಲಾಖೆಯ ಮುಖಾಂತರ ಗ್ರಾಮ ಸೇವಕರುಗಳಿಗೆ ಕೊಟ್ಟು ಅವರು ಮಾಡಬೇಕೆಂದು ಒಂದು ನಿರೂಪಣೆ ಮಾಡಿದ್ದೀರಿ. ಬಹುಶಃ ಈ ಎರಡು ಇಲಾಖೆಯವರಿಗೆ ಜವಾಬ್ದಾರಿಯನ್ನು ವಹಿಸಿರುವುದರಿಂದ ರೈತರಿಗೆ ಸ್ವಲ್ಪ ಅಲ್ಲಲ್ಲಿ ತೊಂದರೆಯಾಗುತ್ತಿದೆ. ಉದಾಹರಣೆಗೆ ಹೇಳಬೇಕೆಂದರೆ, ನಮ್ಮ ತಾಲ್ಲೋಕಿನ ಒಬ್ಬ ರೆವಿನ್ಯೂ ಅಧಿಕಾರಿ ಒಂದೆರಡು ಸಾವಿರ ರೂಪಾಯಿಗಳನ್ನು ಡ್ರಾಮಾಡಿ, ಬಿ. ಡಿ. ಓ. ಗೆ ಕೊಟ್ಟರು. ಈ ಬಿ. ಡಿ. ಓ. ಮುಂದೆ ಗ್ರಾಮಸೇವಕರಿಗೆ ಕೊಟ್ಟರು. ಇವರು ನಾಮಿನಲ್ ರೋಲ್ ಸಬ್‌ಮಿಟ್ ಮಾಡುವಹಾಗೆ ಇಲ್ಲ. ಇದನ್ನು ಸಬ್‌ಮಿಟ್ ಮಾಡದೆ ಹಣ ಡ್ರಾ ಮಾಡುವುದಕ್ಕೆ ಆಗುವುದಿಲ್ಲ. ಈ ರೀತಿಯಾದರೆ ಮಾರ್ಚ್ 31ರೊಳಗೆ ಸರ್ಕಾರದವರು ರಿಲೀಫ್ ವರ್ಕ್ಸ್‌ಗೆ ಎಷ್ಟು ರೂಪಾಯಿಗಳ ಪರಿಹಾರ ಕೊಡಬೇಕೆಂದು ಮಾಡಿದ್ದರೋ ಅಷ್ಟನ್ನು ಖರ್ಚುಮಾಡುವುದಕ್ಕಾಗುವುದಿಲ್ಲ. ಇದರಿಂದ ಗ್ರಾಮಗಳಲ್ಲಿ ತೊಂದರೆ ಪಡುವ ಜನರಿಗೆ ಸಹಾಯ ಮಾಡಿದಂ ತಾಗುವುದಿಲ್ಲ. ಈ ಹಣದ ಹಂಚಿಗೆ ಎರಡು ಇಲಾಖೆಗಳ ಮಧ್ಯೆ ಸಿಕ್ಕಿಕೊಂಡು, ಇರುವುದರಿಂದ ನೀವು ಇಟ್ಟು ಕೊಂಡಿರುವ ಉದ್ದೇಶವನ್ನು ಪೂರೈಸುವುದಕ್ಕಾಗುವುದಿಲ್ಲ. ಆದ್ದರಿಂದ ಸೂಕ್ತ ಬದಲಾವಣೆಗಳನ್ನು ಮಾಡು ವುದು ಒಳ್ಳೆಯದು. ಕ್ಷಾಮ ಪರಿಹಾರ ಕಾರ್ಯಗಳಲ್ಲಿ ಜನರಿಗೆ ಪರಿಹಾರ ದೊರಕಬೇಕಾದರೆ ಯಾವುದಾದರೂ

(ಶ್ರೀ ಎಂ. ಸಿ. ಬಸಪ್ಪ)

ಒಂದು ಇಲಾಖೆಗೆ ಜವಾಬ್ದಾರಿಯನ್ನು ವಹಿಸಿದರೆ, ನೀವು ಇಟ್ಟಿರುವ ಹಣ ಸರಿಯಾಗಿ ವಿನಿಯೋಗವಾದಂತೆ ಆಗುತ್ತದೆ. ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ, ನನಗೆ ಇಷ್ಟು ಕಾಲ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಸ್ವಾಮಿ, ಅಧ್ಯಕ್ಷ ಮಹಾಶಯರೆ ಈ ರಾಜ್ಯದ ರೆವಿನ್ಯೂ ಇಲಾಖೆ ದೇಶದ ಪ್ರಗತಿಗೆ, ದೇಶದ ಆಗುಹೋಗುಗಳಿಗೆ ಬಹಳ ಮುಖ್ಯವಾದ ಇಲಾಖೆ ಎನ್ನುವ ವಿಚಾರದಲ್ಲಿ ಯಾವ ಸಂಶಯವೂ ಇಲ್ಲ. ರೈತರುಗಳಿಗೆ ಮತ್ತು ಗ್ರಾಮಾಂತರವಾಸಿಗಳಿಗೆ ಬಹಳ ನಿಕಟ ಸಂಬಂಧವಿರತಕ್ಕಂಥ ಒಂದು ಸಂಸ್ಥೆಯೆಂದರೆ, ಒಂದು ಇಲಾಖೆಯೆಂದರೆ ಈ ರೆವಿನ್ಯೂ ಇಲಾಖೆ. ಈ ರೆವಿನ್ಯೂ ಇಲಾಖೆ ಎಲ್ಲಿಯವರೆಗೆ ಅಚ್ಚುಕಟ್ಟಾಗಿ, ಚೆನ್ನಾಗಿ ಕೆಲಸಮಾಡುತ್ತದೋ, ಅಲ್ಲಿಯವರೆಗೆ ರೈತನ ಕ್ಷೇಮಚಿಂತನೆ ಅಚ್ಚುಕಟ್ಟಾಗಿ, ಚೆನ್ನಾಗಿ ಆಗುತ್ತದೆ ಎಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ. ಅದರಲ್ಲೂ ಪ್ರಾಮುಖ್ಯವಾಗಿ ತಾಲ್ಲೋಕ್ ಲೆವೆಲ್‌ನಲ್ಲಿ ಕೆಲಸಕಾರ್ಯಗಳು ಬಹಳ ಚೆನ್ನಾಗಿ ನಡೆಯಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ತಾಲ್ಲೋಕ್ ಆಫೀಸರ್‌ಗಳು ಮತ್ತು ಇತರ ಅಧಿಕಾರಿಗಳು ಬಹುಮಟ್ಟಿಗೆ ಉತ್ತಮ ರೀತಿಯಲ್ಲಿ ಕೆಲಸಮಾಡುತ್ತಾರೆ, ಬಹಳ ದಕ್ಷತೆಯಿಂದ ಕೆಲಸಮಾಡುತ್ತಾರೆ ಎಂದು ಹೇಳುತ್ತೇನೆ. ಆದರೂ ಸಹ ಎಷ್ಟು ದಕ್ಷತೆಯಿಂದ ಕೆಲಸಮಾಡುತ್ತಾರೆ ಎಂದು ನಿರೀಕ್ಷಣೆ ಮಾಡಿದ್ದೆನೋ ಅಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತೇನೆ. ಆದ್ದರಿಂದ ಸರ್ಕಾರದವರು ಈ ವಿಷಯದಲ್ಲಿ ಕಣ್ಣಲ್ಲಿ ಕಣ್ಣು ಇಟ್ಟು ನೋಡಿಕೊಳ್ಳಬೇಕು ಎಂದು ಅಪೇಕ್ಷಿಸುತ್ತೇನೆ.

ತಾಲ್ಲೂಕು ಲೆವೆಲ್ ಅಡ್ಮಿನಿಸ್ಟ್ರೇಷನ್ ವಿಚಾರವಾಗಿ ಹೇಳುವುದಾದರೆ ಪ್ರಥಮತಃ ತಾಲ್ಲೂಕು ಲೆವೆಲ್‌ನಲ್ಲಿ ರೈತನ ಏಳಿಗೆಗೋಸ್ಕರ ಜನಗಳ ಕ್ಷೇಮಕ್ಕೋಸ್ಕರ ಏನು ರಿಕಾರ್ಡ್ ಮಾಡುತ್ತಾರೆ, ಏನು ಕೆಲಸಕಾರ್ಯಗಳನ್ನು ಮಾಡುತ್ತಾರೆ ಅದು ಅನೇಕ ಹಂತಗಳನ್ನು ಹತ್ತಿಕೊಂಡು ಬಂದು ಸರ್ಕಾರದವರಿಗೂ ಕೂಡ ಅದೇ ಒಂದು ಕಟ್ಟುನಿಟ್ಟಾದ ರಿಕಾರ್ಡ್ ಆಗುತ್ತದೆ ಎಂದು ನಾನು ಭಾವಿಸುತ್ತೇನೆ. ತಾಲ್ಲೂಕು ಆಫೀಸಿನಲ್ಲಿ ರೆವೆನ್ಯೂ ಇನ್‌ಸ್ಪೆಕ್ಟರ್ ಏನು ಗ್ರಾಮಾಂತರಗಳಲ್ಲಿ ರೈತರ ಪ್ರಯೋಜನಕ್ಕೋಸ್ಕರ, ರೈತನ ಯೋಗಕ್ಷೇಮಕ್ಕೋಸ್ಕರ, ರಿಕಾರ್ಡ್ ಮಾಡುತ್ತಾರೋ ಅದು ಸರ್ವೇ ಸಾಧಾರಣವಾಗಿ ಇತರ ಹಂತಗಳಲ್ಲಿ ಬದಲಾವಣೆ ಆಗುವುದಿಲ್ಲ. ಅದಕೋಸ್ಕರ ಅಲ್ಲಿ ಏನು ಮಾಡುತ್ತಾರೆ ಎಂಬುದು ಪ್ರಾಮುಖ್ಯವಾದ ವಿಚಾರ. ಒಂದು ಜಮೀನನ್ನು ಹೊಸದಾಗಿ ಗ್ರಾಂಟು ಮಾಡತಕ್ಕ ವಿಚಾರವಾಗಲಿ, ಪೋಡಿ ರಿಕಾರ್ಡ್ ಮಾಡತಕ್ಕ ವಿಚಾರದಲ್ಲಾಗಲಿ ಅಥವಾ ಗ್ರಾಮಕ್ಕೆ ಬೇಕಾದ ಇತರ ಸೌಕರ್ಯದ ವಿಚಾರದಲ್ಲಾಗಲಿ ಗ್ರಾಮದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್ ಏನು ಮಹಜರು ಇತ್ಯಾದಿಗಳನ್ನು ಮಾಡುತ್ತಾರೋ ಅದು ಅಲ್ಲಿ ಕ್ರಮವಾಗಿ ಇರಬೇಕು, ನಿಷ್ಪಕ್ಷಪಾತವಾಗಿ ಇರಬೇಕು, ಸತ್ಯಸಂಧತೆಯಿಂದ ಕೂಡಿರಬೇಕು ಎಂದು ನಾನಾದರೂ ಅಪೇಕ್ಷಿಸುತ್ತೇನೆ. ಈ ದೃಷ್ಟಿಯಿಂದ ರೆವೆನ್ಯೂ ಇನ್‌ಸ್ಪೆಕ್ಟರ್, ತಾಸೀಲ್ದಾರರ ಆಫೀಸಿನಲ್ಲಿ ಕೆಲಸಮಾಡತಕ್ಕಂಥವರು ಯೋಗ್ಯರೂ, ದಕ್ಷರೂ ಆಗಿರಬೇಕು, ನಿಸ್ಪೃಹರೂ ಆಗಿರಬೇಕು, ಸತ್ಯಸಂಧರೂ ಆಗಿರಬೇಕು ಎಂದು ಅಪೇಕ್ಷಿಸುತ್ತೇನೆ. ಅವರು ಹಾಗಿಲ್ಲದೆ, ಅಡಚಣೆ ಆದರೆ, ತೊಂದರೆ ಆದರೆ, ಯಾರಾದರೂ ದಾರಿಬಿಟ್ಟು ಹೋದರೆ, ಅದರಿಂದ ಅಪಾಯ ತಟ್ಟುತ್ತದೆ. ಆದ್ದರಿಂದ ಮೇಲಧಿಕಾರಿಗಳಿಗೆ ಮತ್ತು ಸರ್ಕಾರಕ್ಕೆ ಅವರಮೇಲೆ ನಿಗಾ ಇರಬೇಕು ಎಂದು ಅಪೇಕ್ಷಿಸುತ್ತೇನೆ. ಈ ದೃಷ್ಟಿಯಿಂದ ತಾಲ್ಲೂಕು ಆಫೀಸಿನಲ್ಲಿ ಹೇಗೆ ನಡೆಯುತ್ತಾ ಇದೆ, ಎಷ್ಟರಮಟ್ಟಿಗೆ ದಾಖಲಾತಿಯನ್ನು ಇಟ್ಟಿದ್ದಾರೆ, ಎಷ್ಟರಮಟ್ಟಿಗೆ ಗ್ರಾಮಾಡಳಿತವನ್ನು ನಡೆಸಿಕೊಂಡು ಹೋಗುತ್ತಾ ಇದ್ದಾರೆ ಎನ್ನುವ ಮೇಲ್ವಿಚಾರಣೆಯನ್ನು ಮೇಲ್ಪಟ್ಟ ಅಧಿಕಾರಿಗಳು, ಸಬ್‌ಡಿವಿಷನ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳು, ಡಿವಿಷನಲ್ ಕಮೀಷನರ್ಸ್ ಮತ್ತು ಸರ್ಕಾರದವರು ಕೂಡ ಆಗಾಗ್ಗೆ ಇನ್‌ಸ್ಪೆಕ್ಷನ್ ನಡೆಸಿ ಸರಿಯಾಗಿ ನಡೆಯುತ್ತಿದೆಯೋ ಎಂದು ನೋಡಿಕೊಳ್ಳಬೇಕು. ಎಲ್ಲಿಯಾದರೂ ಒಂದು ಆಫೀಸಿನಲ್ಲಿ ಒಬ್ಬ ಗುಮಾಸ್ತ ಎಡವಿದರೆ, ಅದರ ಪರಿಣಾಮ ದುಷ್ಪರಿಣಾಮವಾಗುತ್ತದೆ, ಅದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ ; ಮತ್ತು ಗ್ರಾಮವಾಸಿಗಳಿಗೆ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಇನ್‌ಸ್ಪೆಕ್ಷನ್ ಮತ್ತು ಚೆಕಿಂಗ್ ಬಹಳ ಚೆನ್ನಾಗಿ ನಡೆಯಬೇಕು ಎಂದು ನಾನು ಅಪೇಕ್ಷಿಸುತ್ತೇನೆ. ನಾನು ಅನೇಕವೇಳೆ ರೆವೆನ್ಯೂ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ತಾಲ್ಲೂಕು ಆಫೀಸಿಗೆ ಸರ್‌ಪ್ರೈಸ್ ವಿಸಿಟ್ಸ್ ಕೊಡಬೇಕು, ಹೇಗೆ ಆಫೀಸ್ ನಡೆಯುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು ಎಂದು ಅವರು ಹಾಗೆ ಮಾಡುತ್ತಾರೆಂದು ನಂಬಿಕೊಂಡಿದ್ದೇನೆ. ಹಿಂದೆ ಮಂತ್ರಿಗಳು, ಉಪಮಂತ್ರಿಗಳು ಇತರೇ ಅಧಿಕಾರಿಗಳು ಎಷ್ಟರಮಟ್ಟಿಗೆ ಆ ಸಂಸ್ಥೆಗಳಿಗೆ ಸರ್‌ಪ್ರೈಸ್ ವಿಸಿಟ್ಸ್ ಕೊಡುತ್ತಾರೆ ಎನ್ನುವ ಪ್ರಶ್ನೆಗೆ ಉತ್ತರವಾಗಿ ಸರ್ವೇ ಸಾಧಾರಣವಾಗಿ ವಿಸಿಟ್ ಕೊಡುತ್ತಾರೆ ಎಂದು ಹೇಳಿದರು. ಆ ಉತ್ತರ ನನಗಾದರೂ ಸಮಾಧಾನಕರವಾಗಿಲ್ಲ. ಯಾವ ಆಫೀಸಿನಲ್ಲಿಯೂ ಕೂಡ ಯಾವ ಕ್ಷಣದಲ್ಲಿ ಯಾವ ಮಂತ್ರಿಗಳು ಬರುತ್ತಾರೊ, ಯಾವ ಅಧಿಕಾರಿಗಳು ಬರುತ್ತಾರೊ, ನಮ್ಮ ಕೆಲಸ ಕಾರ್ಯಗಳನ್ನು ನೋಡುತ್ತಾರೊ ಎನ್ನುವ ಭಯ ಇದ್ದರೆ, ಅಲ್ಲಿಯ ಕೆಲಸ ಅಚ್ಚುಕಟ್ಟಾಗಿ ಆಗುತ್ತದೆ ಎಂದು ನನಗೆ ತೋಚುತ್ತದೆ. ಅನೇಕ ತಾಲ್ಲೂಕು ಆಫೀಸುಗಳಿಗೆ ಸರ್‌ಪ್ರೈಸ್ ವಿಜಿಟ್ ಕೊಡುತ್ತಾ ಇಲ್ಲ. ಹಿಂದೆ ಮಾನ್ಯ ಕಡಿದಾಳ್ ಮಂಜಪ್ಪನವರು ಮಂತ್ರಿಗಳಾಗಿದ್ದಾಗ ಪೇಪರ್‌ನಲ್ಲಿ

ಬರುತ್ತಾ ಇತ್ತು. ಅಲ್ಲಿ ತಾಲ್ಲೂಕು ಆಫೀಸಿಗೆ ಸರ್‌ಪ್ರೈಸ್ ವಿಸಿಟ್ ಕೊಟ್ಟರು, ಇಲ್ಲಿ ಕೊಟ್ಟರು ಎಂದು. ಈ ಸಂದರ್ಭದಲ್ಲಿ ನಾನಾದರೂ ಕೂಡ ಮಾನ್ಯ ರೆವಿನ್ಯೂ ಸಚಿವರು ಹಾಗೆ ತಾಲ್ಲೂಕು ಆಫೀಸುಗಳಿಗೆ ಭೇಟಿ ಕೊಡಬೇಕೆಂದು ಅಪೇಕ್ಷಿಸುತ್ತೇನೆ. ಮೇಲಧಿಕಾರಿಗಳು ಕಡ್ಡಾಯವಾಗಿ ಕೆಳಗಿನ ಆಫೀಸಿಗೆ ಸರ್‌ಪ್ರೈಸ್ ವಿಸಿಟ್ ಕೊಡಬೇಕು. ಆಗಾಗ್ಗೆ ಇನ್‌ಸ್ಪೆಕ್ಷನ್ ಕಾರ್ಯಗಳನ್ನು ಹೆಚ್ಚು ಮುತುವರ್ಜಿಯಿಂದ ನಡೆಸುವಂತೆ ಮಾಡಬೇಕು ಇದರ ಬಗ್ಗೆ ಕಟ್ಟುನಿಟ್ಟಾದ ಸರ್ಕ್ಯುಲರ್ ಕೊಡಬೇಕು ಎಂದು ನಾನಾದರೂ ಸೂಚಿಸುವುದಕ್ಕೆ ಅಪೇಕ್ಷಿಸುತ್ತೇನೆ.

ಹಿಂದೆ ಒಂದು ಗ್ರಾಮಕ್ಕೆ ಜಮಾಬಂದಿಗೆ ಹೋದರೆ ಆ ಗ್ರಾಮಕ್ಕೆ ಸಂಬಂಧಪಟ್ಟ ಸಮಸ್ತ ವಿಚಾರಗಳನ್ನೂ ಆ ಕಾಲದಲ್ಲಿ ನೋಡುತ್ತಾ ಇದ್ದರು. ಪಟೇಲ್, ಶ್ಯಾನುಭೋಗರ ಯೋಗಕ್ಷೇಮವನ್ನೂ ಗ್ರಾಮದವರ ಯೋಗಕ್ಷೇಮವನ್ನೂ ವಿಚಾರಿಸುತ್ತಾ ಇದ್ದರು. ಆ ಊರಿನ ಕೆರೆ, ರಸ್ತೆ, ಬೌಂಡರಿ ಮಾರ್ಕೆಟ್ಟುಗಳು ಇತ್ಯಾದಿ ಇತ್ಯಾದಿ ಅನೇಕ ವಿಚಾರಗಳನ್ನು ವಿಚಾರ ಮಾಡಿ ಯಾವುದಾದರೂ ಲೋಪದೋಷಗಳು ಇದ್ದರೆ ತತ್‌ಕ್ಷಣ ಸರಿಪಡಿಸುತ್ತಾ ಇದ್ದರು, ಇವೊತ್ತಿನ ದಿವಸ ಒಂದು ತಾಲ್ಲೂಕಿನ ಜಮಾಬಂದಿ ಒಂದೆರಡು ಗಂಟೆಗಳೊಳಗೆ ಮುಗಿದು ಹೋಗುತ್ತದೆ. ಈಗಿನ ಜಮಾಬಂದಿಗಳು ಹಿಂದಿನ ಕಾಲದ ಜಮಾ ಬಂದಿ ಹಾಗೆ ನಡೆಯುತ್ತಾ ಇಲ್ಲ. ಈ ಸಬ್‌ಡಿವಿಷನ್ ಆಫೀಸರು ತಮ್ಮ ಸಬ್‌ಡಿವಿಷನ್‌ನಿನ ಒಂದು ತಾಲ್ಲೂಕಿನಲ್ಲಿ ಹುಜೂರು ಜಮಾಬಂದಿ ಮಾಡ ಬೇಕು. ಡೆಪ್ಯೂಟಿ ಕಮಿಷನರು ಜಿಲ್ಲೆಗಳಲ್ಲಿ ಜಮಾಬಂದಿ ಮಾಡಬೇಕು. ಹೀಗೆಯೇ ಡಿವಿಷನಲ್ ಕಮಿಷನರ್ ತಮ್ಮ ಡಿವಿಷನ್‌ನಲ್ಲಿ ಒಂದೆರಡು ತಾಲ್ಲೂಕು ಜಮಾಬಂದಿಯನ್ನು, ರೆವಿನ್ಯೂ ಮಂತ್ರಿಗಳೂ ಕೂಡ ತಾಲ್ಲೂಕು ಆಡಳಿತ ಗ್ರಾಮಾಂತರ ಆಡಳಿತ ಪ್ರತಿಯೊಂದು ಬಾಬಿನಲ್ಲೂ ಹೀಗೆ ನಡೆಯುತ್ತಾ ಇದೆ ಎಂದು ತಿಳಿದುಕೊಳ್ಳುವುದಕ್ಕೆ ಜಮಾ ಬಂದಿಗಳನ್ನು ಒಂದೊಂದು ತಾಲ್ಲೂಕಿನಲ್ಲಿ 2—3 ದಿವಸ ನಡೆಸಿದರೆ ಅದರಿಂದ ಅನುಕೂಲವಾಗುತ್ತದೆ. ಆದ್ದರಿಂದ ಹಿಂದಿನ ಕಾಲದಂಥ ಜಮಾಬಂದಿಗಳು ನಡೆಸಿದರೆ ಒಳ್ಳೆಯದಾಗುತ್ತದೆ ಎಂದು ಭಾವಿಸುತ್ತೇನೆ.

ತಹಸೀಲ್ದಾರರ ವಿಚಾರ ಹೇಳಬೇಕಾಗಿದೆ. ತಾಲ್ಲೂಕು ಲೆವೆಲ್‌ನಲ್ಲಿ ಅವರಿಗೆ ಮನೆಗಳನ್ನು ಕಟ್ಟಿಕೊಟ್ಟಿಲ್ಲ ರೆವಿನ್ಯೂ ಇಲಾಖೆಯಲ್ಲಿ ಅನೇಕ ತಹಸೀಲ್‌ದಾರರಿಗೆ ಮನೆಗಳು ಇಲ್ಲ, ಅಮಲ್ದಾರರ ಕೆಲಸ ಹೆಚ್ಚಾಗಿ ಇರುವುದರಿಂದ ಅವರಿಗೆ ಅಲ್ಲಿಯೇ ಮನೆಗಳು ಇದ್ದರೆ ಒಳ್ಳೆಯದು. ಆದ್ದರಿಂದ ಇತರೇ ಇಲಾಖೆಯವರಿಗೆ ಕೊಟ್ಟಿರುವ ಹಾಗೆ ಅವರಿಗೆ ಮನೆಗಳನ್ನು ಮಾಡಿಸಿಕೊಡಬೇಕು. ಸಾಧಾರಣವಾಗಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ. ಜೀಪುಗಳನ್ನು ಒದಗಿಸಿದ್ದಾರೆ, ತಾಲ್ಲೂಕುಗಳಲ್ಲಿ ಸುತ್ತು ಹೊಡೆದು ಜನರ ಯೋಗಕ್ಷೇಮ ವಿಚಾರಿಸುವ ತಹಸೀಲ್ದಾರರಿಗೆ ಜೀಪು ಸೌಕರ್ಯ ಇಲ್ಲ. ಪೂರ್ವದಲ್ಲಿ ಅವರು ಕುದುರೆಗಳನ್ನು ಇಟ್ಟುಕೊಳ್ಳಬೇಕೆಂದು ಕಡ್ಡಾಯವಾಗಿ ಇತ್ತು. ಅದು ಹೋಯಿತು. ಈಗ ದೇಶದಲ್ಲಿ ಕುದುರೆಗಳೇ ಇಲ್ಲ. ಕುದುರೆ ಇಟ್ಟುಕೊಂಡು ಗ್ರಾಮಾಂತರಗಳಲ್ಲಿ ರೈತನ ಜಮೀನಿನ ಹತ್ತಿರ ಹೋಗುವ ಕಾಲ ಇತ್ತು. ಈಗ ಕುದುರೆ ಇಲ್ಲ, ಜೀಪೂ ಇಲ್ಲ. ಮುರುಕಲು ಸೈಕಲ್ಲಿನಲ್ಲಿ ಹೋದರೆ ಅವರು ರೈತರ ಮೇಲೆ ಏನು ದಕ್ಷತೆ ಬೀರಬಹುದು ? ಆರೀತಿ ದಕ್ಷತೆ ಪ್ರಭಾವ ಬೀರುವುದಕ್ಕಾಗುವುದಿಲ್ಲ. ಹಿಂದೆ ರೆವಿನ್ಯೂ ಇನ್‌ಸ್ಪೆಕ್ಟರಿಗೆ ಇರುವ ಗೌರವ ಈಗ ತಹಸೀಲ್ದಾರರಿಗೆ ಕೊಡುತ್ತಾ ಇಲ್ಲ. ಇದು ಶೋಚನೀಯ ವಿಷಯ. ನಮ್ಮ ಮಿತ್ರರು ಹೇಳಿದ ಹಾಗೆ ಅಮಲ್ದಾರರು ತಾಲ್ಲೂಕು ಮಟ್ಟದ ಅಧಿಕಾರಿಗಳು, ತಾಲ್ಲೂಕಿನ ದೊಡ್ಡ ಅಧಿಕಾರಿಗಳು ಎನ್ನುವ ಭಾವನೆ ಜನರಲ್ಲಿ ಮೂಡಬೇಕು. ಅವರೂ ಕೂಡ ತಾಲ್ಲೂಕಿನ ಉದ್ಧಾರಕ್ಕಾಗಿ ನೇಮಕ ಮಾಡಿರತಕ್ಕಂಥ ಅಧಿಕಾರಿ ಎನ್ನುವ ಭಾವನೆ ಇಟ್ಟುಕೊಳ್ಳಬೇಕು. ತಾಲ್ಲೂಕು ಆಫೀಸಿನಲ್ಲಿ ರಿಕಾರ್ಡುಗಳು ಅಪ್ಟುಡೇಟ್ ಆಗುತ್ತಾ ಇಲ್ಲ. ಇದು ಬಹಳ ಶೋಚನೀಯ.

ರಿಕಾರ್ಡ್ ಆಫ್ ರೈಟ್ಸ್, ರಿಕಾರ್ಡ್ ಆಫ್ ಮ್ಯುಟೇಷನ್ಸ್, ವರ್ಷಾನುಗಟ್ಟಲೆ ಹಾಗೆಯೇ ಆಫೀಸಿನಲ್ಲಿ ಬಿದ್ದಿವೆ. ಇದರಿಂದ ರೈತರಿಗೆ ಬಹಳ ದೊಡ್ಡ ಅಡಚಣೆ ಆಗಿದೆ. ಅಕ್ವಿಸಿಷನ್ ಕೇಸುಗಳು ತೀವ್ರತೆಯಿಂದ ಆಗುತ್ತಾ ಇಲ್ಲ. ಅದಕ್ಕೆ ಅನೇಕ ಕಾರಣಗಳು ಇವೆ. ಅದನ್ನು ಇಲ್ಲಿ ಹೇಳುವುದಕ್ಕೆ ಅವಕಾಶ ಇಲ್ಲ. ಪ್ರಿಂಟಿಂಗ್ ಆಫೀಸಿನಲ್ಲಿ ಅಕ್ವಿಸಿಷನ್ ಕೇಸುಗಳನ್ನು ಪ್ರಿಂಟ್ ಮಾಡಿಕೊಡಲು ವರ್ಷಾನುಗಟ್ಟಲೆ ತೆಗೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ರಾಮನಗರ ತಾಲ್ಲೂಕಿನ ಜಯಪುರ, ನಿಜಯ ಪುರ ಗ್ರಾಮಗಳನ್ನು 30 ವರ್ಷದ ಹಿಂದೆ ಫಾರೆಸ್ಟ್ ಇಲಾಖೆಯಿಂದ ತೆಗೆದುಕೊಂಡರು. ಈ ಗ್ರಾಮಗಳಲ್ಲಿ ರಿಕಾರ್ಡ್ಸ್ ಕ್ರಮ ಕ್ರಮವಾಗಿ ಇಲ್ಲ. ಪೋಡಿ ಸರಿಯಾಗಿ ಮಾಡಿಲ್ಲ. ನಕಾಸೆ ಇಲ್ಲ. ರಿಕಾರ್ಡ್ಸ್ ಆಫ್ ರೈಟ್ಸ್ ಇಲ್ಲ. ಯಾವುದೂ ಇಲ್ಲ. ಇದರ ವಿಚಾರವಾಗಿ ಮಂತ್ರಿಗಳಿಗೆ ಬರೆದು ಕೊಂಡಿದ್ದೇನೆ. ಅವರು ಏರ್ಪಾಡು ಮಾಡುತ್ತೇವೆ ಎಂದು ಒಪ್ಪಿದ್ದಾರೆ. ಎಷ್ಟು ಜಾಗ್ರತೆ ಮಾಡಿಕೊಡಬಹುದೋ ಅಷ್ಟು ಜಾಗ್ರತೆ ಮಾಡಿಕೊಡಬೇಕೆಂದು ಬಯಸುತ್ತೇನೆ. ರೈತರು ಈಗಾಗಲೇ ನಿತ್ರಾಣವಾಗಿದ್ದಾರೆ. ಈ ಕೆಲಸಗಳನ್ನು ಮಾಡದೇ ಇದ್ದರೆ ಅದು ಇನ್ನೂ ನಿತ್ರಾಣವಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಜಾಗ್ರತೆ ಇದನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ. ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಅನೇಕ ತಾಲ್ಲೂಕುಗಳಲ್ಲಿ ಪೋಡಿ ಕೆಲಸ ಆಗಿಲ್ಲ. ಈ ಕೆಲಸ ಬಾಕಿ ಇದೆ.

11-30 A.M.

ಮಾನ್ಯ ಮಿತ್ರರಾದ ಶ್ರೀ ರಂಗೇಗೌಡರು ಒಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರವಾಗಿ ಬೆಂಗಳೂರು ಜಿಲ್ಲೆಯಲ್ಲಿ ಮೂರು ವರ್ಷಕ್ಕಿಂತ ಜಾಸ್ತಿಯಾಗಿರುವ ಪೋಡಿ ರಿಕಾರ್ಡ್ 1386, ಐದು ವರ್ಷಕ್ಕಿಂತ ಜಾಸ್ತಿಯಾಗಿರುವುದು

(ಶ್ರೀ ಟಿ. ಮಾದಯ್ಯ ಗೌಡ)

1758 ಎಂದು ಹೇಳಿದ್ದಾರೆ. ಇದರಿಂದ ಒಂದೊಂದು ತಾಲ್ಲೂಕಿನಲ್ಲಿ ನೂರಾರು ಪೋಡಿ ರಿಕಾರ್ಡ್ಸ್ ಪೆಂಡಿಂಗ್ ಇವೆ. ಹೀಗೆ ಪೆಂಡಿಂಗ್ ಇರುವುದರಿಂದ ಅನಾಹುತ ಏನಾಗುತ್ತದೆ ಎಂಬುದು ಮಾನ್ಯ ಸಚಿವರಿಗೆ ಅರ್ಥವಾಗುತ್ತದೆ. ಅದರ ಕಷ್ಟ ಅವರಿಗೆ ಗೊತ್ತಾಗುತ್ತದೆ.

ಈಗ ತಾಲ್ಲೂಕ ಆಫೀಸುಗಳಲ್ಲಿ ರಾಮನಗರದ ತಾಲ್ಲೂಕ್ ಆಫೀಸ್ ಸುಮಾರು 200 ವರ್ಷಗಳ ಹಿಂದೆ ಕಟ್ಟಿದ್ದು. ಅದರ ರೂಫ್ ಲೆವಲ್ ಬಹಳ ಕೆಳಗಡೆ ಇರುವುದರಿಂದ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ಜೀರ್ಣೋದ್ಧಾರ ಮಾಡಿದರೆ ಬಹಳ ಒಳ್ಳೆಯದು ಎಂದು ನಾನು ಹೇಳುತ್ತೇನೆ. ಇನ್ನು ಚನ್ನಪಟ್ಟಣದ ತಾಲ್ಲೂಕಿನಲ್ಲಿ ಒಂದು ತಿಮ್ಮರಾಜ ಮ್ಯಾನ್‌ಶನಿನಲ್ಲಿ ಈ ಆಫೀಸನ್ನು ಮಾಡಿದ್ದಾರೆ. ಅಲ್ಲಿ ತಡಿಕೆಯ ಗೋಡೆಯನ್ನು ಕಟ್ಟಿದ್ದಾರೆ, ಮತ್ತು ಅಲ್ಲಿ ಚಿತ್ರ ಎಲ್ಲಾ ಬರೆದಿದ್ದಾರೆ. ಈಗ ಇದು ಪೂರ್ತಿಯಾಗಿ ಬಿರುಕು ಬಿದ್ದಿದೆ. ಇದು ಯಾವ ಕಾಲಕ್ಕೆ ಬಿದ್ದುಬಿಡುತ್ತದೋ ಎಂಬ ಭೀತಿ ಬೇರೆ ಇದೆ. ಇದನ್ನು ಇಂಡಿಯಾ ಸರ್ಕಾರದವರು ವಹಿಸಿಕೊಂಡಿದ್ದರಿಂದ ಅವರು ಮಾಡಲಿ, ಎಂದು ಬಿಟ್ಟುಬಿಟ್ಟಿದ್ದಾರೆ. ಇದನ್ನು ರೆವಿನ್ಯೂ ಇಲಾಖೆಯವರು ಪಬ್ಲಿಕ್ ವರ್ಕ್ಸ್‌ನವರು, ಇಂಡಿಯಾ ಸರ್ಕಾರದವರು ಮಾಡಲಿ ಎಂದು ಹೇಳಿ ಬಿಟ್ಟುಬಿಟ್ಟಿದ್ದಾರೆ. ಇದರಿಂದ ಇದನ್ನು ಅಧಿಕಾರಿಗಳ ಹಿತದೃಷ್ಟಿಯಿಂದಾದರೂ ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಈ ಫ್ಯಾಮಿನ್ ರಿಲೀಫ್ ಕೆಲಸಗಳು ಸರಿಯಾದ ಕಾಲಕ್ಕೆ ಬಹಳವಾಗಿ ಆಗುತ್ತಾ ಇಲ್ಲ. ಈ ಕೆಟ್ಟಕಾಲದಲ್ಲಿ ಹಣವನ್ನು ಸರಿಯಾಗಿ ಉಪಯೋಗಿಸಿಕೊಂಡು ಸಹಾಯಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿ ಹುಲ್ಲಿನ ಅಭಾವ ಬಹಳವಾಗಿದೆ. ದನಗಳಿಗೆ ಹುಲ್ಲು ಸಿಗದೆ ಅವುಗಳು ನಿತ್ರಾಣವಾಗಿವೆ ನಮ್ಮ-ರೆವೆನ್ಯೂ ಸಚಿವರು, ದನಗಳಲ್ಲಿ ಪ್ರೀತಿ ಇದ್ದವರು, ಈ ಗೋವುಗಳ ವಿಚಾರದಲ್ಲಿ ಸರಿಯಾದ ನಿಗಾ ಕೊಟ್ಟು ಅದಕ್ಕೆ ಒಂದೊಂದು ಹೋಬಳಿ ಹೆಡ್‌ಕ್ವಾರ್ಟರ್ರ್ಸಿನಲ್ಲೂ ಒಂದೊಂದು ಫಾಡರ್ ಬ್ಯಾಂಕ್ ಮಾಡಿ ಮೇವು ಎಲ್ಲಾ ಹಳ್ಳಿಗಳಿಗೂ ಸಿಗುವಂತೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈರೀತಿ ಮಾಡದೆ ಇದ್ದರೆ, ಮಳೆ ಬಂದಾಗ ರೈತನಿಗೆ ಉಳುವುದಕ್ಕೆ ಹಸುಗಳು ಸಿಕ್ಕಲಿಕ್ಕಿಲ್ಲ, ಮತ್ತು ಜನರಿಗೆ ಒಂದು ಪಾವು ಹಾಲು ಕೂಡ ಕುಡಿಯುವುದಕ್ಕೆ ಸಿಗದಂತಾಗಬಹುದು. ಆದ್ದರಿಂದ ಇಂಥ ಒಂದು ಫಾಡರ್ ಬ್ಯಾಂಕನ್ನು ಎಲ್ಲಾ ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗಳಲ್ಲೂ ಏರ್ಪಾಡು ಮಾಡಬೇಕೆಂದು ನಾನು ಮಾನ್ಯ ಕಂದಾಯ ಮಂತ್ರಿಯವರೊಡನೆ ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri ANNA RAO GANAMUKHI (Afzalpur).—Mr. Speaker, Sir, adverting to this Demand, I should like to offer a few remarks. In the first place............

Sri K. P. REVANNA SIDDAPPA.—There is no quorum, Sir.

(*The quorum Bell was rung and quorum was formed*)

Sri ANNA RAO GANAMUKHI.—Sir, I was saying that land Revenue is a very old and antiquated department. It was occupying the front seat so far, but now, the land revenue as it is realised now, has gone to the back seat. For collecting about Rs. 500 lakhs, we are spending Rs. 128.47 lakhs. This stands no comparison with any other tax which is administered by the State. If you take the sales-tax, for the estimated realisation of 240 lakhs, we are spending Rs. 54.89 lakhs—2¼ per cent we are spending on the collection of sales-tax. But in respect of land revenue, we are spending 20 per cent of the revenue which we are realising by way of land revenue. If you take the Motor vehicle tax, it comes roughly to 3 per cent. Therefore if we compare the realisations or the collection charges of the various taxes which the State administering, I think this is the highest percentage which the State Government is spending 20 per cent of the realisations under land revenue. If we go back, in 1793-94 the

total collection of taxes in the whole of India—the percentage of expenditure incurred in collecting the taxes was 69 per cent. Now the percentage is 8.6 per cent. It means that it has dwindled to such an extent that it stands no comparison with the total collection of taxes by the State Government as also by the other State Governments. Therefore Sir, I should say that this tax is antiquated, not only antiquated, but also inequitous and bears no comparison to the paying capacity of the tax-payer. I think that it should be abolished altogether.

Now if we go to the various scientific methods which are devised now-a-days, we will see that this tax is not based on any scientific basis because it is not following the principle of progressive taxation as we follow in other taxation methods. Therefore, I should say that for the realisation of a paltry sum, we should not maintain such a huge department. If we take the expenses which the general administration department bears on the revenue officers, the divisional commissioners, the deputy commissioners, the assistant commissioners and the tahsildars, then the percentage comes to at least fifty. So, fifty per cent of the expenses have to be borne by the State Government in relation to the taxes which are being realised by the Government. Therefore, I would say that it must be based on some progressive basis. The Chief Minister had promised that the poorer classes should be exempted from this burden. Those farmers who are holding less than five acres of land should be exempted from this taxation. Unless the principle of progression is followed, I do not think the taxation will be equitous.

Now, Sir, going to land reforms, when the Hon'ble Minister for Revenue parted with his food portfolio, I remember to have heard that he would concentrate on Land Reforms Act and that he would pursue it in its various stages. But, I see, Sir, up to this time—although there was so much of delay in passing the Amendment Act and then there was waiting for such a long time, at least the Act was brought into force on 2nd October 1965—I do not know what steps the State Government has taken to bring the Act into operation. What steps it has taken in establishing the land tribunals and the appellate authorities and determination of any area, and surplus land being resumed—all these things have not been done so far.

Sri M. V. KRISHNAPPA.—Everything has been done and everything that has to be done according to the Act is being done. We have appointed tribunals. They must be given one year's time. Step by step the whole process has to be done according to law. I cannot do anything arbitrarily.

Sri ANNA RAO GANAMUKHI.—As far as I know if this process takes so much of time, then, I do not know when 25 lakhs of acres of resumable land will be available and when two lakhs of

(SRI ANNA RAO GANAMUKHI)

acres of surplus land will be available to the Government. Let the Hon'ble Minister give details in his reply, whatever it is. It is stated that for giving compensation, about 34.50 crores are required. I do not know if this amount also will be outside the Plan. Probably the Government is delaying because, there is no money in the Government. Even surplus land for resuming and assigning to the ryots, you require another two crores. Even if you give bonds for the amount exceeding 2,000 then also you say that about 7.50 crores are required in the fourth plan and in the last year of the third plan. We have already finished or completed the Third Plan period and stepping into the Fourth Plan. I do not know how much amount will be provided for implementing this Act and whether 7.50 crores will be made available. If the land is assigned to the deserving people, surplus land and then this non-resumable land if you assign to various tenants, then, I think, to reimburse this amount, you will take about 20 years. So, within that period, the Government has to provide the money to the owners. So the whole position is in a liquid stage. Because, as I know, the Mysore Land Reforms Act and the Rules state that the Government are to determine the ceilings, the area under assured irrigation has to be determined. I do not know whether the Government has determined the area under assured irrigation. Unless you determine that, you cannot say how much land a particular person has got, because various persons may irrigate dry or wet or different kinds of land. There are seven categories of land or classifications of land, from the first to the seventh class. All these classes have to be categorised. Assured irrigation land has to be separated. Then only, ceiling has to be determined. In order to determine the ceiling area, there has to be irrigated land, lands having assured irrigation—that has to be done. Unless this is done, the tribunal cannot function in any way. Even transfers cannot be made. Therefore, I think, unless we expedite the various measures enunciated in the Act, there will not be fixity of tenure and people will not be willing to invest more money on the land. Unless that is done, we cannot produce more. There must be some satisfaction, some safety to the land owners. They do not know how much land will be resumed and how much land will be declared as surplus. It must be declared as early as possible, so that the owners of land and also the tenants may take interest and make investment in the land and help production in the process. Therefore, I have urged that the land reform measures should be given top priority and various measures should be taken under the Land Reforms Act.

Now, Sir, the City survey scheme has not been taken in right earnest. It is stated that it will take during the fourth plan only six city surveys. There are encroachments on Government land and in municipal areas, there is no proper demarcation between revenue

and municipal land. That is why the municipalities give permission for revenue land, and the Revenue Department does not know which land belongs to the Revenue and which to the private people. Therefore, it is very necessary to recover—100 per cent I do not mind. Ten per cent will be borne by the Government. But the cities should be surveyed so that lands available may be demarcated and the Government may be benefited after the land is auctioned. If you make delays in this regard, then all the revenue land will be taken by private people and no land will be left for the Revenue Department to dispose of. I should say that the Panchayats should be the authority to collect land revenue. Why should we spend so much money on the collection ? We have done away with village officers and some concession can be given to Panchayats, so that they can augment their resources.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸಭಾಪತಿಯವರೇ, ಇವತ್ತಿನ ದಿವಸ ನಮ್ಮ ಮುಂದಿರುವ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ದೇಶದಲ್ಲಿ ಸುಮಾರು ಶೇಕಡ 80 ಭಾಗದ ಜನತೆಗೆ ಅತಿ ಅವಶ್ಯಕವಾಗಿ ಬೇಕಾಗಿರತಕ್ಕಂಥಾದ್ದು ಈ ರೆವಿನ್ಯೂ ಇಲಾಖೆ. ಈ ಖಾತೆಯನ್ನು ಹೊತ್ತಿರತಕ್ಕಂಥ ಮಾನ್ಯ ಸಚಿವರು ಕೇಂದ್ರ ಸರ್ಕಾರದ ಆಹಾರದ ಉಪಸಚಿವರಾಗಿ ಅನುಭವ ಪಡೆದು ನಮ್ಮ ರಾಜ್ಯದ ಈ ಪವಿತ್ರವಾದ ಖಾತೆಯನ್ನು ಹೊತ್ತು ಅವರ ಕಾಲದಲ್ಲಿ ರಾಜ್ಯದಲ್ಲಿ ಅನೇಕ ಭೂಹೀನರಿಗೆ ಜಮೀನುಗಳು ಸಿಕ್ಕಿವೆ. ಆದ್ದರಿಂದ ನಾನು ಬಹಳ ಸಂತೋಷದಿಂದ ಅವರಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮಾನ್ಯ ಸ್ನೇಹಿತರಾದಂಥ ಶ್ರೀಮಾನ್ ರೇವಣಸಿದ್ದಪ್ಪನವರಂತಹವರು ಮಾತ್ರ ಅವರ ಖಾತೆಯ ಬಗ್ಗೆ ಟೀಕೆಮಾಡಬಹುದು. ನಾನು ನೋಡಿದ್ದೇನೆ. ಅವರಲ್ಲಿ ಯಾರು ಹೋದರೂ ಕೂಡ, ಯಾವ ಪಕ್ಷದವರೇ ಹೋದರೂ ಕೂಡ ಸ್ವಲ್ಪವೂ ಬೇಜಾರು ಇಲ್ಲದೆ ಅವರ ಕೆಲಸಗಳನ್ನು ಮಾಡಿಕೊಡುತ್ತಿದ್ದಾರೆ. ಅದನ್ನು ನಾನು ಪ್ರತ್ಯಕ್ಷವಾಗಿ ನೋಡಿದ್ದೇನೆ. ನಾನು ಪಕ್ಷದ ವತಿಯಿಂದ ಹೇಳುವುದಾದರೆ ಅವರ ಮೇಲೆ ಯಾವ ರೀತಿಯಲ್ಲಿಯೂ ಆಕ್ಷೇಪಣೆ ಮಾಡುವುದು ಸರಿಯಲ್ಲ. ಒಪ್ಪಿಕೊಳ್ಳತಕ್ಕ ವಿಚಾರವನ್ನು ಅವರು ಒಪ್ಪಿಕೊಳ್ಳಲೇಬೇಕು.

ಇನ್ನು ದರಖಾಸ್ತು ಹಂಚಿಕೆ ವಿಚಾರದಲ್ಲಿ ಕೆಲಸಕಾರ್ಯಗಳು ಇನ್ನೂ ಸ್ವಲ್ಪ ತ್ವರಿತವಾಗಿ ಆಗಬೇಕಾಗಿದೆ. ಮಂತ್ರಿಗಳು ಅವರೇ ಕೆಲವು ಸ್ಥಳಗಳಿಗೆ ಸಂಬಂಧಪಟ್ಟ ಸಿಬ್ಬಂದಿಯವರೊಡನೆ ಮತ್ತು ತಹಸೀಲುದಾರರೊಡನೆ ಹೋಗಿ ಇನ್ನೂ ಸ್ವಲ್ಪ ಜಮೀನು ಹಂಚಿಕೆ ಕಾರ್ಯ ಉಳಿದಿದ್ದರೆ ಅದನ್ನೆಲ್ಲಾ ಪೂರ್ತಿಯಾಗಿ ಹಂಚಿಕೆ ವ್ಯವಸ್ಥೆ ಮಾಡುತ್ತಾರೆಂದು ನಾನು ಆಶಿಸುತ್ತೇನೆ. ರೆವಿನ್ಯೂ ಇಲಾಖೆಗೆ ಸಂಬಂಧವಾಗಿ ನಾನು ಮೊದಲೇ ಹೇಳಿದಹಾಗೆ ಶೇಕಡ 80 ಭಾಗದಷ್ಟು ಜನರ ಕಷ್ಟ ಸುಖಗಳನ್ನು ಕೇಳುವುದಕ್ಕೆ ಇದು ಒಂದು ಅತ್ಯುತ್ತಮವಾದ ಇಲಾಖೆ. ಈ ಇಲಾಖೆಗೆ ಸಂಬಂಧಪಟ್ಟ ತಹಸೀಲುದಾರರು ತಾಲ್ಲೂಕು ಮಟ್ಟದಲ್ಲಿ ಅನೇಕ ವಿಚಾರಗಳನ್ನು ವಿಮರ್ಶೆ ಮಾಡಿದ ಮೇಲೆ ಅವರ ಮುಖಾಂತರ ಸರ್ಕಾರಕ್ಕೆ ಅನೇಕ ಕಾಗದ ಪತ್ರಗಳು ಬರಬೇಕಾಗಿವೆ. ಇವತ್ತು ನಾನು ನೋಡಿದ ಹಾಗೆ ಎಲ್ಲಾ ಇಲಾಖೆಗಳಿಗೂ ಕೂಡ ಜೀಪಿನ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಾರೆ. ಹಿಂದಿನ ಕಾಲದಲ್ಲಿಯೂ ಕೂಡ ಈ ಇಲಾಖೆ ಬಹಳ ಒಳ್ಳೆಯ ಇಲಾಖೆಯೆಂದೆನಿಸಿಕೊಂಡು ಬಂದಿರತಕ್ಕದ್ದಾಗಿದೆ. ಸರ್ಕಾರದವರು ತಹಸೀಲ್ದಾರರಿಗೆ ಇವತ್ತಿನವರೆಗೂ ಜೀಪಿನ ವ್ಯವಸ್ಥೆ ಮಾಡಲಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಶೇಕಡ 80 ಭಾಗದಷ್ಟು ಜನರ ಹೊಂದಾಣಿಕೆ ಕೇವಲ ಒಬ್ಬ ತಹಸೀಲ್ದಾರರ ಮುಖಾಂತರ ಸರ್ಕಾರಕ್ಕೆ ಬರಬೇಕು. ಆಬಗ್ಗೆ ಮಾನ್ಯ ಸಚಿವರು ವಿಚಾರಮಾಡಬೇಕು. ಎಲ್ಲಾ ಇಲಾಖೆಗಳಿಗೂ ಜೀಪಿನ ವ್ಯವಸ್ಥೆ ಮಾಡ ಅದನ್ನು ಇಲಾಖೆಗೆ ಕೊಟ್ಟಿಲ್ಲವೆಂದರೆ ಬಹಳ ಶೋಚನೀಯವಾಗುತ್ತದೆ. ರಾಜ್ಯಕ್ಕೆಲ್ಲಾ ಪೂರ್ತಿ ಒಂದು ಕಾಲದಲ್ಲಿ ಜೀಪುಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲದೇ ಇದ್ದರೂ ಎಲ್ಲೆಲ್ಲಿ ಅವಶ್ಯಕವಿದೆಯೋ ಅಂತಹ ಕಡೆಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ವರ್ಷೇ ವರ್ಷೇ ಜೀಪುಗಳನ್ನು ತಹಸೀಲ್ದಾರರಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಬಿ.ಡಿ.ಓ. ಗಳಿಗೆ ಆ ಸೌಕರ್ಯವನ್ನು ಕೊಟ್ಟಿರುವಾಗ ತಹಸೀಲ್ದಾರರುಗಳಿಗೂ ಆ ಸೌಕರ್ಯವನ್ನು ಕೊಡುವ ಏರ್ಪಾಡು ಮಾಡಬೇಕೆನ್ನುವುದೇನು ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಬಿ.ಡಿ.ಓ. ಗಳಿಗೆ ಅದನ್ನು ಬೇರೆ ಕ್ರಮದಲ್ಲಿ ಕೊಟ್ಟಿದ್ದಾರೆ. ಬಿ.ಡಿ.ಓ. ಮತ್ತು ತಹಸೀಲ್ದಾರರಿಗೆ ಸಂಪರ್ಕ ಹೆಚ್ಚಾಗಿದೆಯೆಂಬುದನ್ನು ನಾವು ಮರೆಯುವ ಹಾಗಿಲ್ಲ. ಆದುದರಿಂದ ಅವರಿಗೂ ಆ ಸೌಕರ್ಯವನ್ನು ಕೊಡುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಇನ್ನು ಈಗ ರೆವಿನ್ಯೂ ಇಲಾಖೆಯಲ್ಲಿ ಅನೇಕ ಕಾರಣಗಳಿಂದ ಕಾಗದ ಪತ್ರಗಳ ಇತ್ಯರ್ಥ ತಕ್ಷಣ ಆಗುವುದಿಲ್ಲ ವೆಂಬ ಕೂಗು ಇದೆ. ಇವತ್ತು ಯಾವುದೇ ಒಂದು ಕಾಗದ ಪತ್ರವಾಗಲೀ ಅದು ರೆವಿನ್ಯೂ ಆಫೀಸಿನಿಂದ ರೆವಿನ್ಯೂ ಇನ್‌ಸ್ಪೆಕ್ಟರಿಗೆ, ರೆವಿನ್ಯೂ ಇನ್‌ಸ್ಪೆಕ್ಟರಿನಿಂದ ತಹಸೀಲ್ದಾರರಿಗೆ, ತಹಸೀಲ್ದಾರನಿಂದ ಅಸಿಸ್ಟೆಂಟ್ ಕಮಿಷನರಿಗೆ ಅಸಿಸ್ಟೆಂಟ್ ಕಮಿಷನರಿಂದ ಜಿಲ್ಲಾಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಿಂದ ಡಿವಿಜನಲ್ ಕಮಿಷನರಿಗೆ— ಹೀಗೆ ಹೋಗುತ್ತಿರುತ್ತದೆ. ಡಿವಿಜನಲ್ ಕಮಿಷನರ್ ಎಂದು ಏನು ಆಫೀಸ್ ಇದೆ ಅಲ್ಲಿ ವರ್ಷಾನುಗಟ್ಟಲೆ ಕಾಗದ ಪತ್ರಗಳು ತಡವಾಗುತ್ತವೆ. ಆದ್ದರಿಂದ ಹೆಚ್ಚಿನ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕು. ಡಿವಿಜನಲ್ ಕಮಿಷನರ್ ವಿಭಾಗವನ್ನು ರದ್ದುಪಡಿಸಬೇಕು. ಡಿವಿಜನಲ್ ಕಮಿಷನರ್ ಆಫೀಸಿನ ಸಿಬ್ಬಂದಿವರ್ಗವನ್ನು ಜಿಲ್ಲಾಧಿಕಾರಿಗಳಿಗೆ ಸ್ವಲ್ಪ, ಸೆಕ್ರೆಟೇರಿಯಟ್ಟಿಗೆ ಸ್ವಲ್ಪ ತೆಗೆದುಕೊಂಡರೆ ತ್ವರಿತವಾಗಿ ಇರತಕ್ಕ ಕಾಗದ ಪತ್ರಗಳು ವಿಲೇವಾರಿಯಾಗಬಹುದು ಎಂಬುದಾಗಿ ನನಗನ್ನಿಸುತ್ತದೆ. ಅದನ್ನು ಸಚಿವರು ವಿಚಾರಮಾಡಬೇಕು. ಒಟ್ಟಿನಲ್ಲಿ ಡಿವಿಜನಲ್ ಕಮಿಷನರ್ ವಿಭಾಗಗಳನ್ನು ತೆಗೆದುಹಾಕಬೇಕು. ಇನ್ನು ಕೆಲವು ಕಡೆಗಳಲ್ಲಿ ಸ್ಪೆಷಲ್ ಡೆಪ್ಯುಟಿ ಕಮಿಷನರುಗಳನ್ನು ನೇಮಕಮಾಡಿದ್ದಾರೆ. ಈಗ ಅವರ ಕಾರ್ಯವನ್ನು ರಾಜ್ಯದಲ್ಲಿ ಪೂರೈಸಬೇಕಾಗಿ ಬಂದಿದೆ ಈ ಹುದ್ದೆಗಳನ್ನೂ ಕೂಡ ತೆಗೆದುಹಾಕಬೇಕು. ಅಲ್ಲಿರತಕ್ಕ ಸಿಬ್ಬಂದಿಯನ್ನು ಜಿಲ್ಲಾಧಿಕಾರಿಗಳಿಗೆ ಮತ್ತು ಸೆಕ್ರೆಟೇರಿಯಟ್ಟಿಗೆ ತೆಗೆದುಕೊಂಡರೆ ಬಹುಶಃ ಒಂದೇ ಜಿಲ್ಲಾಧಿಕಾರಿಗಳು ಈ ಕೆಲಸಗಳನ್ನು ಮಾಡಬಹುದು, ಸರ್ಕಾರಕ್ಕೂ ಕೂಡ ಹಣದ ಉಳಿತಾಯವಾಗಬಹುದು. ಸಲೀಸಾಗಿ ಅರ್ಜಿಗಳೂ ಸಹ ವಿಲೇವಾರಿಯಾಗ ಬಹುದು ಎಂಬುದಾಗಿ ನಾನು ಹೇಳುತ್ತೇನೆ. ಮಂತ್ರಿಗಳು ಇದನ್ನೂ ಕೂಡ ವಿಚಾರಮಾಡಿ ಸರ್ಕಾರದವರು ಅವರ ಅಭಿಪ್ರಾಯವನ್ನು ಆಬಗ್ಗೆ ತಿಳಿಸುತ್ತಾರೆಂದು ನಾನು ಆಶಿಸುತ್ತೇನೆ.

ಇನ್ನು ರೆವಿನ್ಯೂ ಇನ್‌ಸ್ಪೆಕ್ಟರುಗಳ ವಿಚಾರವಾಗಿ ಪ್ರಸ್ತಾಪಮಾಡುವುದಾದರೆ ಅವರ ಮನೆಗಳಲ್ಲಿಯೆ ಅವರ ಆಫೀಸು ಆಗಿರುತ್ತದೆ. ಏನಾದರೂ ತಹಸೀಲ್‌ದಾರ ಅಥವಾ ಷೇಕ್‌ದಾರ ರೈತರಿಗೆ ಮನೆಗೇ ಬನ್ನಿ ಎಂದು ಹೇಳಿದರೆ ರೈತನಾದವನು ಅವನ ಕೆಲಸಮಾಡಿಸಿಕೊಂಡು ಬರುವುದಕ್ಕೆ ಅವರ ಮನೆಗೇ ಹೋಗಬೇಕಾಗು ತ್ತದೆ. ಇದರಿಂದ ಪರಿಸ್ಥಿತಿ ಸರಿಹೋಗುವುದಿಲ್ಲ. ಏಕೆಂದರೆ, ರೈತ ಅವರ ಮನೆಗೆ ಹೋದಾಗ್ಗೆ ಅವರ ಮನಸ್ಸು ಹೇಗಿರುತ್ತದೋ ಗೊತ್ತಾಗುವುದಿಲ್ಲ. ರೈತ ಅಲ್ಲಿಯೇ ಘಂಟೆಗಳ ತನಕ ಕೂತಿರುತ್ತಾನೆ. ಇದರಿಂದ ಅವನ ಕೆಲಸ ನ್ಯಾಯವಾಗಿ ಬಗೆಹರಿಯುವುದಿಲ್ಲ. ಅಲ್ಲಿ ಷೇಕ್‌ದಾರರಿಗೆ ಏನಾದರೂ ವ್ಯವಸ್ಥೆ ಮಾಡಬೇಕಾಗಿ ಬರುತ್ತದೆ. ಲಂಚದ ವ್ಯವಸ್ಥೆಯಾದರೂ ಮಾಡಬೇಕಾಗುತ್ತದೆ. ಅದನ್ನು ನಾನು ಇಲ್ಲಿ ಹೇಳಬೇಕಾದುದೇನಿಲ್ಲ. ಆದ್ದರಿಂದ ಪ್ರತಿಯೊಂದು ಹೆಡ್‌ಕ್ವಾರ್ಟರ್‌ನಲ್ಲಿಯೂ ತಾಲ್ಲೂಕು ಆಫೀಸಿಗೆ ಬಹಳ ಹತ್ತಿರವಿರುವ ಹಾಗೆ ರೆವಿನ್ಯೂ ಇನ್‌ಸ್ಪೆಕ್ಟರುಗಳ ಆಫೀಸನ್ನು ತೆರೆಯಬೇಕು. ಹೋಬಳಿ ಏನಾದರೂ ದೂರದಲ್ಲಿದ್ದರೆ ಅಲ್ಲಿಯೇ ರೆವಿನ್ಯೂ ಇನ್‌ಸ್ಪೆಕ್ಟರ್ ಆಫೀಸು ಇರುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಇಷ್ಟ ಪಡುತ್ತೇನೆ.

ಇನ್ನು ಪಶುವೈದ್ಯ ಇಲಾಖೆಯ ವಿಷಯದಲ್ಲಿ ಪ್ರಸ್ತಾಪ ಮಾಡುತ್ತೇನೆ. ಭದ್ರಾವತಿ ಇವತ್ತು ಬೆಳೆಯು ತ್ತಿದೆ. ಸುಮಾರು 75 ಸಾವಿರ ಜನಸಂಖ್ಯೆ ಇದೆ. ಶಿವಮೊಗ್ಗಾದಲ್ಲಿಯೂ ಕೂಡ ಅಷ್ಟೇ ಪ್ರಜಾಸಂಖ್ಯೆ ಇದೆ. ಇವೆರಡನ್ನೂ ಸೇರಿಸಿ ಒಂದು ಕಾರ್ಪೊರೇಷನ್ ಮಾಡಬೇಕೆಂಬ ಯೋಜನೆ ಸರ್ಕಾರದಲ್ಲಿ ನಡೆಯುತ್ತಾ ಇದೆ ಅದು ಆದರೆ ಬಹಳ ಸಂತೋಷ. ಇವೆರಡರ ಮಧ್ಯೆ ಇರತಕ್ಕ ಜೇಡಿಕಟ್ಟೆ ಹತ್ತಿರ ಹಾಲಿನ ಕೇಂದ್ರಗಳನ್ನು ತೆರೆಯಬೇಕು ಎಂಬುದಾಗಿ ಬಡ್ಜೆಟ್ಟಿನಲ್ಲಿ ಹಣವನ್ನೊದಗಿಸಿ ಅದನ್ನು ಮಂಜೂರು ಮಾಡಿ ಈಗ ಆ ಜಾಗವನ್ನು ತೆಗೆದುಕೊಂಡಿದ್ದಾರೆ. ಆದರೆ ಅದು ಇವತ್ತಿಗೂ ಇನ್ನೂ ಅಲ್ಲಿ ಕಾರ್ಯಗತವಾಗಿದೆಯೆಂದು ನನಗನ್ನಿಸುವುದಿಲ್ಲ. ಆದ್ದರಿಂದ ಅಲ್ಲಿ ಜಾಗ್ರತೆಯಾಗಿ ಹಾಲಿನ ಕೇಂದ್ರಗಳನ್ನು ತೆರೆಯಲು ಸಚಿವರು ಪ್ರಯತ್ನಿಸಬೇಕೆಂದು ನಾನು ಈ ಸಮಯದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಭದ್ರಾವತಿ ತಾಲ್ಲೂಕಿನ ಹತ್ತಿರ ಹೊಳೆ ಹೊನ್ನೂರು ಎಂಬುದು 5 ಸಾವಿರ ಪ್ರಜಾಸಂಖ್ಯೆ ಇರತಕ್ಕ ಸ್ಥಳ. ಅದು ಒಂದು ದೊಡ್ಡ ಹೋಬಳಿ.

12-00 NOON.

ಅಲ್ಲಿ ಒಂದೇ ಒಂದು ಪಶುವೈದ್ಯ ಶಾಲೆ ಇದೆ. ಅಲ್ಲಿ ಮೊದಲು ಇದ್ದಂತಹ ಆಸ್ಪತ್ರೆಯನ್ನು ಯಾವ ಕಾರಣದಿಂದ ವರ್ಗಾವಣೆ ಮಾಡಿದರೋ ಗೊತ್ತಿಲ್ಲ. ಅದರ ಬಗ್ಗೆ ರೆಕಾರ್ಡ್ ಕೂಡ ನಡೆದಿದೆ. ಅದಕ್ಕಾಗಿ ಸರ್ಕಾರದವರು ಅಥವಾ ಸಂಬಂಧಪಟ್ಟ ಇಲಾಖೆಯವರು ದಯವಿಟ್ಟು ಹೊಳೆ ಹೊನ್ನೂರಿಗೆ ಒಂದು ಪಶು ವೈದ್ಯದ ಆಸ್ಪತ್ರೆಯನ್ನು ಮಂಜೂರು ಮಾಡಿ ಕೊಡಬೇಕೆಂದು ನಾನು ತಿಳಿಸುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಚಾರ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಮಲ್ಲಿಗೇನಹಳ್ಳಿ ಎಂಬ ಗ್ರಾಮದ ಹತ್ತಿರ ಸ. ನಂ. 12ರಲ್ಲಿ ಇದ್ದಂತಹ 100 ಜನಕ್ಕೆ ಗೋಮಾಳದ ಜಮೀನನು ಖಾಸಗೀ ಜನಗಳಿಗೆ ಒಬ್ಬೊಬ್ಬರಿಗೆ 2 ಎಕರೆಯಂತೆ 5 ವರ್ಷ ಆಯಿತು. ಅದಕ್ಕೆ ಮಂಜೂರಾತಿಯನ್ನು ಕೊಟ್ಟಿದ್ದಾರೆ. ಮತ್ತು ಸಾಗುವಳಿ ಚೀಟಿಯನ್ನೂ ಕೊಟ್ಟಿದ್ದಾರೆ. ಆ ಜನಗಳು ಈಗ 5 ವರ್ಷಗಳಿಂದ ಕಂದಾಯವನ್ನು ಕೂಡ ಕೊಡುತ್ತಿದ್ದಾರೆ. ಆದರೆ ಈಗ ಆ ಜಮೀನಿನ ಬಗ್ಗೆ ಅರಣ್ಯ ಇಲಾಖೆಯವರು ಸ್ವಲ್ಪ ಕ್ವೈರಿ ಹಾಕಿದ್ದಾರೆ. ಅದಕ್ಕೆ ಸಂಬಂಧಪಟ್ಟ ಫೈಲು ಜಿಲ್ಲಾಧಿಕಾರಿಗಳ ಆಫೀಸಿನಿಂದ ಡಿವಿಜನಲ್ ಕಮಿಷನರ ಆಫೀಸಿಗೆ ಓಡಾಡುತ್ತಿದೆ. ಈರೀತಿ ಮಾಡುವುದರಿಂದ ಏನು ಪ್ರಯೋಜನ ? ಭೂಮಿಯನ್ನ ಕೊಟ್ಟಮೇಲೆ ಅದನ್ನ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅವರು ಈಗಾಗಲೇ 5 ವರ್ಷಗಳಿಂದ ಕಂದಾಯ ಕಟ್ಟಿದ್ದಾರೆ. ಈಗ 5 ವರ್ಷಗಳಿಂದ ಆ ಜಮೀನಿನಲ್ಲಿ ಫಸಲನ್ನ ಬೆಳೆದಿದ್ದರೆ ಎಷ್ಟು ಆಹಾರ ಉತ್ಪತ್ತಿಯಾಗುತ್ತಿತ್ತು ಎಂಬುದನ್ನ ನಾವು ವಿಚಾರ ಮಾಡಬೇಕಾಗಿದೆ. ಈಗ ಈ ಸಭೆಯಲ್ಲಿ ಅರಣ್ಯ ಶಾಖೆಯ ಮಂತ್ರಿಗಳೂ ಇದ್ದಾರೆ. ನಾನು ಅವರಿಗೂ ಈ ವಿಷಯವನ್ನ ತಿಳಿಸಿದ್ದೇನೆ. ಮಾನ್ಯ ರೆವಿನ್ಯೂ ಸಚಿವರು ಈ ಬಗ್ಗೆ ಸ್ವಲ್ಪ ನಿಗಾ ಕೊಟ್ಟು ಆ ಫೈಲು ಎಲ್ಲಿ ಹೂತುಕೊಂಡಿದೆ ಎಂಬುದನ್ನು ವಿಚಾರಮಾಡಿ ಅದನ್ನ ತರಿಸಿ ತಕ್ಷಣ ಆ ಜಮೀನಿನ ಬಗ್ಗೆ ಇರುವಂತಹ ಕ್ವೈರಿಯನ್ನ ಸರಿಪಡಿಸಿ ಆ ರೈತರು ಜಮೀನಿನಲ್ಲಿ ವ್ಯವಸಾಯ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಅದರಲ್ಲಿ ಆಹಾರವನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ಬೇಗ ಬಗೆಹರಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನ ಮುಗಿಸುತ್ತೇನೆ.

Mr. DEPUTY SPEAKER.—The House will now rise and will meet again at 3 P.M.

The House adjourned for Recess at Three Minutes past Twelve of the Clock and met again at Three of the Clock.

[MR. SPEAKER in the Chair]

INTRODUCTION OF BILLS

Mr. SPEAKER.—Bills for introduction.

Sri M. V. KRISHNAPPA.—Sir, I beg to introduce the Mysore Stamp (Amendment) Bill, 1966.

Mr. SPEAKER.—The Mysore Stamp (Amendment) Bill, 1966 is introduced.*

Sri R. M. PATIL.—(Minister for Municipal Administration).—Sir, I beg to introduce the Mysore Urban Development Boards Bill, 1966.

Mr. SPEAKER.—The Mysore Urban Development Boards Bill, 1966 is introduced.

Sri R. M. PATIL.—I beg to introduce the Mysore Industrial Areas Development Bill, 1966.

---

*Introduced upon the recommendation of the Governor.